ಕರ್ನಾಟಕ ವಿಧಾನಸಭೆ

ಶುಕ್ರವಾರ 7ನೇ ಜನವರಿ 2011ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 10.00 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯ ರವರು ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ

ವಿಷಯ: ಶ್ರೀ ಕೆ.ಎಂ. ಕೃಷ್ಣಮೂರ್ತಿ, ಮಾಜಿ ಸಚಿವ ಶ್ರೀ ಎಂ. ರಾಜಶೇಖರಮೂರ್ತಿ, ಮತ್ತಿತರ ನಿಧನದ ಬಗ್ಗೆ

ಸಭಾಧ್ಯಕ್ಷರು:

ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಕೆ.ಎಂ. ಕೃಷ್ಣಮೂರ್ತಿ, ಮಾಜಿ ಸಚಿವರು ಮತ್ತು ರಾಜ್ಯಸಭೆಯ ಸದಸ್ಯರಾಗಿದ್ದ ಶ್ರೀ ಎಂ. ರಾಜಶೇಖರಮೂರ್ತಿ, ಮಾಜಿ ಸಚಿವರುಗಳಾದ ಶ್ರೀ ಕೆ.ಎಸ್. ಬೀಳಗಿ, ಶ್ರೀ ಅಶ್ವತ್ಥನಾರಾಯಣ ರೆಡ್ಡಿ, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಶ್ರೀ ಜೆ.ಎಲ್. ಕಬಾಡೆ, ಶ್ರೀ ಕೊಗಳಿ ಕರಿಬಸವನಗೌಡ, ಶ್ರೀ ಎಸ್.ಬಿ. ಮದನ್ ಲಾಲ್ ಹಾಗೂ ಪದ್ಮಭೂಷಣ ಡಾ: ಪುಟ್ಟರಾಜ್ ಗವಾಯಿ, ಹಿರಿಯ ಪತ್ರಕರ್ತರಾಗಿದ್ದ ಶ್ರೀ ಕೆ. ಶ್ರೀಧರಾಚಾರ್, ಚಲನಚಿತ್ರ ಹೆಸರಾಂತ ನಿರ್ದೇಶಕರಾಗಿದ್ದ ಶ್ರೀ ಬಿ.ಎಸ್. ರಂಗಾ ಮತ್ತು ಮೈಸೂರು ಬಳಿ ಇರುವ ಉಂಡಬತ್ತಿನ ಕೆರೆಯ ದುರಂತದಲ್ಲಿ ಸಾವಿಗೀಡಾದ ಸುಮಾರು 27 ಜನ ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ

ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಕೆ.ಎಂ. ಕೃಷ್ಣಮೂರ್ತಿ ಅವರು ದಿನಾಂಕ: 27.05.1949ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರಲ್ಲದೆ ವೃತ್ತಿಯಲ್ಲಿ ಕೃಷಿಕರಾಗಿದ್ದರು. ದಿವಂಗತರು 1986ರಲ್ಲಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು 1994 ರಿಂದ 2010 ರವರೆಗೆ ಸತತವಾಗಿ ನಾಲ್ಕು ಬಾರಿ ಕಡೂರು ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದ ಒಬ್ಬ ಸೃಜನಶೀಲ ಮತ್ತು ಆತ್ಮೀಯ ಸ್ನೇಹಿತರನ್ನು ಕಳೆದುಕೊಂಡಂತಾಗಿದೆ.

ಶ್ರೀಯುತರು ದಿನಾಂಕ: 17.07.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಎಂ. ರಾಜಶೇಖರ ಮೂರ್ತಿ

ರಾಜ್ಯಸಭೆಯ ಸದಸ್ಯರಾಗಿದ್ದ ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಎಂ. ರಾಜಶೇಖರ ಮೂರ್ತಿ ಇವರು 10ನೇ ಮೇ, 1922ರಲ್ಲಿ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಮಾಲಂಗಿ ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ಶ್ರೀಯುತರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಶ್ರೀ ರಾಜಶೇಖರ ಮೂರ್ತಿಯವರು ಒಂದರಿಂದ ಐದನೆಯ ವಿಧಾನಸಭೆಗೆ ಸತತವಾಗಿ ಆಯ್ಕೆಗೊಂಡಿದ್ದಲ್ಲದೆ, ಒಂಭತ್ತನೇ ವಿಧಾನಸಭೆಗೂ ಸಹ ಪುನರಾಯ್ಕೆಗೊಂಡಿದ್ದರು. ಐದು ಹಾಗೂ ಒಂಭತ್ತನೇ ವಿಧಾನಸಭೆಯ ಅವಧಿಯಲ್ಲಿ ಕ್ರಮವಾಗಿ ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕಂದಾಯ, ಹಣಕಾಸು ಖಾತೆಯನ್ನು ನಿರ್ವಹಿಸಿರುತ್ತಾರೆ. ರಾಜ್ಯದಲ್ಲಿ ಹಣಕಾಸು ಸಚಿವರಾಗಿ ಉತ್ತಮ ಸೇವೆ ನಿರ್ವಹಿಸಿದ ಕೀರ್ತಿ ಅವರದ್ದಾಗಿರುತ್ತದೆ. 1994ರಿಂದ ಸತತವಾಗಿ ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿದ್ದ ಶ್ರೀಯುತರು ಕೇಂದ್ರ ಸರ್ಕಾರದ ಹಣಕಾಸು, ಭೂಸಾರಿಗೆ ರಾಜ್ಯ ಸಚಿವರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಇವರು ಸುಮಾರು ಐದು ದಶಕಗಳ ಕಾಲ ಸಕ್ರಿಯವಾಗಿ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಲ್ಲದೆ ಎಲ್ಲಾ ಪಕ್ಷಗಳಲ್ಲಿಯೂ ಆತ್ಮೀಯ ಸ್ನೇಹಿತರನ್ನು ಹೊಂದಿದ್ದರು. ಶ್ರೀಯುತರ ನಿಧನದಿಂದ ಒಬ್ಬ ಸೃಜನಶೀಲ ಹಿರಿಯ ನಾಯಕರನ್ನು ಕಳೆದುಕೊಂಡಂತಾಗಿದೆ.

ಶ್ರೀಯುತರು ದಿನಾಂಕ: 06.12.2010ರಂದು ನಿಧನ ಹೊಂದಿರುತ್ತಾರೆ

ಶ್ರೀ ಕೆ.ಎಸ್. ಬೀಳಗಿ

ಶ್ರೀ ಕೆ.ಎಸ್. ಬೀಳಗಿ ಅವರು 2ನೇ ಫೆಬ್ರವರಿ, 1929ರಲ್ಲಿ ಬೀಳಗಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ನ್ಯಾಯವಾಧಿಯಾಗಿದ್ದರಲ್ಲದೆ ಸಮಾಜ ಸೇವಕರೂ ಆಗಿದ್ದರು. ದಿವಂಗತರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಶ್ರಮಿಸಿರುತ್ತಾರೆ ಮತ್ತು ಕರ್ನಾಟಕ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು 8ನೇ ಮತ್ತು 10ನೇ ವಿಧಾನಸಭೆಗೆ ಬ್ಯಾಡಗಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. 1994 ರಿಂದ 1996ರವರೆಗೆ ಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು ದಿನಾಂಕ: 17.12.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಅಶ್ವತ್ಥನಾರಾಯಣ ರೆಡ್ಡಿ

ಶ್ರೀ ಅಶ್ವತ್ಥನಾರಾಯಣ ರೆಡ್ಡಿಯವರು ದಿನಾಂಕ: 7ನೇ ಸೆಪ್ಟೆಂಬರ್, 1935ರಲ್ಲಿ ಜನಿಸಿದ್ದು, ಪದವೀಧರರಾಗಿದ್ದರಲ್ಲದೇ ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಾಗಿ, ಸಮಾಜ ಸೇವಕರಾಗಿದ್ದರು ಮತ್ತು ಕಾರ್ಮಿಕ ಸಂಘವನ್ನು ಸಂಘಟಿಸಿದ್ದರು.

ಶ್ರೀಯುತರು ಹತ್ತನೇ ವಿಧಾನಸಭೆಗೆ ವರ್ತೂರು ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದರು ಹಾಗೂ ಅದೇ ಅವಧಿಯಲ್ಲಿ ಗೃಹ ಖಾತೆ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 12.11.2010ರಂದು ನಿಧನ ಹೊಂದಿರುತ್ತಾರೆ.

ಶ್ರೀಮತಿ ಬಿ.ಎಲ್. ಸುಬ್ಬಮ್ಮ

ಶ್ರೀಮತಿ ಬಿ.ಎಲ್. ಸುಬ್ಬಮ್ಮ ರವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, 1952ರಲ್ಲಿ ಮೊದಲನೇ ವಿಧಾನಸಭೆಗೆ ಚಿಕ್ಕಮಗಳೂರು ಕ್ಷೇತ್ರದಿಂದ ಪ್ರಥಮ ಮಹಿಳಾ ಶಾಸಕಿಯಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ನಂತರ 1962ರಲ್ಲಿ ಪುನರಾಯ್ಕೆಗೊಂಡಿದ್ದರು.

ಶ್ರೀಮತಿಯವರು ದಿನಾಂಕ: 29.07.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಜೆ.ಎಲ್. ಕಬಾಡೆ

ಶ್ರೀ ಜೆ.ಎಲ್. ಕಬಾಡೆ ರವರು 25ನೇ ಜನವರಿ, 1925ರಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ವ್ಯಾಪಾರಸ್ಥರಾಗಿದ್ದರು. ಶ್ರೀಯುತರು 1952ರಲ್ಲಿ ಬಾಂಬೆ ವಿಧಾನಸಭೆಗೆ ಆಯ್ಕೆಯಾಗಿದ್ದರಲ್ಲದೇ ಮೈಸೂರು ರಾಜ್ಯದ ಎರಡನೇ, ಮೂರನೇ ಹಾಗೂ ಐದನೇ ವಿಧಾನಸಭೆಗೆ ಬೆಳ್ಗೊಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕಾರ್ಮಿಕ ಸಂಘಟನೆಯ ಅಧ್ಯಕ್ಷರಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 25.08.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಕೊಗಳಿ ಕರಿಬಸವನಗೌಡ

ಶ್ರೀ ಕೆ. ಕರಿಬಸವನಗೌಡ ರವರು 01ನೇ ಜುಲೈ, 1939ರಲ್ಲಿ ಹರಪನಹಳ್ಳಿ ತಾಲ್ಲೂಕು ಕೊಗಳಿ ಗ್ರಾಮದಲ್ಲಿ ಜನಿಸಿ, ಬಿ.ಎ.ಪದವೀಧರರಾಗಿದ್ದು, ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಕೊಟ್ಟೂರು ಶಾಲೆಯಲ್ಲಿ ಪ್ರಾಧ್ಯಾಪಕರಾಗಿ

ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ಹಡಗಲಿ ಕ್ಷೇತ್ರದಿಂದ ಆರನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 19.11.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಎಸ್.ಬಿ. ಮದನ್‌ಲಾಲ್

ಶ್ರೀ ಎಸ್.ಬಿ. ಮದನ್‌ಲಾಲ್ ಅವರು ದಿನಾಂಕ: 15ನೇ ಮೇ, 1945ರಲ್ಲಿ ಬೀದರ್‌ನಲ್ಲಿ ಜನಿಸಿ, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದರಲ್ಲದೇ ಹಿಂದುಳಿದ ವರ್ಗದ ಜನರಿಗೆ ಕಾನೂನು ಸಲಹೆಗಾರರಾಗಿದ್ದರು. ಆರನೇ ವಿಧಾನಸಭೆಗೆ 1978ರಲ್ಲಿ ಹುಳ್ಸೂರು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀಯುತರು ದಿನಾಂಕ: 28.08.2010ರಂದು ನಿಧನ ಹೊಂದಿರುತ್ತಾರೆ.

ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿ

ಪದ್ಮಭೂಷಣ ಡಾ: ಪುಟ್ಟರಾಜ್ ಗವಾಯಿ ಅವರು 1914ನೇ ಮಾರ್ಚ್ 3ರಂದು ರೇವಣ್ಣಯ್ಯ ಮತ್ತು ಸಿದ್ದಮ್ಮನವರ ಪುತ್ರರಾಗಿ ಪುಟ್ಟರಾಜು ಜನಿಸಿದ್ದು ಇವರ ಮೂಲ ಹೆಸರು ಚೆನ್ನಬಸವಯ್ಯ 6 ತಿಂಗಳ ಬಾಲಕನಿದ್ದಾಗಲೇ ದೃಷ್ಟಿಯನ್ನು ಕಳೆದುಕೊಂಡ ಪುಟ್ಟರಾಜ ಅವರು ಮಾವನವರ ಆಶ್ರಯದಲ್ಲಿ ಸಂಗೀತ ವಿದ್ಯಾಭ್ಯಾಸ ಮಾಡುತ್ತಾ, ಸಂಸ್ಕೃತ, ವಚನ, ವೇದಾಂತ, ಕೈವಲ್ಯ ಪದ್ಧತಿ, ಕನ್ನಡ ವ್ಯಾಕರಣ, ಹಿಂದಿ ಭಾಷೆ, ಬ್ರೈಲ್ ಲಿಪಿ, ಅಲಂಕಾರ ಶಾಸ್ತ್ರ ಮತ್ತು ಶಬ್ದಮಣಿ ದರ್ಪಣದಂತಹ ಗ್ರಂಥಗಳನ್ನು ಅಧ್ಯಯನ ಮಾಡಿರುತ್ತಾರೆ. ಸಂಗೀತದಲ್ಲಿನ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಶಿಷ್ಯರಾಗಿ ಹೆಚ್ಚಿನ ಪರಿಣಿತಿ ಪಡೆದಿರುತ್ತಾರೆ. ಪಂಚಾಕ್ಷರಿ ಗವಾಯಿಗಳ ನಿಧನದ ನಂತರ ಬಾಲಬ್ರಹ್ಮಚಾರಿಯಾಗಿದ್ದ ಪುಟ್ಟರಾಜ ಗವಾಯಿಗಳು 1944ರಲ್ಲಿ ವೀರೇಶ್ವರ ಪುಣ್ಯಾಶ್ರಮದ ಉತ್ತರಾಧಿಕಾರಿಯಾಗಿದ್ದರು.

ಗವಾಯಿಗಳು ಹಲವಾರು ಗ್ರಂಥಗಳನ್ನು ರಚಿಸಿದ್ದಲ್ಲದೆ ಅವರಿಗೆ ರಾಜ್ಯ ಹಾಗೂ ಪದ್ಮಭೂಷಣ ಸೇರಿದಂತೆ ರಾಷ್ಟ್ರದ ಹಲವಾರು ಪ್ರಶಸ್ತಿಗಳು ಅರಸಿ ಬಂದಿದ್ದವು. ಪಂಡಿತ್ ಪುಟ್ಟರಾಜ ಗವಾಯಿಗಳು ಬದುಕಿನುದ್ದಕ್ಕೂ ಅಂಧರ ಪಾಲಿನ ದೇವರಾಗಿದ್ದರು.

ಶ್ರೀಯುತರು ದಿನಾಂಕ: 17.09.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಕೆ. ಶ್ರೀಧರಾಚಾರ್

ಶ್ರೀ ಕೆ. ಶ್ರೀಧರಾಚಾರ್ ಅವರು 1943ರಲ್ಲಿ, ಮಂಗಳೂರು ಸಮೀಪದ ಕೋಟೆಕಾರಿನಲ್ಲಿ ಜನಿಸಿದ್ದು, ಬಿ.ಕಾಂ., ಪದವೀಧರರಾಗಿದ್ದರು. 'ನವಭಾರತಿ

ಪತ್ರಿಕೆಯ' ಮೂಲಕ ಪತ್ರಿಕೋದ್ಯಮಕ್ಕೆ ಸೇರ್ಪಡೆಗೊಂಡ ದಿವಂಗತರು 'ಪ್ರಜಾವಾಣಿ' ಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದಲ್ಲದೆ 'ಸಾಕ್ಷಾತ್ ಸುದ್ದಿ' ಎಂಬ ಸಂಜೆ ಪತ್ರಿಕೆಯ ಸಂಪಾದಕರಾಗಿದ್ದರು. ರಾಜಕೀಯ ವರದಿಗಾರಿಕೆಯಲ್ಲಿ ಹೆಚ್ಚಿನ ನೈಪುಣ್ಯತೆಯನ್ನು ಹೊಂದಿದ್ದ, ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರು ದಿನಾಂಕ: 14.08.2010ರಂದು ನಿಧನ ಹೊಂದಿರುತ್ತಾರೆ.

ಶ್ರೀ ಬಿ.ಎಸ್. ರಂಗಾ

ಶ್ರೀ ಬಿ.ಎಸ್. ರಂಗಾ ಅವರು ಹೆಸರಾಂತ ಚಿತ್ರ ನಿರ್ದೇಶಕ, ನಿರ್ಮಾಪಕ ಹಾಗೂ ಛಾಯಾಗ್ರಾಹಕರಾಗಿದ್ದರು. ಇವರು ಕನ್ನಡದ ಮೊದಲ ವರ್ಣ ಚಿತ್ರ 'ಅಮರಶಿಲ್ಪಿ ಜಕಣಾಚಾರಿ' ಸೇರಿದಂತೆ ಸುಮಾರು 45 ಚಿತ್ರಗಳನ್ನು ನಿರ್ದೇಶಿಸಿದ್ದರು.

ಶ್ರೀಯುತರು ದಿನಾಂಕ: 12.12.2010ರಂದು ನಿಧನ ಹೊಂದಿರುತ್ತಾರೆ.

ಮೈಸೂರು ಕೆರೆ ದುರಂತ

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಅರಳಕುಪ್ಪೆ ಗ್ರಾಮದ ಜನರು ಬೀಗರ ಔತಣಕೂಟಕ್ಕಾಗಿ ನಂಜನಗೂಡಿಗೆ ತೆರಳಿ ವಾಪಸ್ಸು ಬರುವ ಸಂದರ್ಭದಲ್ಲಿ ದಿನಾಂಕ: 14.12.2010ರಂದು ಮೈಸೂರು – ನಂಜನಗೂಡು ರಸ್ತೆಯಲ್ಲಿರುವ ಉಂಡಬತ್ತಿನ ಕೆರೆಗೆ ಟೆಂಪೊ ಉರುಳಿ ಸುಮಾರು 27 ಅಮಾಯಕ ಜನರು ದುರ್ಮರಣಕ್ಕೀಡಾಗಿ ಸಾವನ್ನಪ್ಪಿದವರಿಗೆ ಈ ಸದನವು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯಾಂಗ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರ ಇಲಾಖೆಯ ಸಚಿವರು): ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಮಂಡಲದ ಅಧಿವೇಶನ ಹಾಗೂ ಇವತ್ತಿನ ನಡುವೆ ನಮ್ಮ ಸದನದ ಕೆಲವು ಹಿರಿಯರು ಮತ್ತು ನಾಡಿನ ಕೆಲವು ಮಹಾನ್ ಸಾಧಕರು ನಮ್ಮಿಂದ ಕಣ್ಮರೆಯಾಗಿದ್ದಾರೆ. ಅವರ ಬಗ್ಗೆ ತಾವು ಏನು ಸದನದ ಮುಂದೆ ಒಂದು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ, ಅದಕ್ಕೆ ನನ್ನ ಧ್ವನಿಯನ್ನು ಸೇರಿಸುತ್ತಾ ಎಲ್ಲಾ ಮೃತರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ. ಇವತ್ತು ನಮ್ಮ ಜೊತೆಯಲ್ಲಿಯೇ ಇದೇ ಸದನದಲ್ಲಿ ಸದಸ್ಯರಾಗಿದ್ದ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು, ನಮ್ಮ ರಾಜ್ಯಕ್ಕೆ ಆಡಳಿತ ಕ್ಷೇತ್ರದಲ್ಲಿ ಒಂದು ರೀತಿಯಲ್ಲಿ ಒಂದು ಹೊಸ ವ್ಯಾಖ್ಯಾನ ಬರೆದಿದ್ದ

ಶ್ರೀ ಎಂ. ರಾಜಶೇಖರ ಮೂರ್ತಿಯವರು ಮತ್ತು ಮಾಜಿ ಸಚಿವರುಗಳಾಗಿದ್ದ ಶ್ರೀ ಕೆ.ಎಸ್. ಬೀಳಗಿಯವರು ಹಾಗೂ ಶ್ರೀ ಅಶ್ವತ್ಥನಾರಾಯಣ ರೆಡ್ಡಿಯವರು ಹೀಗೆ ಸುಮಾರು ಜನ ಇವತ್ತು ನಮ್ಮಿಂದ ಅಗಲಿದ್ದಾರೆ. ವಿಶೇಷವಾಗಿ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ನನಗೆ ಬಹಳ ಒಳ್ಳೆಯ ಸ್ನೇಹಿತರಾಗಿ, ನಾವಿಬ್ಬರು ಎರಡು-ಮೂರು ಬಾರಿ ಒಟ್ಟಿಗೆ ಕೆಲಸ ಮಾಡದ್ದೇವೆ. ಸಮಿತಿಯಲ್ಲಿ ಕೂಡ ನಾವಿಬ್ಬರು ಕಾರ್ಯ ಮಾಡುತ್ತಿದ್ದೆವು. ಅವರು ಕಡೂರಿನಲ್ಲಿ ಎಷ್ಟು ಜನಾನುರಾಗಿಯಾಗಿದ್ದರು ಎಂಬುದನ್ನು ನಾನು ಬಹಳ ಹತ್ತಿರದಿಂದ ಬಲ್ಲವನಾಗಿದ್ದೇನೆ. ಅವರು ಬಹಳ ಒಳ್ಳೆಯ ಹೃದಯವಂತ ವ್ಯಕ್ತಿಯಾಗಿದ್ದರು. ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ನನಗೆ ಒಂದು ಫೋಟೋ ಕೊಡುತ್ತೇನೆ ಎಂದು ಪ್ರಾಮೀಸ್ ಮಾಡಿದ್ದರು. ಆದರೆ, ಕೊನೆಗೂ ಕೂಡ ಅದನ್ನು ಕೊಡದೇ ಹೊರಟು ಹೋದರು. ನಾನು ಹಾಗೂ ಅವರು ಒಂದು ಕಮಿಟಿ ಮುಖಾಂತರ ಅಧ್ಯಯನ ಪ್ರವಾಸಕ್ಕೆ ಹೋಗಿದ್ದಾಗ ಅಂಡಮಾನ್‌ಗೆ ಪ್ರವಾಸ ಹೋಗಿದ್ದೆವು. ಅಂಡಮಾನ್‌ನ Cellular Jailಗೆ ಭೇಟಿ ನೀಡಿದಾಗ, ಯಾವ ಸೆಲ್‌ನಲ್ಲಿ ಸ್ವಾತಂತ್ರ್ಯ ಯೋಧ, ಮಹಾನ್ ಕ್ರಾಂತಿ ವೀರ ಸಾವರ್ಕರ್ ಇದ್ದರು, ಆ ಸೆಲ್‌ನಲ್ಲಿ ನಾನು ನಿಂತುಕೊಂಡ ನಂತರ ಕಡೂರು ಕೃಷ್ಣಮೂರ್ತಿಯವರು ನನ್ನ ಫೋಟೋ ತೆಗೆದಿದ್ದರು. ಆ ಫೋಟೋದ ಒಂದು ಕಾಪಿ ನನಗೆ ಬೇಕು ಅದು ನನ್ನ ಜೀವನದ ಒಂದು ಮಹತ್ವದ ಆಸ್ತಿಯಾಗುತ್ತದೆ ಎಂದು ನಾನು ಕೃಷ್ಣಮೂರ್ತಿ ಯವರನ್ನು ಪದೇ ಪದೇ ಕೇಳುತ್ತಿದ್ದೆ. ಅವರು ಇನ್ನು ಯಾರಿಗೋ ಹೇಳಿದರು. ಕೊನೆಗೂ ಕೂಡ ಆ ಫೋಟೋ ನನಗೆ ಸಿಗಲಿಲ್ಲ. ಶ್ರೀ ಕೃಷ್ಣಮೂರ್ತಿಯವರು ಕೂಡ ಇವತ್ತು ನಮ್ಮಿಂದ ದೂರವಾಗಿದ್ದಾರೆ. ಅವರು ಬಹಳ ಒಳ್ಳೆಯ ಜನಪ್ರತಿನಿಧಿಯಾಗಿದ್ದರು. ಅವರ ಸ್ನೇಹಕ್ಕೆ ಯಾರೇ ಬಂದಿದ್ದರೂ ಕೂಡ ಅವರು ಒಳ್ಳೆಯ ಸ್ನೇಹಿತರಾಗಿದ್ದರು. ಅಂತಹ ಶ್ರೀ ಕೆ.ಎಂ. ಕೃಷ್ಣ ಮೂರ್ತಿಯವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ವಿಶೇಷವಾಗಿ ಕಡೂರಿನ ಅಭಿವೃದ್ಧಿಗೂ ಕೂಡ ಸಾಕಷ್ಟು ಶ್ರಮಿಸಿ ಸಣ್ಣ-ಪುಟ್ಟ ಅಭಿವೃದ್ಧಿ ಕಾರ್ಯಗಳನ್ನು follow up ಮಾಡುತ್ತಿದ್ದಿದ್ದೂ ಕೂಡ ನಮಗೆಲ್ಲರಿಗೂ ಒಂದು ಅನುಕರಣೀಯವಾದ ಸಂಗತಿ.

ಇನ್ನು ದಿವಂಗತ ಎಂ. ರಾಜಶೇಖರ ಮೂರ್ತಿಯವರ ಬಗ್ಗೆ ಹೇಳಬೇಕಾದರೆ, ನಾನು ಹೀಗೆ ಕುಳಿತು ಪಟ್ಟಿಯನ್ನು ನೋಡುತ್ತಿದ್ದೆ. 1952, 1957, 1962, 1967, 1972 ಹಾಗೂ 1989 ಇಷ್ಟು ಬಾರಿ ಅವರು ವಿಧಾನಸಭಾ ಸದಸ್ಯರಾಗಿದ್ದರು. 1980 ರಿಂದ 1985ರವರೆಗೆ ಲೋಕಸಭಾ ಸದಸ್ಯರಾಗಿದ್ದರು.

ಮೂರು ಬಾರಿ ರಾಜ್ಯಸಭಾ ಸದಸ್ಯರಾಗಿ ಕಾರ್ಯಮಾಡಿದ್ದರು. ಪ್ರಾಯಶಃ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಸ್ನೇಹಿತರನ್ನು ಹೊಂದಿದ್ದರು. ಅವರಿಂದ ಏನು inspiration ಪಡೆದಿದ್ದಾರೆ ಅಂತಹ ವ್ಯಕ್ತಿಗಳು ಬಹಳ ಎಲ್ಲಾ ಪಕ್ಷಗಳಲ್ಲಿಯೂ ಕೂಡ ಇದ್ದಾರೆ. ವಿಶೇಷವಾಗಿ ನನಗೆ ಗೊತ್ತಿರುವ ಹಾಗೆ 1989 ರಿಂದ ಮಾನ್ಯ ವೀರೇಂದ್ರ ಪಾಟೀಲ್‌ರವರ ಸರ್ಕಾರದಲ್ಲಿ ಮಾನ್ಯ ವೀರೇಂದ್ರ ಪಾಟೀಲ್ ಹಾಗೂ ಮಾನ್ಯ ರಾಜಶೇಖರ ಮೂರ್ತಿಯವರ ಒಂದು ಜೋಡಿ ಏನಿತ್ತು. ಆಡಳಿತದಲ್ಲಿ ಶಿಸ್ತು ಹಾಗೂ ಸಂಯಮವನ್ನು ತರುವುದರಲ್ಲಿ ಬಹಳಷ್ಟು ಕಾರಣಕರ್ತರಾಗಿದ್ದರು. ಪ್ರಚಾರದಿಂದ ಬಹಳ ದೂರ ಉಳಿದವರು. ಆಡಳಿತ ಹಾಗೂ ಅಭಿವೃದ್ಧಿಯ ಕಡೆ ಗಮನ ಕೊಟ್ಟ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ರಾಜಶೇಖರ ಮೂರ್ತಿಯವರೂ ಕೂಡ ಒಬ್ಬರು. ವಿಶೇಷವಾಗಿ ನಮ್ಮ ರಾಜ್ಯದ ಹಣಕಾಸು ಕ್ಷೇತ್ರದಲ್ಲಿ ಒಂದು ಭದ್ರ ಬುನಾದಿ ಸ್ಥಾಪಿಸುವುದಕ್ಕೆ ಶ್ರೀ ರಾಜಶೇಖರಮೂರ್ತಿಯವರ ಶಿಸ್ತಿನ ಆಡಳಿತವೇ ಒಂದು ಕಾರಣವಾಯಿತು ಎಂದು ನಾನು ಕೇಳಲ್ಪಟ್ಟಿದ್ದೇನೆ. ಅಂತಹ ಶ್ರೀ ರಾಜಶೇಖರ ಮೂರ್ತಿಯವರು ಕೇಂದ್ರದಲ್ಲಿ ಭೂ ಸಾರಿಗೆ ಸಚಿವರಾಗಿಯೂ ಕೂಡ ಕಾರ್ಯ ಮಾಡಿದ್ದಾರೆ. ಬಹಳ ನೇರ ನುಡಿಯ ರಾಜಕಾರಣಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ.

ಇನ್ನು ಶ್ರೀ ಕೆ.ಎಸ್. ಬೀಳಗಿಯವರೂ ಕೂಡ ನಮ್ಮ ಜೊತೆಯಲ್ಲಿಯೇ ಸದಸ್ಯರಾಗಿ, ಸಾರಿಗೆ ಸಚಿವರಾಗಿ ಸುಮಾರು ಎರಡು ಬಾರಿ ವಿಧಾನಸಭೆಯಲ್ಲಿ ಪ್ರತಿನಿಧಿಯಾಗಿ, ಎರಡು ವರ್ಷಗಳ ಕಾಲ ಸಾರಿಗೆ ಸಚಿವರಾಗಿ ಉತ್ತಮವಾದಂತಹ ಕಾರ್ಯವನ್ನು ಮಾಡಿದ್ದಾರೆ.

ಇನ್ನು ಅಶ್ವತ್ಥನಾರಾಯಣ ರೆಡ್ಡಿಯವರೂ ಕೂಡ ನಮ್ಮ ಜೊತೆಯಲ್ಲಿ ಸದಸ್ಯರಾಗಿ, ಗೃಹ ಖಾತೆಯ ರಾಜ್ಯ ಸಚಿವರಾಗಿ ಕಾರ್ಯ ಮಾಡಿದ್ದರು. ಬಹಳ ದೀರ್ಘಕಾಲದ ಅಂದರೆ ಮೂರು ದಶಕಗಳ ಕಾಲದ ರಾಜಕೀಯ ಕ್ಷೇತ್ರದ ಒಡನಾಟ ಅವರಿಗಿತ್ತು. ಅವರು ನಮ್ಮ ಪಕ್ಷಕ್ಕೂ ಕೂಡ ಬಂದು ನಾಯಕರಾಗಿ, ಕಳೆದ ಬಾರಿ ಚುನಾವಣೆಯಲ್ಲಿ ಕೂಡ ವರ್ತೂರು ಕ್ಷೇತ್ರದಿಂದ ಅವರು ಸ್ಪರ್ಧಿಸಿದ್ದರು. ಅವರದು ಬಹಳ ದೊಡ್ಡ ದೇಹ. ಅವರು ಅಷ್ಟೇ ಜನಾನುರಾಗಿಯೂ ಕೂಡ ಆಗಿದ್ದರು. ಅಂತಹ ಅಶ್ವತ್ಥನಾರಾಯಣ ರೆಡ್ಡಿಯವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ.

ಸ್ವಾತಂತ್ರ್ಯ ಹೋರಾಟಗಾರರಾಗಿ, ವಿಶೇಷವಾಗಿ ಮಹಿಳಾ ಹೋರಾಟಗಾರರಾಗಿ ಶ್ರೀಮತಿ ಬಿ.ಎಲ್. ಸುಬ್ಬಮ್ಮನವರ ಹೆಸರು ನಮ್ಮ ನಾಡಿನಲ್ಲಿಯೇ ಹೆಸರುವಾಸಿಯಾಗಿತ್ತು. 1952ರಲ್ಲಿ ವಿಧಾನ ಸಭೆಗೆ ಆಯ್ಕೆಯಾಗಿ

ಬಹಳ ದೀರ್ಘಕಾಲೀನ ಸಮಾಜ ಸೇವೆ ಮಾಡಿದ್ದರು. 92 ವರ್ಷಗಳ ಕಾಲ ಸಾರ್ಥಕ ಜೀವನ ನಡೆಸಿದ್ದ ಶ್ರೀಮತಿ ಬಿ.ಎಲ್. ಸುಬ್ಬಮ್ಮನವರ ನಿಧನದಿಂದ ಒಂದು ರೀತಿಯಲ್ಲಿ ಒಂದು ಕೊಂಡಿ ಕಳಚಿಕೊಂಡಂತೆ ಇವತ್ತು ಆಗಿದೆ. ಅವರ ಒಂದು ಸಮಾಜ ಸೇವೆ ನಮ್ಮೆಲ್ಲರಿಗೂ ಕೂಡ ಮಾರ್ಗದರ್ಶನವಾಗಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀ ಜೆ.ಎಲ್. ಕಬಾಡೆಯವರು, ಶ್ರೀ ಕೂಗಳಿ ಕರಿಬಸವನ ಗೌಡರವರು ಹಾಗೂ ಶ್ರೀ ಎಸ್.ಬಿ. ಮದನ್‌ಲಾಲ್‌ರವರು ಇವರುಗಳು ಕೂಡ ನಮ್ಮ ಸದನದ ಸದಸ್ಯರುಗಳಾಗಿ ನಮ್ಮನ್ನು ಇವತ್ತು ಅಗಲಿದ್ದಾರೆ.

ವಿಶೇಷವಾಗಿ ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿಗಳು ಸ್ವತಃ ಅಂಧರಾಗಿದ್ದು, ಅವರ ಶಿಕ್ಷಣ ಮತ್ತು ದಾಸೋಹದ ಮೂಲಕ ಒಂದು ರೀತಿಯಲ್ಲಿ ಇಡೀ ಸಮಾಜಕ್ಕೆ ಬೆಳಕಾಗಿದ್ದವರು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾಗಿದ್ದ ಗಾನಯೋಗಿ ಪಂಡಿತ ಪುಟ್ಟರಾಜ್ ಗವಾಯಿಗಳ ನಿಧನದಿಂದ ಕರ್ನಾಟಕ ಒಬ್ಬ ಅಪೂರ್ವ ಗಾಯಕ, ಓರ್ವ ಆದರ್ಶ ಗುರು ಮತ್ತು ಒಬ್ಬ ಸಂತ, ಸಾಧಕ ಇವರೆಲ್ಲರ ಸಮ್ಮಿಲನವಾಗಿದ್ದ ಡಾ: ಪುಟ್ಟರಾಜ ಗವಾಯಿಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಕ್ಷೇತ್ರ ಎರಡರಲ್ಲೂ ಕೂಡ ಅವರು ತಮ್ಮ ಹಿರಿಮೆಯನ್ನು, ತಮ್ಮ ಪ್ರೌಢಿಮೆಯನ್ನು ತೋರಿಸಿದ್ದರು. ಜೊತೆಗೆ ಜೀವನದಲ್ಲಿ ಒಬ್ಬ ವ್ಯಕ್ತಿ ಜೀವನದಲ್ಲಿ ಇಷ್ಟೊಂದು ಸಾಧನೆ ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನು ತೋರಿಸಿದ್ದಾರೆ. ಸಾಹಿತ್ಯಾರಾಧಕರಾಗಿ, ಸಂಗೀತಾರಾಧಕರಾಗಿ, ಅನ್ನ ದಾಸೋಹ ಹಾಗೂ ಜ್ಞಾನ ದಾಸೋಹದ ಮೂಲಕ ಸಮಾಜಕ್ಕೆ ಒಂದು ಬಹಳ ದೊಡ್ಡ ಶಕ್ತಿಯಾಗಿ ಡಾ: ಪುಟ್ಟರಾಜ ಗವಾಯಿಗಳು ಇದ್ದರು. ಪದ್ಮಭೂಷಣ, ಕಾಳಿದಾಸ್ ಸಮ್ಮಾನ್, ಕನಕ–ಪುರಂದರ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಸಂಗೀತ ಚಕ್ರವರ್ತಿ, ಬಸವಶ್ರೀ ಇತ್ಯಾದಿ ಹಲವಾರು ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದರು. 97 ವರ್ಷಗಳ ಕಾಲದ ತುಂಬು ಜೀವನ ನಡೆಸಿದ, ತುಂಬು ಜೀವನದ ಜೊತೆಗೆ ಅರ್ಥಪೂರ್ಣ ಜೀವನ ನಡೆಸಿದ, ನಾಡಿಗೆ ವಿಶ್ವಾಸ ಮತ್ತು ಶಕ್ತಿಯನ್ನು ಕೊಟ್ಟ ಡಾ: ಪುಟ್ಟರಾಜ ಗವಾಯಿಗಳೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಆ ಒಂದು ಪರಂಪರೆ ಮುಂದುವರೆಯುವುದು ಸಮಾಜದ ದೃಷ್ಟಿಯಿಂದ ಬಹಳ ಅತ್ಯಗತ್ಯ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

10.30 ಎ.ಎಂ

ಕೆ. ಶ್ರೀಧರಾಚಾರ್‌ರವರು ಬಹಳ ಹೆಸರುವಾಸಿ ಮತ್ತು ಒಬ್ಬ ಸಜ್ಜನ ಪತ್ರಕರ್ತರಾಗಿದ್ದರು. 'ಪ್ರಜಾವಾಣಿ' ಪತ್ರಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ನನ್ನ ಮತ್ತು ಅವರ ಸಂಪರ್ಕ ಕೂಡ ಬಂದಿತ್ತು. ಬಹಳ ವಿಶಿಷ್ಟ ರೀತಿಯಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ ಶ್ರೀಧರಾಚಾರ್‌ರವರಿಗೆ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳು ಬಂದಿದ್ದವು. ವಿಶೇಷವಾಗಿ ಕಿರಿಯ ಪತ್ರಕರ್ತರಿಗೆ ಮಾರ್ಗದರ್ಶಕರಾಗಿ ಅವರು ಕಾರ್ಯವನ್ನು ಮಾಡಿದ್ದಾರೆ.

ಇನ್ನು ಬಿ.ಎಸ್. ರಂಗಾರವರ ಬಗ್ಗೆ ಹೇಳಬೇಕಾದರೆ, ನಾವು ಮುಂಚೆ ಬರೀ black and white film ಅನ್ನು ಬಹಳ ನೋಡುತ್ತಿದ್ದೆವು. 'ಅಮರ ಶಿಲ್ಪಿ ಜಕಣಾಚಾರಿ' ಚಲನಚಿತ್ರ ಬಂದಾಗ, ಮೊದಲನೇ ಬಾರಿಗೆ colour film ಇರುತ್ತದೆ ಎನ್ನುವುದನ್ನು ತೋರಿಸಿದವರು ಬಿ.ಎಸ್. ರಂಗಾರವರು, ಬಹಳ ಉತ್ತಮವಾದ ಒಂದು ಗುಣಮಟ್ಟದ ಚಲನಚಿತ್ರಗಳನ್ನು ಕೊಡುತ್ತಿದ್ದರು. ಜೊತೆಗೆ ಪರಿಶುದ್ಧವಾದ ಮನೋರಂಜನೆಯ ಚಲನಚಿತ್ರಗಳನ್ನು ಕೊಡುತ್ತಿದ್ದರು. ಇವತ್ತು ಪರಿಶುದ್ಧವಾದ ಮನೋರಂಜನೆಯ ಚಲನಚಿತ್ರಗಳನ್ನು ನಾವು ಹುಡುಕಬೇಕಾಗಿದೆ. ಅಂತಹ ಒಂದು quality film ಅನ್ನು ಕೊಟ್ಟ ಬಿ.ಎಸ್. ರಂಗಾರವರು ನಮ್ಮನ್ನು ಇವತ್ತು ಅಗಲಿದ್ದಾರೆ.

ಮೈಸೂರಿನಲ್ಲಿ ಉಂಡಬತ್ತಿನ ಕೆರೆ ದುರಂತ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಅರಳಕುಪ್ಪೆ ಮತ್ತು ಇತರೆ ಗ್ರಾಮಗಳ ಗ್ರಾಮಸ್ಥರು ಅವತ್ತು ಬೀಗರ ಔತಣಕೂಟಕ್ಕಾಗಿ ನಂಜನಗೂಡಿಗೆ ತೆರಳಿ ವಾಪಸ್ಸು ಬರುತ್ತಿದ್ದರು. ಔತಣಕೂಟದಿಂದ ಮಸಣಕ್ಕೆ ಹೋಗುವ ಒಂದು ಪರಿಸ್ಥಿತಿ ಬಂದಿತು. ಸುಮಾರು 27 ಜನ, 27 ಅಮೂಲ್ಯ ಜೀವಗಳು ಆ ಒಂದು ದುರಂತದಲ್ಲಿ ಇವತ್ತು ಪ್ರಾಣ ಕಳೆದುಕೊಂಡರು. ಅಪಾಯ ಸಂಭವಿಸಿದ ಮೇಲೆ, ರಾಜ್ಯದಲ್ಲಿ ಯಾವ್ಯಾವ ರೀತಿ, ಇನ್ಯಾವುದು ಅಪಾಯಕಾರಿ ಸ್ಥಳಗಳು ಎಂದು ಕೆಲವು ಪತ್ರಿಕೆಗಳು ಕೂಡ ಗುರುತು ಮಾಡಿವೆ. ಈ ಸಮಯದಲ್ಲಿ ಮತ್ತೊಂದು ದುರಂತ ಆಗಲಿ ಎನ್ನುವುದನ್ನು ಕಾಯದೇ ಆ ಅಪಾಯಕಾರಿ ಸ್ಥಳಗಳನ್ನು ಸರ್ಕಾರ ಮತ್ತು ಆಡಳಿತ ಕೂಡ ಎಚ್ಚರಿಕೆ ವಹಿಸಿ, ಅದು ಒಂದು ಜೀವ ಇರಲಿ, 27 ಜೀವ ಇರಲಿ, ಆ ಮನೆಗಳಿಗೆ, ಕಳೆದುಕೊಂಡವರಿಗೆ ಜೀವ ಎಂದರೆ ಜೀವ. ಈ ರೀತಿ ಘಟನೆಗಳು ಮರುಕಳಿಸದ ರೀತಿಯಲ್ಲಿ ನಾವು ಕ್ರಮ

ತೆಗೆದುಕೊಳ್ಳಬೇಕಾಗಿದೆ. ಆ 27 ಮೃತರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಕೋರುತ್ತಿದ್ದೇನೆ.

ಶ್ರೀ ಸಿ.ಎಸ್. ಪುಟ್ಟರಾಜು: 31 ಜನರು ಮೃತರಾಗಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: Sorry 31 ಜನ. ಹೀಗೆ ಹಲವು ಕ್ಷೇತ್ರಗಳಲ್ಲಿ ಹೆಸರು ಮಾಡಿ, ಜನರ ಪ್ರೀತಿಗೆ, ಜನರ ಗೌರವಕ್ಕೆ, ಜನರ ಆದರಕ್ಕೆ ಪಾತ್ರರಾಗಿದ್ದ, ಹಲವಾರು ಮುಖಂಡರು, ಕಲಾವಿದರು, ಪತ್ರಕರ್ತರು ಮತ್ತು ಸಾಹಿತಿಗಳ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ. ನಿನ್ನೆ ನಾನು ಒಂದು ಪತ್ರಿಕೆಯನ್ನು ಓದುತ್ತಿದ್ದೆ, ರೋಮ್ ಭಾಷೆಯಲ್ಲಿ 'Memento Mori' ಎಂದು ಒಂದು ಪದ ಇದೆಯಂತೆ, 'Remember your mortality' ಬಹಳ ಚೆನ್ನಾಗಿತ್ತು. ರಾಜಶೇಖರಮೂರ್ತಿಯವರು ಎಂತಹ ಎತ್ತರಕ್ಕೆ ಹೋಗಿದ್ದರು. ಸುಬ್ಬಮ್ಮನವರು, ಬಿ.ಎಸ್. ರಂಗಾರವರು, ಇಂಥ ದೊಡ್ಡವರೂ ಕೂಡ ಇವತ್ತು ನಮ್ಮಿಂದ ಕಣ್ಮರೆಯಾಗುತ್ತಿರುವಾಗ, ನಮ್ಮದೂ ಕೂಡ ಅಷ್ಟು ಶಾಶ್ವತವಲ್ಲವೆಂದು ತಿಳಿದುಕೊಂಡು ಇವರ ಜೀವನದಿಂದ ನಾವೂ ಕೂಡ ಪಾಠ ಕಲಿಯೋಣ, ಮಾರ್ಗದರ್ಶನ ಪಡೆಯೋಣ ಎಂದು ಹೇಳಿ ನನ್ನ ಈ ಶ್ರದ್ಧಾಂಜಲಿಯ ಕೆಲವು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕ ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ, ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಜೊತೆಯಲ್ಲಿಯೇ ಇದ್ದಂತಹ, ಈ ಸದನದ ಸದಸ್ಯರು ಆಗಿದ್ದಂತಹ, Sitting Member, ಕೆ.ಎಂ. ಕೃಷ್ಣಮೂರ್ತಿಯವರು ನನಗೆ ಬಹಳ ಆಪ್ತರು ಮತ್ತು ಸ್ನೇಹಿತರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ದಿನಗಳಿಂದ ಅವರು ಸಾಯುವವರೆಗೂ ಕೂಡ ನನ್ನ ಜೊತೆ ಒಡನಾಟ ಇಟ್ಟುಕೊಂಡಿದ್ದವರು. ಅತ್ಯಂತ ಸಜ್ಜನ ವ್ಯಕ್ತಿ ಮತ್ತು ಸ್ನೇಹಮಯಿ. ವಿದ್ಯಾರ್ಥಿ ದಿಸೆಯಲ್ಲಿಯೇ ಹೋರಾಟದ ಮನೋಭಾವವನ್ನು ಬೆಳೆಸಿಕೊಂಡಿದ್ದಂಥವರು. ಆಗಲೇ ನನ್ನ ಜೊತೆಯಲ್ಲಿ 'ನಾನು ಕಡೂರಿನಿಂದ ಶಾಸಕನಾಗಬೇಕು, ಮಂತ್ರಿಯಾಗಬೇಕು' ಎನ್ನುವಂಥ ಕನಸನ್ನು ಹೊತ್ತುಕೊಂಡಿದ್ದರು. ಅವರ ತಂದೆ ಮುದಿಯಪ್ಪಯವರು ಕೂಡ ಒಮ್ಮೆ ಶಾಸಕರಾಗಿದ್ದರು. ಆದರೆ ಅವರು ಸಾಯುವುದಕ್ಕಿಂತ ಮುಂಚಿತವಾಗಿ ಒಂದು ಮಾತನ್ನು ಹೇಳುತ್ತಿದ್ದರು, ಅವರ ತಾಯಿಯವರು ಇನ್ನೂ ಬದುಕಿದ್ದಾರೆ. "ನಿಮ್ಮ ತಂದೆ ಮಿನಿಸ್ಟರ್ ಆಗುವುದಕ್ಕೆ ಆಗಲಿಲ್ಲ.

ನೀನಾದರೂ ಒಮ್ಮೆ ಮಿನಿಸ್ಟರ್ ಆಗಪ್ಪಾ' ಎಂದು ನಮ್ಮ ತಾಯಿಯವರು ಯಾವಾಗಲೂ ಹೇಳುತ್ತಿರುತ್ತಾರೆ" ಎಂದು ಹೇಳುತ್ತಿದ್ದರು. ಸತತವಾಗಿ ನಾಲ್ಕು ಬಾರಿ ಶಾಸಕರಾದರೂ ಕೂಡ ಮಂತ್ರಿಯಾಗಬೇಕೆಂಬ ಅವರ ಆಸೆ ಏನಿತ್ತು, ಕನಸು ಏನಿತ್ತು ಅದು ಈಡೇರಲಿಲ್ಲ. ಎಂಎಲ್ಎ ಆದ ಮೇಲೆ ಮಂತ್ರಿಯಾಗಬೇಕೆನ್ನುವ ಆಸೆ ಎಲ್ಲರಿಗೂ ಸ್ವಾಭಾವಿಕ. ಅವರು ಇರತಕ್ಕಂಥ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಯಾಗಬೇಕೆನ್ನುವ ಆಸೆ ಸಹಜವಾಗಿರುತ್ತದೆ. ಆ ಸಹಜವಾದಂಥ ಆಸೆ, ಕನಸು ಕೃಷ್ಣಮೂರ್ತಿಯವರಿಗೂ ಇತ್ತು. ಆದರೆ ಅವರಿಗೆ ಪಾಪ ಆ ಕನಸು ನನಸು ಆಗಲಿಲ್ಲವೆಂದು ಬಹಳ ನೋವಾಗುತ್ತದೆ. ಒಂದು ಬಾರಿ ಜನತಾದಳ ವಿಭಜನೆಯಾದ ಮೇಲೆ ನಾವೆಲ್ಲಾ ಜನತಾ ದಳದಿಂದ ಹೊರಗಡೆ ಬಂದ ಮೇಲೆ ಅವರೂ ನಮ್ಮ ಜೊತೆ ಬಂದಿದ್ದರು. ಅವರು ಜನತಾದಳದಲ್ಲಿ ಉಳಿದುಕೊಂಡಿದ್ದರೆ ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಯಾಗುತ್ತಿದ್ದರು. ನನ್ನ ಜೊತೆ ಬಂದಿದ್ದರಿಂದ ಅವರು ಮಂತ್ರಿಯಾಗುವುದು ತಪ್ಪಿ ಹೋಯಿತು. ಹಾಗಾಗಿ ನನಗೂ ಕೂಡ ಆ ನೋವಿದೆ. ನನ್ನ ಜೊತೆ ಬಂದಿದ್ದರಿಂದ ಅವರು ಮಂತ್ರಿಯಾಗಲಿಲ್ಲವೆಂದು ನನಗೆ ನೋವಿದೆ. ನಾನು ಅವರಿಗೆ 'ನಿವು ಸಾಯುವುದಕ್ಕೆ ಮುಂಚಿತವಾಗಿ ಒಮ್ಮೆ ಮಂತ್ರಿಯಾಗುತ್ತೀಯಪ್ಪಾ, ನಿನ್ನ ಆಸೆ ಈಡೇರುತ್ತದೆ' ಎಂದು ಹೇಳಿದ್ದೆ. ಆದರೆ ವಿಧಿ ಅದನ್ನು ಆಗುವುದಕ್ಕೆ ಬಿಡಲಿಲ್ಲ. ಇನ್ನೂ ಸಾಯುವಂಥ ವಯಸ್ಸು ಆಗಿರಲಿಲ್ಲ. ನನಗಿಂಥ ಚಿಕ್ಕ ವಯಸ್ಸು. ಆದರೆ ಮಧ್ಯದಲ್ಲಿ ಪಾಪ ಚಿಕ್ಕ ವಯಸ್ಸಿನಲ್ಲಿಯೇ ಅವರು ಕಾಲವಾಗಿ ಬಿಟ್ಟರು. ಅವರಿಗೆ ಇದ್ದಂಥ ಒಂದು ಒಳ್ಳೆಯ ಗುಣ ಏನೆಂದರೆ, ಅವರು ಜಾಸ್ತಿ ಮಾತನಾಡುತ್ತಿರಲಿಲ್ಲ. ಆದರೆ ಅವರ ಕ್ಷೇತ್ರ ಅಭಿವೃದ್ಧಿ ಮಾಡುವುದರಲ್ಲಿ ಬಹಳ ನಿಸ್ಸೀಮರಾಗಿದ್ದರು. ಸತತವಾಗಿ ನಾಲ್ಕು ಬಾರಿ ಶಾಸಕರಾಗಿ, ಬಹುಶಃ ಶಾಸಕರು ಹೇಗೆ ಅವರ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡಬೇಕೆನ್ನುವುದಕ್ಕೆ ಅವರು ಆದರ್ಶ. ಅಷ್ಟರಮಟ್ಟಿಗೆ ಇಡೀ ಕ್ಷೇತ್ರದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಯಾವತ್ತೂ ಕೂಡ ಕ್ಷೇತ್ರದಲ್ಲಿ ಯಾವ ವರ್ಗದ ಜನರಿಗೂ ಕೂಡ ಭೇದ-ಭಾವ ಮಾಡದೇ, ಯಾವ ಭಾಗವನ್ನು ಭೇದ-ಭಾವ ಮಾಡದೇ, ಕಡೂರು ಕ್ಷೇತ್ರವನ್ನು, ಅದರಲ್ಲೂ ವಿಶೇಷವಾಗಿ ಶಿಕ್ಷಣ ಸಂಸ್ಥೆಗಳನ್ನು ಬಹಳಷ್ಟು ಸ್ಥಾಪನೆ ಮಾಡಲಿಕ್ಕೆ ಕಾರಣಕರ್ತರಾಗಿದ್ದರು. ಬಹುಶಃ ಬೇರೆ ಯಾವ ಕ್ಷೇತ್ರಗಳಲ್ಲೂ ಅಷ್ಟೊಂದು ಹೈಸ್ಕೂಲ್‌ಗಳು, ಆಸ್ಪತ್ರೆಗಳು, ಪಿಹೆಚ್‌ಸಿಗಳನ್ನು ನೋಡುವುದಕ್ಕೆ ಸಾಧ್ಯವಿಲ್ಲ; ಅಷ್ಟು ಅಭಿವೃದ್ಧಿ ಮಾಡತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ಹಾಗಾಗಿ ವೈಯಕ್ತಿಕವಾಗಿ

ಒಬ್ಬ ಆಪ್ತ ಸ್ನೇಹಿತರನ್ನು ಕಳೆದುಕೊಂಡಿರುವುದು, ನನಗೆ ನಷ್ಟವಾಗಿದೆ, ನೋವಾಗಿದೆ. ಜೊತೆಗೆ ಆ ಕ್ಷೇತ್ರಕ್ಕೆ ದೊಡ್ಡ ಅನ್ಯಾಯವಾಗಿದೆ. ಅವರನ್ನೂ ಆ ಕ್ಷೇತ್ರದಲ್ಲಿ ಶಾಸಕರಾಗಿ ಇರಬೇಕಾಗಿತ್ತು. ಅವರು ಮುಂದೆಯೂ ಕೂಡ ಗೆಲ್ಲುತ್ತಿದ್ದರು. ಅಷ್ಟರ ಮಟ್ಟಿಗೆ ಅಲ್ಲಿ ಜನಪ್ರಿಯರಾಗಿದ್ದರು. ಈ ಉಪಚುನಾವಣೆಯಲ್ಲಿ ಸೋಲಾಗಿರಬಹುದು. ಆದರೆ ಅವರೇ ಇದ್ದಿದ್ದರೆ ಇನ್ನೂ ಅವರನ್ನು ಸೋಲಿಸಲಿಕ್ಕೆ ಯಾರಿಂದಲೂ ಸಾಧ್ಯ ಆಗುತ್ತಿರಲಿಲ್ಲ, ಅಷ್ಟರ ಮಟ್ಟಿಗೆ ಜನಪ್ರಿಯರಾಗಿದ್ದಂಥ ವ್ಯಕ್ತಿ ಜನರ ಹತ್ತಿರ ಇದ್ದಂಥ ವ್ಯಕ್ತಿ, ಅವರನ್ನು ಇವತ್ತು ನಾವೆಲ್ಲಾ ಕಳೆದುಕೊಂಡಿದ್ದೇವೆ, ಈ ಸದನ ಕಳೆದುಕೊಂಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ನನಗೂ ಮತ್ತು ಎಂ. ರಾಜಶೇಖರ ಮೂರ್ತಿಯವರಿಗೂ 1977ರಿಂದಲೂ ಒಡನಾಟವಿತ್ತು. ನಾನು ಲಾ ಕಾಲೇಜಿನಲ್ಲಿ ಓದುವಾಗ ಸಮಾಜವಾದಿ ಯುವಜನ ಸಭಾದಲ್ಲಿದ್ದೆ. ಇವರು ನಮ್ಮ ಕ್ಷೇತ್ರದಿಂದ ಸಂಸ್ಥಾ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದರು. ನಮ್ಮ ಊರುಗಳೆಲ್ಲವೂ ಅವರ ಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದವು. ಅವತ್ತು ನಾನು ಇವರ ಪರವಾಗಿ ಒಬ್ಬ ವಿದ್ಯಾರ್ಥಿಯಾಗಿ ಪ್ರಚಾರ ಮಾಡಲು ಪ್ರಾರಂಭಿಸಿದೆ. ಅನಂತರ, 1978ರಲ್ಲಿ ಜನತಾ ಪಕ್ಷ ರಚನೆಯಾದ ಬಳಿಕ ಅವರು ಆ ಪಕ್ಷದ ಅಭ್ಯರ್ಥಿಯಾಗಿದ್ದರು. ಮೊದಲ ಬಾರಿಗೆ ಅವರು ಸೋತಿದ್ದು ಆಗಲೇ. ಅಲ್ಲಿಯವರೆಗೂ, ಸ್ವಾತಂತ್ರ್ಯ ಬಂದ ನಂತರ ಮೊದಲ ಬಾರಿಗೆ 1952ರಲ್ಲಿ ಚುನಾವಣೆ ಜರುಗಿದಾಗಿನಿಂದ 1977ರವರೆಗೂ ಸತತವಾಗಿ ಐದು ಬಾರಿ ಗೆದ್ದಿದ್ದರು. ಬಹುಶಃ, ಇವತ್ತಿನ ವಿಧಾನಸಭೆಯಲ್ಲಿ 1952ರಲ್ಲಿ ಗೆದ್ದವರು ಯಾರೂ ಇಲ್ಲ ನನಗೆ ಗೊತ್ತಿರುವಂತೆ ಬದುಕಿರುವವರಲ್ಲಿ ಬಹಳ ಕಡಿಮೆ. ಇದುವರೆಗೂ ಬಿ.ಎಲ್. ಸುಬ್ಬಮ್ಮನವರು ಬದುಕಿದ್ದರು. ಈಗ ಅವರೂ ಕಾಲವಾಗಿದ್ದಾರೆ. ಅವರು 1952ರಲ್ಲಿ ಮೊದಲ ಬಾರಿಗೆ ಜರುಗಿದ ಚುನಾವಣೆಯಲ್ಲಿ ಗೆದ್ದಿದ್ದರು. ರಾಜಶೇಖರ ಮೂರ್ತಿ ಒಬ್ಬರು ಬದುಕಿದ್ದರು. ಅವರು ಕೂಡ ಈಗ ಕಾಲವಾಗಿದ್ದಾರೆ. ರಾಜಶೇಖರ ಮೂರ್ತಿಯವರು ಬಹಳ ಸರಳ, ಸಜ್ಜನಿಕೆ ಇರುವ ವ್ಯಕ್ತಿಯಾಗಿ, ಮಿತಭಾಷಿಯಾಗಿದ್ದರು. ಯಾರ ಜೊತೆಯಲ್ಲೂ ಹೆಚ್ಚು ಮಾತನಾಡುತ್ತಿರಲಿಲ್ಲ. ಕೆಲವೇ ಜನರೊಂದಿಗೆ ಮಾತ್ರ ಮಾತನಾಡುತ್ತಿದ್ದರು. ಯಾರು ಅವರಿಗೆ ಬಹಳ ಆಪ್ತರಾಗಿದ್ದರೋ, ಅವರೊಂದಿಗೆ ಮಾತನಾಡುತ್ತಿದ್ದರೇ ವಿನಾಃ ಬೇರೆಯವರೊಂದಿಗೆ ಮಾತನಾಡುತ್ತಿದ್ದುದು ಕಡಿಮೆ. ಆದರೆ, ಅಧಿಕಾರ ದೊರಕಿದಾಗ ಒಬ್ಬ ಬ್ಯೂರೋಕ್ರಾಟ್ ತರಹ ಕೆಲಸ ಮಾಡುತ್ತಿದ್ದರು. ಅದೊಂದು

ರೀತಿಯ ವಿಶೇಷ ಗುಣವನ್ನು ಅವರು ಬೆಳೆಸಿಕೊಂಡಿದ್ದರು. ಅವರು ಕೈಗಾರಿಕಾ ಮಂತ್ರಿಯಾಗಿದ್ದಾಗ ಅವರೊಂದಿಗೆ ಸಂಪರ್ಕವಿತ್ತು. ಏಕೆಂದರೆ, ಅವರು ನಮ್ಮ ಕ್ಷೇತ್ರದಿಂದ ಗೆಲ್ಲುತ್ತಿದ್ದರು. ನಾನು ಬಿ.ಎಸ್.ಸಿ. ಪಾಸ್ ಮಾಡಿದ ಬಳಿಕೆ ಕೆಲಸ ಕೇಳಲೆಂದು ಅವರಲ್ಲಿಗೆ ಒಮ್ಮೆ ಹೋಗಿದ್ದೆ. ಆದರೆ, ಕೆಲಸ ಕೊಡಿಸಲಿಲ್ಲ. ಕೆಲಸ ಕೊಡಿಸಲಿಲ್ಲವೆನ್ನುವುದಕ್ಕಿಂತಲೂ ನನಗೆ ಕೆಲಸ ಸಿಗಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಒಳ್ಳೆಯದಾಯಿತು.

ಶ್ರೀ ಸಿದ್ದರಾಮಯ್ಯ: ಅದರಿಂದ ಒಳ್ಳೆಯದಾಯಿತೋ, ಕೆಟ್ಟದಾಯಿತೋ, ಗೊತ್ತಿಲ್ಲ. ಅಂತೂ ನನಗೆ ಅವರು ಕೆಲಸ ಕೊಡಿಸಲಿಲ್ಲ. ಅವರು ಕೆಲಸ ಕೊಡಿಸಲಿಲ್ಲ ಎನ್ನುವುದಕ್ಕಿಂತಲೂ ನನಗೆ ಕೆಲಸ ಸಿಗಲಿಲ್ಲವೆಂದು ಇಟ್ಟು ಕೊಳ್ಳೋಣ. 1968ನೇ ಇಸವಿಯಲ್ಲಿ ಬಿ.ಎಸ್.ಸಿ. ಪಾಸ್ ಆದ ನಂತರ ಅವರ ಬಳಿಗೆ ಕೆಲಸ ಕೇಳಲು ಹೋಗಿದ್ದೆ. ಕೆಲಸ ಸಿಗಲಿಲ್ಲವೆಂದು ಆ ಒಂದು ವರ್ಷ ನಾನು ಊರಿನಲ್ಲಿದ್ದೆ. ಒಂದು ವರ್ಷ dis-continue ಮಾಡಿದ ಬಳಿಕ 1969ರಲ್ಲಿ ಮತ್ತೆ ಲಾ ಓದಲು ಬಂದೆ. ಅಂದಿನಿಂದ ನಾನು ಅವರು ಬಹಳ ಆಪ್ತರಾಗಿದ್ದೆವು. ಅನಂತರ, ಅವರು ಜನತಾ ಪಕ್ಷ ಬಿಟ್ಟು ಕಾಂಗ್ರೆಸ್‌ಗೆ ಹೋದರು. ಇದರಿಂದಾಗಿ ನನಗೂ ಅವರಿಗೂ ಸಂಪರ್ಕ ಸ್ವಲ್ಪ ಕಡಿಮೆಯಾಯಿತು. ನಾನು ಮತ್ತು ಅವರು ಒಂದೇ ಜಿಲ್ಲೆ ಮತ್ತು ಒಂದೇ ಕ್ಷೇತ್ರದವರಾದ್ದರಿಂದ ಚುನಾವಣೆಯಲ್ಲಿ ಪರಸ್ಪರ ಎರಡು ಸಲ ಸ್ಪರ್ಧಿಸಿದ್ದೆವು. ಒಮ್ಮೆ ಲೋಕಸಭೆಗೆ ಸ್ಪರ್ಧಿಸಿದ್ದರೆ, ಮತ್ತೊಮ್ಮೆ ವಿಧಾನಸಭೆ ಚುನಾವಣೆಗೆ ಸ್ಪರ್ಧಿದ್ದೆವು. ಎರಡು ಸಲ ನಾನು ಅವರ ವಿರುದ್ಧ ಸೋತೆ. ಲೋಕಸಭಾ ಚುನಾವಣೆಯಲ್ಲೂ ಸೋತೆ. ಅದೇ ರೀತಿ 1989ರ ವಿಧಾನಸಭೆ ಚುನಾವಣೆಯಲ್ಲೂ ಸೋತೆ. ನಾನು, ಅವರು ಪರಸ್ಪರ ಚುನಾವಣೆಗೆ ಸ್ಪರ್ಧಿಸಿದ್ದರೂ ಒಂದು ದಿನವೂ ಪರಸ್ಪರದ ಬಗ್ಗೆ ಕೆಟ್ಟದ್ದನ್ನಾಗಲಿ, ಟೀಕೆಗಳನ್ನಾಗಲಿ ನಾವು ಮಾಡಲಿಲ್ಲ. ಅಷ್ಟರಮಟ್ಟಿಗೆ ನನಗೂ ಮತ್ತು ಅವರಿಗೂ ಸಂಬಂಧವಿತ್ತು. ಆದರೆ, ನಾನು ಮತ್ತು ಅವರು ಮಾತನಾಡಲು ಹೋಗುತ್ತಿರಲಿಲ್ಲ. ಅವರು ರಾಜಕಾರಣದಲ್ಲಿ ಪ್ರಾಮಾಣಿಕರಾಗಿದ್ದರು. ಜನರ ಮತ್ತು ಕ್ಷೇತ್ರದ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಸದ್ದು-ಗದ್ದಲವಿಲ್ಲದೆ ಮಾಡುತ್ತಿದ್ದರು. ಯಾವತ್ತೂ ಬೀದಿಗೆ ಬಂದು ಹೋರಾದ ಮಾಡುತ್ತಿರಲಿಲ್ಲ ಅಥವಾ ವಿಧಾನಸಭೆಯಲ್ಲಿ ಗಲಾಟೆ ಮಾಡುತ್ತಿರಲಿಲ್ಲ ಮತ್ತು ಲೋಕಸಭೆಗೆ ಹೋದ ಬಳಿಕವೂ ಅಲ್ಲಿಯೂ ಗಲಾಟೆ ಮಾಡುತ್ತಿರಲಿಲ್ಲ. ಮಾತನಾಡದೆ, ಹೋರಾಟ ಮಾಡದೆ ಕ್ಷೇತ್ರದ ಕೆಲಸ ಮಾಡುವ ವಿಶೇಷ ಗುಣವನ್ನು ಅವರು

ಬೆಳೆಸಿಕೊಂಡಿದ್ದರು. ಎಷ್ಟು ವರ್ಷ ಅಧಿಕಾರದಲ್ಲಿದ್ದರೋ, ಅಷ್ಟು ವರ್ಷವೂ ಅವರು ಪ್ರಾಮಾಣಿಕರಾಗಿದ್ದರು. ಹಾಗಾಗಿ, ಇವತ್ತಿನ ರಾಜಕಾರಣಿಗಳಿಗೆ ಅವರು ಆದರ್ಶಪ್ರಾಯರು. ಇದನ್ನು ನಾವೆಲ್ಲರೂ ನೋಡಿ ಕಲಿಯಬೇಕಾಗಿದೆ ಎಂಬುದನ್ನು ನಾನು ಭಾವಿಸಿಕೊಂಡಿದ್ದೇನೆ. ಇಂತಹ ಒಬ್ಬ ಹಿರಿಯ ರಾಜಕಾರಣಿ ಇಂದು ನಮ್ಮನ್ನು ಅಗಲಿದ್ದಾರೆ. ರಾಜಕೀಯದಲ್ಲಿನ ಅವರ ನಡವಳಿಕೆ ಮಾದರಿಯಾಗಿ ಸಮಾಜದಲ್ಲಿ ಯಾವಾಗಲೂ ಉಳಿಯುತ್ತದೆ ಮತ್ತು ಮಾರ್ಗದರ್ಶನವಾಗುತ್ತದೆ.

ದಿವಂಗತರಾದ ಕೆ.ಎಸ್. ಬೀಳಗಿಯವರು ನಮ್ಮೊಂದಿಗಿದ್ದರು. ಅವರು ಎರಡು ಸಲ ಎಂ.ಎಲ್.ಎ. ಆಗಿದ್ದರು. ದೇವೇಗೌಡರ ಮಂತ್ರಿಮಂಡಲದಲ್ಲಿ ಅವರು ಸಾರಿಗೆ ಸಚಿವರಾಗಿದ್ದರು. ಎಸ್.ಆರ್. ಬೊಮ್ಮಾಯಿಯವರಿಗೆ ಬಹಳ ನಿಕಟವರ್ತಿಯಾಗಿದ್ದರು. ಉತ್ತಮ ಸ್ನೇಹ ಅವರಿಬ್ಬರಲ್ಲೂ ಇತ್ತು ಯಾವಾಗಲೂ ಎಸ್.ಆರ್. ಬೊಮ್ಮಾಯಿ, ಲಕ್ಷ್ಮೀಸಾಗರ್, ಬೀಳಗಿ ಮತ್ತೊಬ್ಬರು ಹುಬ್ಬಳ್ಳಿಯವರು ಸದಾ ಜೊತೆಯಲ್ಲಿರುತ್ತಿದ್ದರು. ಅವರು ಪರಿಶಿಷ್ಟ ಜಾತಿಯಿಂದ ಬಂದಿದ್ದರೂ ಕೂಡ ವಿದ್ಯಾವಂತರಾಗಿದ್ದರು. ಅವರಲ್ಲಿ ಸಜ್ಜನಿಕೆ ಇತ್ತು. ಎಲ್ಲಕ್ಕಿಂತಲೂ ಹೆಚ್ಚಾಗಿ ಯಾವತ್ತಿಗೂ ಅಹಂಕಾರದಿಂದ ನಡೆದುಕೊಳ್ಳುವ ಪ್ರವೃತ್ತಿ ಅವರಲ್ಲಿ ಇರಲಿಲ್ಲ. ಅವರು ಪ್ರಾಚಾರ್ಯರಾಗಿಯೂ ಕೆಲಸ ಮಾಡಿದ್ದರು. ಉತ್ತಮ ಜ್ಞಾನ ಹೊಂದಿದ್ದ ವ್ಯಕ್ತಿಯಾಗಿದ್ದರು. ಇಂತಹವರು ಸಿಗುವುದು ಬಹಳ ಅಪರೂಪ. ಅವರು ಕೂಡ ನಮ್ಮನ್ನು ಇಂದು ಅಗಲಿದ್ದಾರೆ.

ಇನ್ನು ಅಶ್ವತ್ಥನಾರಾಯಣ ರೆಡ್ಡಿಯವರು ನಮ್ಮೊಂದಿಗೆ ಎಂ.ಎಲ್.ಎ. ಆಗಿದ್ದರು. ಅವರು ವರ್ತೂರು ಕ್ಷೇತ್ರದಿಂದ ಗೆದ್ದು ಜೆ.ಹೆಚ್. ಪಟೇಲರ ಕಾಲದಲ್ಲಿ ಸ್ವಲ್ಪ ದಿನಗಳ ಮಟ್ಟಿಗೆ ರಾಜ್ಯ ಗೃಹ ಮಂತ್ರಿಯಾಗಿದ್ದರು. ನಾನೂ ಆಗ ಮಂತ್ರಿಯಾಗಿದ್ದೆ. ಅವರು ನಮ್ಮೊಂದಿಗೆ ಸಹೋದ್ಯೋಗಿಯಾಗಿದ್ದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರು ಕಾರ್ಮಿಕ ಕ್ಷೇತ್ರದಲ್ಲಿ ಬಹಳ ಕೆಲಸ ಮಾಡಿದ್ದರು. ಕಾರ್ಮಿಕ ನಾಯಕರಾಗಿ ಆ ಕ್ಷೇತ್ರದಲ್ಲಿ ಬಹಳಷ್ಟು ಹೋರಾಟಗಳನ್ನು ನಡೆಸಿದ ವ್ಯಕ್ತಿಯಾಗಿದ್ದರು. ಅವರು ಒಬ್ಬ ಸಮಾಜ ಸೇವಕ, ಕಾರ್ಮಿಕ ಮುಖಂಡ ಮತ್ತು ರಾಜಕಾರಣಿ ಕೂಡ ಆಗಿದ್ದರು. ಬಹಳಷ್ಟು ಸಲ ವರ್ತೂರು ಕ್ಷೇತ್ರದಿಂದ ಚುನಾವಣೆಯಲ್ಲಿ ಗೆಲ್ಲದಿದ್ದರೂ ಬಹಳ ಸಲ ಸೋತಿದ್ದರು. ಅವರು ಸಜ್ಜನಿಕೆಗೆ ಮತ್ತು ನೇರ ನುಡಿಗೆ ಹೆಸರಾಗಿದ್ದವರು. ಅವರು ಹಿಂದೊಂದು, ಮುಂದೊಂದು ಹೇಳುವುದನ್ನು ಕಲಿತಿರಲಿಲ್ಲ. ಯಾವುದನ್ನೇ ಹೇಳಬೇಕಾದರೂ ಹಿಂದು-ಮುಂದು ನೋಡದೆ ನೇರವಾಗಿ ಮಾತನಾಡುತ್ತಿದ್ದರು. ಇಂತಹವರು ಇವತ್ತು

ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಶಾಂತಿ ದೊರಕಲೆಂದು ಪ್ರಾರ್ಥಿಸುತ್ತೇನೆ.

ಬಿ.ಎಲ್. ಸುಬ್ಬಮ್ಮನವರು 1952ರಲ್ಲಿ ಮೊದಲ ಬಾರಿಗೆ ಜರುಗಿದ ಚುನಾವಣೆಯಲ್ಲಿ ಆರಿಸಿ ಬಂದಂತಹವರು. ಅನಂತರ, 1962ರಲ್ಲಿ ಮತ್ತೊಮ್ಮೆ ಆಯ್ಕೆಯಾಗಿದ್ದರು. ಬಹಳ ಎತ್ತರಕ್ಕೆ ಬೆಳೆದಿದ್ದ ಒಬ್ಬ ಧೀಮಂತ ಮಹಿಳೆಯಾಗಿದ್ದರು. ಇವರೆಲ್ಲರೂ ಕೂಡ ಆದರ್ಶ ಪ್ರಾಯರು. ಇಂತಹ ವ್ಯಕ್ತಿಗಳು ಸಮಾಜದಲ್ಲಿರುವುದೇ ನಮಗೆಲ್ಲರಿಗೂ ಹೆಮ್ಮೆ ಮತ್ತು ಗೌರವ ತರುವ ಸಂಗತಿಯೆಂದು ಭಾವಿಸಿಕೊಳ್ಳಬೇಕಾಗುತ್ತದೆ. ಅಂತಹ ವ್ಯಕ್ತಿಗಳು ಇವತ್ತು ನಮ್ಮನ್ನು ಅಗಲಿದ್ದಾರೆ.

ಇನ್ನು ದಿವಂಗತರಾದ ಜೆ.ಎಲ್. ಕಬಾಡೆಯವರೊಂದಿಗೆ ನಮ್ಮ ಸಂಪರ್ಕವಿರಲಿಲ್ಲ. ಇವರು ವಿಧಾನಸಭೆಗೆ ಮೂರು ಸಲ ಆಯ್ಕೆಯಾಗಿದ್ದವರು. ಉತ್ತರ ಕರ್ನಾಟಕದ ಬೆಳ್ಳೊಳ್ಳಿ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದರು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದವರು. ಇವರೂ ನಮ್ಮನ್ನು ಅಗಲಿದ್ದಾರೆ. ಕೊಗಳಿ ಕರಿಬಸವನಗೌಡರು ರೈತ ಕುಟುಂಬದಲ್ಲಿ ಹುಟ್ಟಿದವರು. ಹಡಗಲಿ ಕ್ಷೇತ್ರದ ಶಾಸಕರಾಗಿದ್ದರು. ಇವರೂ ಕೂಡ ನಮ್ಮನ್ನು ಅಗಲಿದ್ದಾರೆ. ಎಸ್.ಬಿ. ಮದನ್‌ಲಾಲ್ ರವರು 1978ರಲ್ಲಿ ಹುಳ್ಳೂರು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರು ಬೀದರ್ ಜಿಲ್ಲೆಯವರು. ಇವರು ವಕೀಲರಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದವರು. ಇವರೂ ನಮ್ಮನ್ನು ಅಗಲಿದ್ದಾರೆ.

ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿಯವರು ವಿಶೇಷ ವ್ಯಕ್ತಿತ್ವ ಹೊಂದಿದ ಅಂಧರಾಗಿದ್ದರೂ ಕೂಡ ಅಂಧತ್ವ ಇವರ ಜ್ಞಾನಾರ್ಜನೆಗೆ ಸ್ವಲ್ಪವೂ ಅಡ್ಡಿಯಾಗಲಿಲ್ಲವೆಂಬುದು ವಿಶೇಷ. ಸಾಹಿತ್ಯ ಸಂಗೀತ ಮತ್ತು ಸಮಾಜ ಸೇವೆಯಲ್ಲಿ ಯಾರೂ ನಿರೀಕ್ಷಿಸಿರದಷ್ಟು ಸಾಧ್ಯವಾಗದಿರುವ ಮಟ್ಟಕ್ಕೆ ಏರಿದವರಾಗಿದ್ದರು. ಸಮಾಜ ಕಂಡಂಥ, ಯಾವಾಗಲೂ ನಾವೆಲ್ಲರೂ ನೆನಪಿಸಿಕೊಳ್ಳಬೇಕಾದಂಥ ಒಬ್ಬ ಎತ್ತರದ ವ್ಯಕ್ತಿಯೆಂದು ನಾವು ಭಾವಿಸಿಕೊಳ್ಳ ಬೇಕಾಗುತ್ತದೆ. ಜೊತೆಗೆ ಇವತ್ತು ಅಂಧರಿಗೆ ಮತ್ತು ಇಡೀ ಅಂಧ ಸಮುದಾಯಕ್ಕೆ ಅವರು ದೇವರಾಗಿದ್ದಂಥವರು. ಅವರನ್ನು ಎಲ್ಲರೂ ದೇವರ ದೃಷ್ಟಿಯಿಂದ ನೋಡುತ್ತಿದ್ದರು. ಅದರಲ್ಲೂ ಒಬ್ಬ ಅಂಧರಾಗಿ ಸಮಾಜಕ್ಕೆ ಮಾಡಿದಂಥ ಸೇವೆ ಎಲ್ಲರಿಗೂ ಅನುಕರಣೀಯ. ಇಂಥ ವ್ಯಕ್ತಿಗಳಿಂದಲೇ ಸಮಾಜದಲ್ಲಿ ಏನಾದರೂ ಇನ್ನೂ ಸಾಮಾಜಿಕ ಮೌಲ್ಯಗಳು

ಉಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸಾಮಾಜಿಕ ಮೌಲ್ಯಗಳು ಕುಸಿಯುತ್ತಿವೆ ಎಂಬ ಪರಿಸ್ಥಿತಿಯಲ್ಲೂ ಕೂಡ ಇಂಥ ವ್ಯಕ್ತಿಗಳ ಬದುಕನ್ನು, ಸಾರ್ಥಕ ಜೀವನವನ್ನು, ಮಾಡಿದಂಥ ಸಾಧನೆಯನ್ನು, ಗಳಿಸಿದ್ದಂಥ ಜ್ಞಾನವನ್ನು ನೋಡಿದಾಗ ಈಗಲೂ ಕೂಡ ಸಾಮಾಜಿಕ ಮೌಲ್ಯಗಳು ನೆಲೆಸುತ್ತವೆ, ಉಳಿಯುತ್ತವೆ, ಅದನ್ನು ಪಾಲನೆ ಮಾಡಬೇಕಾದ ಅಗತ್ಯವಿದೆಯೆಂದು ಇವರು ನಮಗೆ ಬಿಟ್ಟು ಹೋಗಿದ್ದಾರೆ. ಅವರ ಜೀವನ ನಿಜಕ್ಕೂ ನಮಗೆಲ್ಲರಿಗೂ ಅನುಕರಣೀಯ. ಅವರಿಗೆ ಪದ್ಮಭೂಷಣ ಪ್ರಶಸ್ತಿ ಮಾತ್ರವಲ್ಲ ಅವರಿಗೆ ಯಾವುದೇ ಬಿರುದನ್ನು ಕೊಟ್ಟರೂ ಕಡಿಮೆಯೇ. ಪದ್ಮಭೂಷಣ ರಾಷ್ಟ್ರೀಯ ಪ್ರಶಸ್ತಿ ಅವರಿಗೆ ಸಿಕ್ಕಿರಬಹುದು. ಆದರೆ ಅವರಿಗೆ ಯಾವುದೇ ಪ್ರಶಸ್ತಿ ಕೊಟ್ಟರು ಕಡಿಮೆಯೇ ಎಂದು ನನಗನ್ನಿಸುತ್ತದೆ. ಅಷ್ಟರ ಮಟ್ಟಿಗೆ ಅವರು ಬದುಕನ್ನು ಸಾರ್ಥಕ ಮಾಡಿಕೊಂಡಿದ್ದರು. ನಮ್ಮಗಳ ಮುಂದೆ ಅವರು ಒಂದು ಆದರ್ಶ ಬದುಕನ್ನು ಬಿಟ್ಟು ಹೋಗಿದ್ದಾರೆ. ಆ ಆದರ್ಶ ನಮಗೆಲ್ಲರಿಗೂ ಅನುಕರಣೀಯವೆಂದು ನಾನು ಭಾವಿಸುತ್ತೇನೆ.

ಮಾನ್ಯ ಕೆ. ಶ್ರೀಧರಾಚಾರ್‌ರವರು ನಮಗೆ ಬಹಳ ಒಳ್ಳೆಯ ಸ್ನೇಹಿತರು. ಪತ್ರಿಕೋದ್ಯಮದಲ್ಲಿ ಅವರು ಒಬ್ಬ gentleman. ಅವರು Journalist ಆಗಿದ್ದರು. ಅವರು ಪ್ರಜಾವಾಣಿ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಹಳ ದೀರ್ಘವಾದ ಸೇವೆ ಸಲ್ಲಿಸಿದ್ದರು. ಎಲ್ಲರಿಂದಲೂ ಗೌರವವನ್ನು ಸಂಪಾದನೆ ಮಾಡಿಕೊಂಡಿದ್ದರು. ಪತ್ರಿಕೋದ್ಯಮದಲ್ಲಿ ಎಲ್ಲರೂ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಅಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಂಥ ವ್ಯಕ್ತಿ. ಎಲ್ಲರ ಜೊತೆಯೂ ಸ್ನೇಹದಿಂದ ಇರುತ್ತಿದ್ದಂಥವರು. ರಾಜಕೀಯ ವಿಚಾರಗಳನ್ನು ಹೆಚ್ಚಾಗಿ ಬರೆಯುತ್ತಿದ್ದರು. ಬಹಳ ನಿಷ್ಪಾತವಾಗಿ, ವಸ್ತುನಿಷ್ಠವಾಗಿ ಬರೆಯುತ್ತಿದ್ದಂಥ ಗುಣವನ್ನು ಅವರು ಬೆಳೆಸಿಕೊಂಡಿದ್ದರು. ಆ ರೀತಿಯ ವ್ಯಕ್ತಿತ್ವ ಅವರಲ್ಲಿತ್ತು. ಆದ್ದರಿಂದಾಗಿ ಅವರು ಮಾದರಿಯ ಪತ್ರಿಕೋದ್ಯಮಿಯೆಂದು ನಾನು ತಿಳಿದುಕೊಂಡಿದ್ದೆ. ಅವರು ನಮ್ಮನ್ನು ಅಗಲಿದ್ದಾರೆ.

ಬಿ.ಎಸ್. ರಂಗಾ. ಇವರು ಚಲನಚಿತ್ರೋದ್ಯಮದಲ್ಲಿ ದೊಡ್ಡ ಹೆಸರು ಮಾಡಿದಂಥವರು. ಆ ಕಾಲದಲ್ಲಿ ಚಿತ್ರರಂಗದಲ್ಲಿ 4–5 ಜನರು ಹೆಸರು ಇರುತ್ತಿತ್ತು. ಅವರಲ್ಲಿ ಇವರ ಹೆಸರೂ ಒಂದು. ಕಾನೂನು ಸಚಿವರು ಹೇಳಿದಂತೆ, ಅವತ್ತಿನ ಕಾಲದಲ್ಲಿ ಕನ್ನಡ ಚಿತ್ರಗಳು ಬರುತ್ತಿದ್ದ್ದೇ ಬಹಳ ಕಡಿಮೆ. ಅದರಲ್ಲಿ ಉತ್ತಮ ಚಿತ್ರವನ್ನು ತೆಗೆಯುತ್ತಿದ್ದವರಲ್ಲಿ ರಂಗಾ ಸಹ ಒಬ್ಬರು. ಕಪ್ಪು ಬಿಳುಪು ಚಿತ್ರವನ್ನು ಹೆಚ್ಚು ತೆಗೆಯುತ್ತಿದ್ದರು. ಅದರಲ್ಲೂ ಕನ್ನಡದಲ್ಲಿ ಮೊದಲ

ಬಾರಿಗೆ 'ಅಮರಶಿಲ್ಪಿ ಜಕಣಾಚಾರಿ' ಅಂತ ಒಂದು ಕಲರ್ ಸಿನಿಮಾ ಮಾಡಿದರು. ಅದನ್ನು ನೋಡಲು ನನಗೆ ಏನೋ ಬಹಳ ಖುಷಿ. ಅದು ಬಹಳ ಚೆನ್ನಾಗಿಯೂ ಇತ್ತು. ಅದನ್ನು ನಾವು 4–5 ಸಲ ನೋಡಿದ್ದೇವೆ. ಮೈಸೂರಿನವರಿಗೆ ಬೇರೆ ಭಾಷೆ ಅರ್ಥವಾಗುತ್ತಿರಲಿಲ್ಲ. ಹಿಂದಿ, ತಮಿಳು, ತೆಲುಗು ಬರುತ್ತಿರಲಿಲ್ಲ. ಕನ್ನಡ ಸಿನಿಮಾವನ್ನೇ ನೋಡಬೇಕಾಗಿತ್ತು. ಹಾಗಾಗಿ ನಾವು ಕನ್ನಡ ಸಿನಿಮಾವನ್ನು ಬಹಳ ನೋಡಿದ್ದೇವೆ. ಆ ಕ್ಷೇತ್ರದಲ್ಲಿ ಬಹಳ ಹೆಸರು, ಗೌರವವನ್ನು ಸಂಪಾದನೆ ಮಾಡಿದ್ದಂಥವರು. ಅವರು ನಿರ್ಮಾಪಕರು ಮಾತ್ರವಲ್ಲ ನಿರ್ದೇಶಕರೂ ಆಗಿದ್ದರು, ಛಾಯಾಗ್ರಾಹಕರಾಗಿದ್ದರು, ಚಿತ್ರ ರಂಗದಲ್ಲಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಂಥವರು. ಅವರು ಬಹಳ ದೀರ್ಘಕಾಲ ಬದುಕಿ, ಸಾರ್ಥಕ ಜೀವನ ನಡೆಸಿ ನಮ್ಮನ್ನು ಅಗಲಿದ್ದಾರೆ.

ಮೈಸೂರು ಹತ್ತಿರ ಉಂಡಬತ್ತಿನ ಕೆರೆ ದುರಂತ; ಇದು ನಮ್ಮ ಹಿಂದಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಡೆದಂಥ ಘಟನೆ. ಸತ್ತು ಹೋದವರೆಲ್ಲಾ ಸದಸ್ಯರಾದ ಸಿ.ಎಸ್. ಪುಟ್ಟರಾಜುರವರ ಪಾಂಡವಪುರ ತಾಲ್ಲೂಕಿನ ಪಕ್ಕದ ಊರಿನವರೇ. ಮೈಸೂರಿನಿಂದ ನಂಜನಗೂಡಿಗೆ ಹೋಗಬೇಕಾದರೆ ಮೂರು ಕೆರೆಗಳಿವೆ. ಅವುಗಳು ಯಾವಾಗಲೂ ನೀರಿನಿಂದ ತುಂಬಿರುತ್ತವೆ. ಈಗಂತೂ ನಾಲೆಗಳು ಬಂದ ಮೇಲೆ ನೀರು ಯಾವಾಗಲೂ ತುಂಬಿರುತ್ತದೆ. ಆ ಕೆರೆಗೆ ತಡೆಗೋಡೆ ಇದ್ದಿದ್ದರೆ ಆ ಅಪಘಾತ ತಪ್ಪುತ್ತಿತ್ತು ಎಂದು ನನಗೆ ಅನ್ನಿಸುತ್ತದೆ. ಅದೊಂದೇ ಕೆರೆಯಲ್ಲ, ಅನೇಕ ಕೆರೆಗಳಿಗೆ ತಡೆಗೋಡೆ ಇಲ್ಲ. ಈ ಸರ್ಕಾರ ಮಾತ್ರವಲ್ಲ ಹಿಂದಿನ ಸರ್ಕಾರಗಳೂ ಬಹುಶಃ ಇದರಲ್ಲಿ ಎಡವಿದ್ದಾವೆ. ಹಿಂದನಿಂದಲೂ ತಡೆಗೋಡೆ ಇಲ್ಲ. ಇದ್ದರೂ ಒಂದೊಂದು ಕಲ್ಲನ್ನು ಅದೆಲ್ಲೋ ನೆಟ್ಟಿರುತ್ತಾರೆ. ಈ ರೀತಿಯ ಅಪಘಾತಗಳನ್ನು ತಡೆಯುವ ಶಕ್ತಿ ಅವುಗಳಿಗೆ ಇಲ್ಲ. ಅಲ್ಲಿ ಸತ್ತವರು 27 ಜನರಲ್ಲ 31 ಜನರು. ಮೊದಲ ದಿವಸ 27 ಜನರ ಮೃತದೇಹ ಸಿಕ್ಕಿತ್ತು. ಮಾರನೆ ದಿವಸ 4 ಮೃತ ದೇಹ ಸಿಕ್ಕಿತು. ಬಹಳ ಘೋರ ದುರಂತ ಮತ್ತು ಅತ್ಯಂತ ನೋವು ಉಂಟು ಮಾಡುವುದೇನೆಂದರೆ ಎರಡು ಕುಟುಂಬದ ಎಂಟು ಎಂಟು ಜನರು ಅದರಲ್ಲೂ ಹೆಣ್ಣು ಮಕ್ಕಳು ಮೃತಪಟ್ಟಿದ್ದು, ಇಡೀ ಕುಟುಂಬ ನಾಶವಾಗಿದ್ದು. ನಾವು ಇಲ್ಲಿ ಮಾತನಾಡಬಹುದು, ನೋವನ್ನು ವ್ಯಕ್ತ ಮಾಡಬಹುದು. ಆದರೆ, ಪಾಪ ಆ ಮನೆಯವರು ಕಳೆದುಕೊಂಡರಲ್ಲ, ಸತ್ತು ಹೋದರಲ್ಲಾ ಅವರನ್ನು ನೋಡಲು ಆಗುವುದಿಲ್ಲ. ನಾನು ಸತ್ತವರ ಮನೆಗೆ ಸಾಂತ್ವನ ಹೇಳಲು ಹೋಗಿದ್ದೆ. ಅವರಿಗೆ ಎಷ್ಟು ಪರಿಹಾರ ಕೊಟ್ಟರೂ ಸಾಕಾಗುವುದಿಲ್ಲ. ಸರ್ಕಾರದಿಂದ

ಒಂದೊಂದು ಲಕ್ಷ ಪರಿಹಾರ ಕೊಟ್ಟಿದ್ದಾರೆ. ಎರಡು ಕುಟುಂಬದಲ್ಲಿ ಎಂಟೆಂಟು ಜನರು ಸತ್ತು ಹೋದರೆ ಅವರು ಬರುತ್ತಾರೆಯೇ? ಸತ್ತಿರುವವರಲ್ಲಿ ಬಹುತೇಕವಾಗಿ ಹೆಣ್ಣು ಮಕ್ಕಳು. ಅವರ ರೋದನವನ್ನು ನೋಡಿದರೆ ಮನುಷ್ಯನ ಜೀವನ ಎಷ್ಟು ಕ್ಷಣಿಕ ಎಂದು ಬಹಳ ನೋವು ಉಂಟಾಯಿತು. ಲೋಕೋಪಯೋಗಿ ಇಲಾಖೆಯ ಸಚಿವರಾದ ಮಾನ್ಯ ಉದಾಸಿಯವರು ಇಲ್ಲೇ ಇದ್ದಾರೆ. ತಡೆಗೋಡೆ ಹಾಕುತ್ತೇವೆ ಅಂತ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಆ ಕೆಲಸವನ್ನು ಒಂದು ತಿಂಗಳಿನಲ್ಲಿ ಮಾಡಿ ಮುಗಿಸಿ. ನಾವು ಮಾಡಿಲ್ಲ, ನೀವು ಮಾಡಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಮೊದಲು ತಡೆಗೋಡೆಯನ್ನು ಹಾಕಿ. ಅದಕ್ಕೆ ಭಾರಿ ಹಣವೇನು ಖರ್ಚಾಗುವುದಿಲ್ಲ. ಕಾರಣ ಏನೇ ಆಗಿರಲಿ, ದಯಮಾಡಿ ಎಲ್ಲೆಲ್ಲಿ National, State High Way ನಲ್ಲಿ traffic ಹೆಚ್ಚಾಗಿರುತ್ತದೆ ಎಲ್ಲಾ ಕಡೆ ತಡೆಗೋಡೆಯನ್ನು ಹಾಕುವುದು ಅತ್ಯಂತ ಅವಶ್ಯಕ. ಈಗಲಾದರೂ ನಾವು ಎಚ್ಚರಿಕೆಯನ್ನು ವಹಿಸದಿದ್ದರೆ ಈ ರೀತಿಯ ಅಪಘಾತಗಳು ಆಗುತ್ತಲೇ ಇರುತ್ತದೆ. ನಾವು ಅವರ driving negligence ಆಗಿತ್ತು, over load ಮಾಡಿಕೊಂಡಿದ್ದರು ಎಂದು ಏನೋ ಕಾರಣಗಳನ್ನು ಕೊಡಬಹುದು. ಆ ರೀತಿಯ ಕಾರಣಗಳನ್ನು ಕೊಡುವುದು ಬೇರೆ, ಆದರೆ ತಡೆಗೋಡೆ ಇದ್ದರೆ over-load ಇರಲಿ, negligence ಇರಲಿ ಏನಾದರೂ ಇರಲಿ ಉಳಿದುಕೊಳ್ಳುತ್ತಿದ್ದರೋ? ಆಗ ಇಷ್ಟೊಂದು ಜನರು ಸಾಯುತ್ತಿರಲಿಲ್ಲ. ಸ್ವಲ್ಪ ಸಾವು ನೋವು ಆಗುತ್ತಿತ್ತು. ಹಾಗೆಯೇ ಚಳ್ಳಕೆರೆಯ ಹತ್ತಿರ ಬಸ್ಸಿಗೆ ಬೆಂಕಿ ಹಚ್ಚಿಕೊಂಡು ಸತ್ತು ಹೋದರು, ಎಲ್ಲರು ಕರುಕಲಾಗಿ ಹೋದರು. ಅಮಾನವೀಯವಾದ ದೃಶ್ಯ. ಅಲ್ಲೂ ಇದೇ ರೀತಿ ತಡೆಗೋಡೆ ಇಲ್ಲ. ರಾತ್ರಿ ಹೊತ್ತು ಬಸ್ಸನ್ನು ಓಡಿಸುತ್ತಿದ್ದರು, ಬೆಂಕಿ ಹತ್ತಿಕೊಂಡು ಸತ್ತು ಹೋದರು. ಮನುಷ್ಯನ ಜೀವ ಅದು ಯಾರದ್ದೇ ಆಗಿರಲಿ ಬಹಳ ಬೆಲೆ ಇರತಕದ್ದು. ಆ ಕಾರಣದಿಂದ ಮಾನ್ಯ ಉದಾಸಿಯವರಿಗೆ ನಾನು ಕೂಡಲೆ, ಇದರ ಕಡೆಗೆ ಗಮನ ಹರಿಸಬೇಕೆಂದು ಕೋರುತ್ತೇನೆ. ಕೇವಲ statement ಕೊಟ್ಟು ಹಾಗೆಯೇ ಬಿಡಬೇಡಿ. ಈಗಾಗಲೇ ಈ ದಿಸೆಯಲ್ಲಿ ಕೆಲಸ ಶುರುವಾಗಬೇಕಾಗಿತ್ತು. ಆದರೆ ಇನ್ನೂ ಆ ಕೆಲಸವನ್ನು ಶುರು ಮಾಡಿದಂತೆ ಕಾಣುವುದಿಲ್ಲ. ಆ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಿ. ಎಲ್ಲಾ National High-ways, State High-ways ಮತ್ತು Major District Road ಗಳ ಪಕ್ಕದ ಕೆರೆಗಳಿಗೆ ತಡೆಗೋಡೆಗಳನ್ನು ನಿರ್ಮಿಸುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಕೆರೆ ದುರಂತದಲ್ಲಿ

ಮೃತರಾಗಿರುವ 31 ಜನರ ಆತ್ಮಕ್ಕೆ ಶಾಂತಿ ಕೋರಿ, ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲೆಂದು ಪ್ರಾರ್ಥನೆ ಮಾಡಿ ಮಾನ್ಯ ಸಭಾಧ್ಯಕ್ಷರು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ಮಾಜಿ ವಿಧಾನಸಭಾ ಸದಸ್ಯರಾದ ಕೆ.ಎಂ. ಕೃಷ್ಣಮೂರ್ತಿಯವರು, ಮಾಜಿ ಸಚಿವರು ಮತ್ತು ರಾಜ್ಯಸಭಾ ಸದಸ್ಯರಾಗಿದ್ದಂತಹ ರಾಜಶೇಖರ ಮೂರ್ತಿಯವರು, ಮಾನ್ಯ ಬೀಳಗಿಯವರು, ಮಾನ್ಯ ಅಶ್ವತ್ಥನಾರಾಯಣ ರೆಡ್ಡಿಯವರು, ಮಾನ್ಯ ಬಿ.ಎಲ್. ಸುಬ್ಬಮ್ಮನವರು ಮಾನ್ಯ ಕಬಾಡೆಯವರು, ಮಾನ್ಯ ಕೊಗಳಿ ಕರಿಬಸವನಗೌಡರವರು, ಮಾನ್ಯ ಮದನ್‌ಲಾಲ್ ರವರು, ಪದ್ಮಭೂಷಣ ಪುಟ್ಟರಾಜ ಗವಾಯಿರವರು, ಹಿರಿಯ ಪತ್ರಕರ್ತರಾಗಿದ್ದಂತಹ ಶ್ರೀಧರಾಚಾರ್ ರವರು, ಮಾನ್ಯ ಬಿ.ಎಸ್. ರಂಗಾರವರು ಮತ್ತು ಮೈಸೂರಿನ ಉಂಡಬತ್ತಿನ ಕೆರೆ ದುರಂತದಲ್ಲಿ ಸಾವಿಗೀಡಾದ 27 ಜನರಿಗೆ ಸಂಬಂಧಿಸಿದಂತೆ ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಕೃಷ್ಣಮೂರ್ತಿಯವರು 1994ರಲ್ಲಿ ವಿಧಾನ ಸಭಾ ಸದಸ್ಯರಾದರು. ಅದಕ್ಕೆ ಮುನ್ನ 1986ರಲ್ಲಿ ಅವರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಈ ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ಯಾವುದೇ reservation ಇಲ್ಲದಂತಹ ಸಂದರ್ಭದಲ್ಲಿ ಮಾನ್ಯ ಕೃಷ್ಣಮೂರ್ತಿಯವರನ್ನು ನಮ್ಮ ಪಕ್ಷ ಅವತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನಾಗಿ ಮಾಡಿತ್ತು ಎನ್ನುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಅವರು 1994 ರಿಂದ 2010ರವರೆಗೆ ಸತತವಾಗಿ ನಾಲ್ಕು ಬಾರಿ ವಿಧಾನ ಸಭಾ ಸದಸ್ಯರಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ಸಿಗಲೆಂದು ನಾನು ಹಾರೈಸುತ್ತೇನೆ. ಮಾನ್ಯ ರಾಜಶೇಖರಮೂರ್ತಿಯವರು ಮೈಸೂರು ಜಿಲ್ಲೆಯವರಾಗಿದ್ದು, ಟಿ. ನರಸೀಪುರ ತಾಲ್ಲೂಕಿನ ಮಾಲಂಗಿ ಗ್ರಾಮದಲ್ಲಿ ಜನಿಸಿದ್ದರು. ಕಾನೂನು ಪದವೀಧರರಾಗಿದ್ದ ಅವರು ಹಣಕಾಸಿನ ಸಚಿವರಾಗಿ, ಕಂದಾಯ ಮಂತ್ರಿಗಳಾಗಿ ಮತ್ತು ಕೈಗಾರಿಕಾ ಮಂತ್ರಿಗಳಾಗಿ ಕೆಲಸ ಮಾಡಿದ್ದರು. ರಾಜ್ಯ ಸಭೆಗೆ ಅವರು ಸತತವಾಗಿ ಮೂರು ಬಾರಿ ಆಯ್ಕೆಯಾಗಿದ್ದರು. ವಿಧಾನ ಸಭಾ ಸದಸ್ಯರಾಗಿದ್ದಾಗ ಈ ರಾಜ್ಯದಲ್ಲಿ ಅವರದೇ ಆದಂತಹ ಪ್ರಾಮಾಣೀಕತನದಿಂದ ಕೆಲಸ ಮಾಡಿದ್ದಾರೆ. ಶ್ರೀಯುತರು ಈ ರಾಜ್ಯದ ಹಣಕಾಸಿನ ಸಚಿವರಾಗಿದ್ದಾಗ ಬಹಳ

ಪ್ರಾಮಾಣಿಕರಾಗಿ ಕೆಲಸ ಮಾಡಿದ್ದರು ಎಂಬುದನ್ನು ನಾವಿಲ್ಲಿ ಹೇಳಲೇಬೇಕಾಗುತ್ತದೆ. ಅವರ ಆತ್ಮಕ್ಕೆ ಸಹ ನಾನು ಶಾಂತಿ ಕೋರುತ್ತೇನೆ. ಮಾನ್ಯ ಬೀಳಗಿಯವರ ಬಗ್ಗೆ ಹೇಳುವುದಾದರೆ, ಶ್ರೀಯುತರು 1994 ರಿಂದ 1996ರವರೆಗೆ ಸಾರಿಗೆ ಸಚಿವರಾಗಿ ಸೇವೆ ಸಲ್ಲಿಸಿದ್ದರು. ನಮ್ಮ ಪಕ್ಷದ ಮುಖಂಡರಲ್ಲೊಬ್ಬರಾದ ದಿವಂಗತ ಅಶ್ವತ್ಥನಾರಾಯಣರೆಡ್ಡಿಯವರು ಗೃಹ ಖಾತೆ ರಾಜ್ಯ ಸ್ಚಚಿವರಾಗಿ ಕಾರ್ಯನಿರ್ವಹಿಸಿದ್ದರು. ಅವರ ಆತ್ಮಕ್ಕೂ ಸಹ ಶಾಂತಿ ಸಿಗಲೆಂದು ನಾನು ಆಶಿಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಯವರಾಗಿದ್ದ ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು 1952 ಮತ್ತು 1962ರಲ್ಲಿ ಎರಡು ಸಾರಿ ಮಹಿಳಾ ಶಾಸಕರಾಗಿ ಆಯ್ಕೆಯಾಗಿದ್ದರು. ಅವರೂ ಸಹ ಉತ್ತಮವಾಗಿ ಕೆಲಸ ಮಾಡಿದ್ದರು. ಮಾನ್ಯ ಕಬಾಡೆಯವರು, ಮಾನ್ಯ ಕರಿಬಸವನಗೌಡರು, ಬೀದರ್‌ನ ಮದನ್‌ಲಾಲ್ ರವರು ವಿಧಾನ ಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರೆಲ್ಲರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಸಿಗಲೆಂದು ಆಶಿಸುತ್ತೇನೆ. 1914ರಲ್ಲಿ ಜನಿಸಿದ್ದಂತಹ ಡಾ: ಪುಟ್ಟರಾಜ ಗವಾಯಿರವರು 1944ರಲ್ಲಿ ವೀರೇಶ್ವರ ಪುಣ್ಯಾಶ್ರಮದ ಉತ್ತರಾಧಿಕಾರಿಯಾಗಿದ್ದರು. ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತ ನೀಡಲೆಂದು ಕೋರುತ್ತೇನೆ. ಮಾನ್ಯ ಶ್ರೀಧರಾಚಾರ್‌ರವರು 'ಪ್ರಜಾವಾಣಿ' ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದ್ದರು. ಮಾನ್ಯ ಬಿ.ಎಸ್. ರಂಗಾರವರು 45 ಚಿತ್ರಗಳನ್ನು ನಿರ್ಮಿಸಿ, ಅವರದೇ ಆದಂತಹ ಹೆಸರನ್ನು ಗಳಿಸಿದ್ದಾರೆ. ಇವರೆಲ್ಲರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದು ಕೋರುತ್ತೇನೆ. ಮೈಸೂರಿನ ಕೆರೆ ದುರಂತದ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾ ಒಟ್ಟು 31 ಜನ ಮೃತರಾಗಿರುವ ವಿಷಯ ತಿಳಿಸಿದರು. 27 ಜನ ದುರಂತ ನಡೆದ ದಿನದಂದೇ ಮೃತ ಪಟ್ಟಿದ್ದರು. 14-12-2010ರಲ್ಲಿ ಇನ್ನೂ ನಾಲ್ಕು ಜನ ಮೃತರಾದರು. ಘಟನೆ ನಡೆದ ನಂತರ ಅದರ dead bodies ಸಿಕ್ಕಿದ್ದವು. ಅದಲ್ಲದೆ ಅಪಘಾತಕ್ಕೀಡಾದ ಇನ್ನೊಬ್ಬರು ಘಟನೆ ನಡೆದ 3-4 ದಿನಗಳ ನಂತರ ಮೃತರಾದರು. ಹೀಗಾಗಿ ಆ ದುರಂತದಲ್ಲಿ ಒಟ್ಟು 32 ಜನರು ಮೃತರಾಗಿದ್ದಾರೆ. ಮೃತರ ಕುಟುಂಬ ವರ್ಗದವರಿಗೆ ಇಲ್ಲಿಯವರೆಗೂ ಪರಿಹಾರದ ಹಣ ಸಿಕ್ಕಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಾಗ ಹಿಂದಿನ ಸರ್ಕಾರಗಳ ಅವಧಿಯಲ್ಲಿ ರಸ್ತೆಗಳನ್ನು ಸರಿಯಾಗಿ ಮಾಡಿದ್ದರೆ ಅನುಕೂಲವಾಗುತ್ತಿತ್ತು ಎಂದು ಹೇಳಿದರು. ನಾನು ಲೋಕೋಪಯೋಗಿ ಸಚಿವನಾಗಿದ್ದಾಗ, ಮೈಸೂರು-ನಂಜನಗೂಡು four-lane ರಸ್ತೆ ಮಾಡಲು ಯೋಜಿಸಿದ್ದೆ. ಆ ಕಡತ ಮಾನ್ಯ ಉದಾಸಿಯವರ

ಬಳಿ ಇರಬಹುದು. ಅದು ಮಾನ್ಯ ಉದಾಸಿಯವರಿಗೆ ತಿಳಿದಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಬೇಕಾದರೆ ಮಾನ್ಯ ಉದಾಸಿಯವರು ಆ ಬಗೆಗಿನ ಕಡತವನ್ನು ತೆಗೆದು ನೋಡಿ. ಮೈಸೂರು-ನಂಜನಗೂಡು four-lane ರಸ್ತೆ ಮಾಡಲು ನಮ್ಮ ಕಾಲದಲ್ಲೇ ಕೇಂದ್ರ ಸರ್ಕಾರಕ್ಕೆ proposal ಕಳುಹಿಸಿ ಅಂಗೀಕಾರ ದೊರಕಿಸಿದ್ದೆ. ಮುಂದೆ ಅದು ಏನು ಆಗಿದೆಯೋ ನನಗೆ ಗೊತ್ತಿಲ್ಲ. ಮಾನ್ಯ ಉದಾಸಿಯವರು ಏಕೆ ಅದರ ಬಗ್ಗೆ ಗಮನ ಹರಿಸುತ್ತಿಲ್ಲವೋ ನನಗೆ ಗೊತ್ತಿಲ್ಲ. ಹಿಂದೆ ನಾವು ಏನೂ ಮಾಡಿಲ್ಲ ಎಂಬ ಮಾತು ಬರಬಾರದು ಎಂಬ ಉದ್ದೇಶದಿಂದ ಹಿಂದೆ ನಾನು ಮಾಡಿದ್ದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ನಾನು ಯಾರನ್ನೂ ದೂರುತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರು ಹಿಂದಿನ ಸರ್ಕಾರಗಳಲ್ಲಿ ಇದ್ದವರೂ ಈ ರಸ್ತೆ ಕಡೆಗೆ ಗಮನ ಹರಿಸಲಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದರಿಂದ ನಾನು ಈ ಮಾತನ್ನು ಹೇಳಬೇಕಾಯಿತು. ಈ ಪ್ರಕರಣದ ಬಗ್ಗೆ ಹೊಣೆಯನ್ನು ಈ ಸರ್ಕಾರದವರು ಹೊರಲೇಬೇಕಾಗುತ್ತದೆ. ಮೈಸೂರಿನಿಂದ ನಂಜನಗೂಡಿನವರೆಗೆ ಬರಬೇಕಾದರೆ ಎಷ್ಟು ಗುಂಡಿಗಳಿವೆ ಎಂಬುದನ್ನು ಮಾನ್ಯ ಉದಾಸಿಯವರೇ ಒಮ್ಮೆ ಅಲ್ಲಿಗೆ ಹೋಗಿ ನೋಡಲಿ. ಅಂದು ಅಪಘಾತವಾಗಬೇಕಾದರೆ ರಸ್ತೆಯಲ್ಲಿ ಗುಂಡಿಗಳು ಇದ್ದದ್ದೂ ಸಹ ಒಂದು ಕಾರಣವೆಂದು ಹೇಳಲಾಗುತ್ತಿದೆ. ಅದರ ಬಗ್ಗೆ ನಾವೇನೂ ಆಪಾದನೆ ಮಾಡಲಿಕ್ಕೆ ಹೋಗುವುದಿಲ್ಲ. ಇದೊಂದೇ ಕಡೆಗೆ ಮಾತ್ರವಲ್ಲ, ದಯಮಾಡಿ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ರಸ್ತೆಗಳ ಪಕ್ಕ ಇರುವ ಕೆರೆಗಳಿಗೆ ತಡೆಗೋಡೆಗಳನ್ನು ನಿರ್ಮಿಸಬೇಕು. ಉದಾಹರಣೆಗೆ ಹೇಳುವುದಾದರೆ, ಮಾನ್ಯ ಶಿವಲಿಂಗೇಗೌಡರು ಸದನಕ್ಕೆ ಬಂದಿದ್ದಾರೋ, ಇಲ್ಲವೋ ಗೊತ್ತಿಲ್ಲ, ಬಾಣಾವರದಿಂದ ಹುಳಿಯಾರಿಗೆ ಹೋಗುವ ಹಾದಿಯಲ್ಲಿ ಎರಡು ಕೆರೆಗಳಿವೆ. ಆ ಕೆರೆಯೊಂದರಲ್ಲಿ ಮೊನ್ನೆ ಸಕ್ಕರೆ ಲಾರಿಯೊಂದು ಬಿದ್ದು ಹೋಗಿ ಸುಮಾರು 30 ಟನ್ ಸಕ್ಕರೆ ಪೂರ್ತಿ ನೀರಿನಲ್ಲಿ ಮುಳುಗಿ ಹೋಗಿತ್ತು. ಅಲ್ಲಿ ಒಟ್ಟು ಎರಡು ಕೆರೆಗಳಿವೆ. ಬಾಣಾವರದಿಂದ ಜಾವಗಲ್ ಕಡೆಗೆ ಬರುವಾಗ ಒಂದು ಕೆರೆ ಇದೆ. ಜಾವಗಲ್‌ನಿಂದ ಹುಳಿಯಾರಿಗೆ ಬರುವಾಗ ಇನ್ನೊಂದು ಕೆರೆ ಇದೆ. ಅದೆಲ್ಲದರ ಕಡೆಗೆ ಗಮನ ಹರಿಸಿ ಕೆರೆಗಳ ಪಕ್ಕ ತಡೆಗೋಡೆಗಳನ್ನು ನಿರ್ಮಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡುತ್ತೇನೆ. ನಾನು ಮಾನ್ಯ ಸಚಿವರು ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿಲ್ಲ. State High-way ಇರಬಹುದು, National High-way ಇರಬಹುದು, ಯಾವ್ಯಾವ ಭಾಗಗಳಲ್ಲಿ ಹೆಚ್ಚು

ವಾಹನಗಳು ಓಡಾಡುತ್ತವೆಯೋ, ಅಂತಹ ಭಾಗಗಳ ರಸ್ತೆಗಳ ಪಕ್ಕ ಇರುವ ಕೆರೆಗಳಿಗೆ ತಡೆಗೋಡೆಗಳನ್ನು ನಿರ್ಮಿಸಿ ಸುರಕ್ಷತೆ ಕಾಪಾಡಿ ಎನ್ನುವ ದೃಷ್ಟಿಯಿಂದ ಇದನ್ನೆಲ್ಲಾ ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರು ಬಾಕಿ ಕೆಲಸಗಳು ಏನಿದ್ದರೂ ಸಹ, at least ರಸ್ತೆಯಲ್ಲಿರುವ ಗುಂಡಿಗಳನ್ನಾದರೂ ಮುಚ್ಚಿ ಕೊಡಬೇಕೆಂದು ಮನವಿ ಮಾಡುತ್ತೇನೆ. ಈ ದುರಂತದಲ್ಲಿ ಕೆಲವೊಂದು ಕುಟುಂಬದಲ್ಲಿ 5–8 ಜನ ತೀರಿ ಹೋಗಿದ್ದಾರೆ. ಅವರೆಲ್ಲರ ಕುಟುಂಬಕ್ಕೆ ಸರ್ಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಹಾರವನ್ನು ಕೊಡಬೇಕಾಗುತ್ತದೆ. ಕೇವಲ 1 ಲಕ್ಷ ರೂ.ಗಳ ಪರಿಹಾರ ನೀಡುವುದರಿಂದ ಏನು ಆಗುವುದಿಲ್ಲ. ಅವರಿಗೆ ಕನಿಷ್ಠ 5 ಲಕ್ಷ ರೂ.ಗಳ ಪರಿಹಾರ ಕೊಡುವುದು ಸೂಕ್ತವೆಂಬ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಮೊದಲು ಮೃತರಾದ 27 ಜನರ ಕುಟುಂಬ, ಮೃತಪಟ್ಟು ನಂತರ ಶವ ದೊರಕಿದ ಇನ್ನುಳಿದ 5 ಕುಟುಂಬ, ಒಟ್ಟಾರೆಯಾಗಿ 32 ಜನರ ಕುಟುಂಬದವರು ಮೃತರಾಗಿದ್ದರು. ಕೊನೆಯದಾಗಿ ಶವ ಸಿಕ್ಕಿದ ಇನ್ನೊಂದು ಕುಟುಂಬದವರಿಗೆ ಇಲ್ಲಿಯವರೆಗೂ ಸರ್ಕಾರ ಪರಿಹಾರದ ಹಣ ಕೊಟ್ಟಿಲ್ಲ. ಅವರಿಗೂ ಸಹ ಪರಿಹಾರವನ್ನು ಸರ್ಕಾರ ಕೊಡಬೇಕೆಂದು ಕೋರುತ್ತೇನೆ. ದುರಂತದಲ್ಲಿ ಸಾವಿಗೀಡಾದ ಎಲ್ಲರ ಆತ್ಮಕ್ಕೆ ಸಿಗಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಮೃತರ ಸಾವಿನಿಂದಾದ ದುಃಖವನ್ನು ಭರಿಸುವ ಶಕ್ತಿ ಸಿಗಲೆಂದು ಆಶಿಸಿ, ಮಾನ್ಯ ಸಭಾಧ್ಯಕ್ಷರು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲ ಕೊಡುತ್ತೇನೆ. ಹಿರಿಯರಾದಂತಹ ಕೆಲವು ಪ್ರಮುಖ ಮಹನೀಯರು ನಮ್ಮನ್ನು ಬಿಟ್ಟು ಆಗಲಿದ್ದಾರೆ. ಮಾನ್ಯ ಕೃಷ್ಣಮೂರ್ತಿಯವರು ಈ ಸಭೆಯ ಸದಸ್ಯರಾಗಿ ನಾಲ್ಕು ಬಾರಿ ಆಯ್ಕೆಯಾಗಿದ್ದರು. 1994ರಲ್ಲಿ ಅವರು ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಅದೇ ಸಂದರ್ಭದಲ್ಲಿ ನಾನೂ ಸಹ 1994ರಲ್ಲಿ ಪ್ರಥಮ ಬಾರಿಗೆ ವಿಧಾನಸಭೇ ಪ್ರವೇಶಿಸಿದ್ದೆ. ಅಂದಿನಿಂದ ಅವರು ಸತತವಾಗಿ ನಾಲ್ಕು ಸಲ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದರಿಂದಾಗಿ, ಅವರ ಜೊತೆಗೆ ನಾನು ನಿಕಟ ಸಂಪರ್ಕ ಹೊಂದಲು ಸಾಧ್ಯವಾಯಿತು. ಅವರಲ್ಲಿ ಹೋರಾಟದ ಮನೋಭಾವನೆ ಇತ್ತು. ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ ತಮ್ಮ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಹೆಚ್ಚಿನ

ಕಾಳಜಿಯನ್ನು ಅವರು ವಹಿಸುತ್ತಿದ್ದರು. ನಾನು Revenue Minister ಆಗಿದ್ದಾಗ ಚಿಕ್ಕಮಗಳೂರಿನಲ್ಲಿ review meeting ವೊಂದನ್ನು ನಡೆಸಿದ್ದೆ. ಆ ಮೀಟಿಂಗ್‌ನಲ್ಲಿ ಮಾನ್ಯ ಕೃಷ್ಣಮೂರ್ತಿಯವರೇ ಹೆಚ್ಚಿನ ಸಲಹೆ/ಸೂಚನೆಗಳನ್ನು ಕೊಟ್ಟಿದ್ದರು. ಆ ರೀತಿಯಾಗಿ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಅವರು ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಶಾಸನಸಭೆಯ debateಗಳಲ್ಲಿ ಸಹ ಅವರು ಹೆಚ್ಚು ಕ್ರಿಯಾಶೀಲರಾಗಿ particpate ಮಾಡುತ್ತಿದ್ದರು. ಅಂತಹ ಹೋರಾಟ ಗಾರರಾಗಿದ್ದ ಮಾನ್ಯ ಕೃಷ್ಣಮೂರ್ತಿಯವರು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಮಾನ್ಯ ರಾಜಶೇಖರಮೂರ್ತಿಯವರು ರಾಜಕಾರಣದಲ್ಲಿ ಬಹಳ ಹಿರಿಯರಾಗಿದ್ದರು. ರಾಜಕಾರಣದಲ್ಲಿ ಉನ್ನತ ಮಟ್ಟದ ಸಾಧನೆ ಮಾಡಿದಂತಹ ವ್ಯಕ್ತಿ ಅವರಾಗದ್ದರು. 1952ನೇ ಇಸವಿಯಿಂದ ಅವರು ಸತತವಾಗಿ ಆಯ್ಕೆಯಾಗಿ ಬರುತ್ತಿದ್ದರು. ರಾಜಕಾರಣದಲ್ಲಿ ಬಹಳ ದೀರ್ಘಕಾಲದ ಅನುಭವ ಅವರಿಗಿತ್ತು. ವಿಧಾನಸಭೆ ಇರಬಹುದು, ರಾಜ್ಯ ಸಭೆ ಇರಬಹುದು, ಲೋಕಸಭೆ ಇರಬಹುದು, ಎಲ್ಲಾ ಹಂತದ democratic set-upನಲ್ಲಿ ಅವರು ಕೆಲಸ ಮಾಡಿ ಅನುಭವ ಗಳಿಸಿದ್ದರು. ರಾಜಕಾರಣದಲ್ಲಿದ್ದು ಒಬ್ಬ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡಿದಂಥ ವ್ಯಕ್ತಿತ್ವವನ್ನು ರಾಜಶೇಖರ ಮೂರ್ತಿಯವರಲ್ಲಿ ನಾನು ನೋಡಿದ್ದೇನೆ. ಅವರಿಗೆ ಬಹಳಷ್ಟು ವಯಸ್ಸಾಗಿದ್ದರೂ ಕೂಡ ಒಬ್ಬ ಕ್ರಿಯಾಶೀಲರಾಗಿ ರಾಜಕೀಯ ಕೆಲಸ ಕಾರ್ಯಗಳನ್ನು ಮಾಡುವುದನ್ನು ನಾವು ನೋಡಿದ್ದೇವೆ. ಅವರು ನಮ್ಮ ಪಕ್ಷಕ್ಕೆ ಬಂದಾಗ ಅವರ ಜೊತೆ ಬಹಳ ಹತ್ತಿರದ ಸಂಪರ್ಕ ಬಂತು. ಹೀಗಾಗಿ ಅವರ ಜೀವನ ಹೇಗಿತ್ತೆಂದು ನೋಡುವಂಥ ಒಂದು ಅವಕಾಶ ನಮಗೆ ಒದಗಿ ಬಂತು. ಅವರು ರಾಜ್ಯ ಸಭಾ ಸದಸ್ಯರಾಗಿ ಮತ್ತು ಅವರ ಜೊತೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಅದರಲ್ಲೂ ಹಣಕಾಸಿನ ನಿರ್ವಹಣೆ, ವ್ಯವಸ್ಥೆಯ ಬಗ್ಗೆ ಅವರಲ್ಲಿರುವ ಒಂದು ಅನುಭವವನ್ನು ನಾವು ನೋಡಿದಾಗ ಅವರಿಂದ ಕಲಿಯುವುದು ಬಹಳ ಇದೆ. ಹಿಂದೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಒಬ್ಬ ಹಣಕಾಸು ಸಚಿವರಾಗಿ, ಅವರ ದಕ್ಷತೆಯನ್ನು ನಾವು ಎಲ್ಲಿ ಹೋದರೂ ಕೂಡ ಕರ್ನಾಟಕದ ಜನತೆ ನೆನೆಸಿಕೊಳ್ಳುತ್ತಾರೆ. ರಾಜಶೇಖರ ಮೂರ್ತಿಯವರನ್ನು ಯಾವ ರೀತಿ ನೋಡಿದ್ದೇವೆಂದರೆ, ಒಬ್ಬ ಉತ್ತಮ ಹಣಕಾಸು ಮಂತ್ರಿಯಾಗಿ ಅವರನ್ನು ನೋಡಿದ್ದೇವೆ. ಹಣಕಾಸಿನ ವ್ಯವಸ್ಥೆಯನ್ನು ಬಹಳ ಉತ್ತಮ ಮಟ್ಟಕ್ಕೆ ತಂದಂಥ

ವ್ಯಕ್ತಿ ಮತ್ತು ಒಬ್ಬ ಹಣಕಾಸಿನ ಸಚಿವರಾಗಿ ಯಾವ ರೀತಿ ಕೆಲಸವನ್ನು ನಿರ್ವಹಣೆ ಮಾಡಬೇಕೆನ್ನುವುದನ್ನು ರಾಜಶೇಖರ ಮೂರ್ತಿಯವರು ತೋರಿಸಿ ಕೊಟ್ಟರು. ಇಂಥ ಒಬ್ಬ ದಕ್ಷ ಮತ್ತು ರಾಜಕಾರಣದಲ್ಲಿ ಶಿಸ್ತನ್ನು ಉಳಿಸಿಕೊಂಡು ಹೋದಂಥ ವ್ಯಕ್ತಿ ರಾಜಶೇಖರಮೂರ್ತಿಯವರು. ಬಹಳ ಎತ್ತರಕ್ಕೆ ಹೋದಂಥ ವ್ಯಕ್ತಿ, ಹೀಗಾಗಿ ನಿಜವಾಗಿ ಅವರು ಯಾವುದೋ ಒಂದು ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಾಗಬೇಕಾಗಿತ್ತು. ಮುಖ್ಯಮಂತ್ರಿಗಳಾಗುವುದಕ್ಕೆ ಯೋಗ್ಯರಾದ ವ್ಯಕ್ತಿ ಎಂದರೆ ರಾಜಶೇಖರ ಮೂರ್ತಿಯವರು. ಆದರೆ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಅಂಥವರು ಮುಖ್ಯಮಂತ್ರಿಯಾಗುವುದಕ್ಕೆ ಅವಕಾಶ ಸಿಗಲಿಲ್ಲ. ಹೀಗಾಗಿ ಅಂಥ ವ್ಯಕ್ತಿತ್ವವುಳ್ಳ ರಾಜಶೇಖರ ಮೂರ್ತಿಯವರಿಂದ ನಮ್ಮ ಯುವ ಜನಾಂಗ ಮತ್ತು ಇವತ್ತಿನ ಶಾಸಕರು ಕಲಿಯುವುದು ಬಹಳಷ್ಟು ಇದೆ. ಅವರ ಜೀವನದಿಂದ ಹೆಚ್ಚು ನಾವು ಕಲಿಯಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ.

ಅದೇ ರೀತಿ ಇವತ್ತು ಕೆ.ಎಸ್. ಬೀಳಗಿಯವರು, ನಮ್ಮ ಹುಬ್ಬಳ್ಳಿಯವರು, ಹುಬ್ಬಳ್ಳಿಯಲ್ಲಿ ಅಡ್ವೋಕೇಟ್ ಆಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ನಮ್ಮ ಕಾಕಂದಿರಾದಂಥ ಸದಾಶಿವ ಶೆಟ್ಟರ್ ಅವರು 1967ರಲ್ಲಿ ಜನಸಂಘದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದವರ ಕ್ಲಾಸ್‌ಮೇಟ್ ಕೆ.ಎಸ್. ಬೀಳಗಿಯವರು. ಹೀಗಾಗಿ ಅವರಿಗೆ ಮತ್ತು ಸದಾಶಿವ ಶೆಟ್ಟರ್ ಅವರಿಗೆ ಬಹಳ ಆತ್ಮೀಯವಾದ ಒಂದು ಸಂಬಂಧ. ಹೀಗಾಗಿ ನಮಗೂ ಕೆ.ಎಸ್. ಬೀಳಗಿಯವರೊಡನೆ ಸಂಪರ್ಕ ಬಂತು. ಅವರು ಜನತಾದಳದಲ್ಲಿದ್ದರು, ಎರಡು ಸಲ ಅವರು ವಿಧಾನ ಸಭೆಗೆ ಆಯ್ಕೆಯಾದರು. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಬೊಮ್ಮಾಯಿಯವರೊಡನೆ ಬಹಳ ನಿಕಟವಾದ ಸಂಪರ್ಕವನ್ನು ರಾಜಕೀಯವಾಗಿ ಇಟ್ಟುಕೊಂಡಿದ್ದರು ಮತ್ತು ಅವರ ವಿಚಾರ ಧಾರೆಗೆ ಹೊಂದಿ ಕೊಂಡು ಕೆಲಸ ಮಾಡಿದಂಥ ವ್ಯಕ್ತಿ, ಕೆ.ಎಸ್. ಬೀಳಗಿಯವರು ಸಾರಿಗೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಮತ್ತು ಅಡ್ವೋಕೇಟ್ ಆಗಿದ್ದಾಗ ಒಳ್ಳೆಯ ಪ್ರಾಕ್ಟೀಸ್ ಮಾಡಿದಂಥ ಕೆ.ಎಸ್. ಬೀಳಗಿಯವರು. ಸಾರ್ವಜನಿಕ ರಂಗದಲ್ಲಿದ್ದು ಕೊಂಡು ಒಂದು ಪಾರದರ್ಶಕತೆ, ಪ್ರಾಮಾಣಿಕತೆಯನ್ನು ಇಟ್ಟುಕೊಂಡಂಥ ವ್ಯಕ್ತಿ ಕೆ.ಎಸ್. ಬೀಳಗಿಯವರು. ಮುಂದೆ ಒಂದು ದಿವಸ ರಾಜಕಾರಣ ಬೇಡವೆಂದಾಗ, ಸಾರ್ವಜನಿಕ ಜೀವನ ಬೇಡವೆಂದಾಗ ತಮ್ಮ ಜೀವನವನ್ನು ತಮ್ಮ ಕುಟುಂಬಕ್ಕೆ ಸೀಮಿತವಾಗಿ ಇಟ್ಟುಕೊಂಡು ಕೆಲಸ ಮಾಡಿದಂಥ ವ್ಯಕ್ತಿ ಕೆ.ಎಸ್. ಬೀಳಗಿಯವರು. ಅಂಥ ಒಬ್ಬ ವ್ಯಕ್ತಿ ಹುಬ್ಬಳ್ಳಿಯವರಾದರೂ

ಬ್ಯಾಡಗಿಯಿಂದ ಎರಡು ಸಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅಂಥ ವ್ಯಕ್ತಿ ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭಧಲ್ಲಿ ಹೇಳುತ್ತಿದ್ದೇನೆ.

ಇನ್ನು ಪಂಡಿತ ಪುಟ್ಟರಾಜ ಗವಾಯಿರವರು ಪಂಚಾಕ್ಷರಿ ಗವಾಯಿಯವರ ಶಿಷ್ಯರಾಗಿ, ವಿಶೇಷವಾಗಿ ಕುರುಡರಾಗಿ ಇವತ್ತು ಹಲವಾರು ಸಾಹಿತ್ಯ ಗ್ರಂಥಗಳನ್ನು ರಚನೆ ಮಾಡಿದ್ದು, ಅಧ್ಯಯನ ಮಾಡಿದ್ದು ನಾವು ನೋಡುತ್ತಿದ್ದೇವೆ. ಸಂಸ್ಕೃತ ವಚನವಿರಬಹುದು, ವೇದಾಂತ, ಕನ್ನಡ ವ್ಯಾಕರಣ, ಹಿಂದಿ ಭಾಷೆ, ಬ್ರೈಲ್ ಲಿಪಿ, ಅಲಂಕಾರ ಶಾಸ್ತ್ರ ಸೇರಿದಂತೆ ಈ ರೀತಿ ಹಲವಾರು ಗ್ರಂಥಗಳನ್ನು ಅವರು ಅಧ್ಯಯನ ಮಾಡಿದ್ದಷ್ಟೆ ಅಲ್ಲ ಅವನ್ನು ರಚನೆ ಮಾಡುವಂಥ ಕೆಲಸವನ್ನು ಪಂಡಿತ್ ಪುಟ್ಟರಾಜ ಗವಾಯಿರವರು ಮಾಡಿದರು. ಈ ರೀತಿಯ ಒಂದು ಧೀಮಂತ ವ್ಯಕ್ತಿತ್ವ ಅವರದಾಗಿತ್ತು. ಇವತ್ತಿನ ಒಂದು ವ್ಯವಸ್ಥೆ ಮತ್ತು ಸಮಾಜದಲ್ಲಿ ಕಣ್ಣಿದ್ದು ಬಹಳಷ್ಟು ಜನರು ಕುರುಡರಿದ್ದಾರೆ. ಆದರೆ ಇವರು ಕುರುಡರಾಗಿದ್ದರೂ, ಅವರು ಹೊರಗಿನ ಮತ್ತು ಒಳಗಿನ ಜಗತ್ತುಗಳೆರಡನ್ನು ನೋಡುತ್ತಿದ್ದರು. ಅಷ್ಟೇ ಅಲ್ಲ ಬಹಳಷ್ಟು ಜನರಿಗೆ ಕಣ್ಣನ್ನು, ಬಾಳನ್ನು ಕೊಟ್ಟಂಥ ವ್ಯಕ್ತಿ ಪುಟ್ಟರಾಜ ಗವಾಯಿಯವರು. ಪುಟ್ಟರಾಜ ಗವಾಯಿಯವರು ಕಣ್ಣಿಲ್ಲದಿದ್ದರೂ, ಅವರಿಗಿದ್ದ ಅಧ್ಯಯನಶೀಲತೆಯನ್ನು ಬಹಳಷ್ಟು ಜನ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಬಹಳ ಅವಶ್ಯವಿದೆ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತು ಅವರು ತಮ್ಮ ಜೀವನಕ್ಕೆ ಮಾತ್ರ ಸೀಮಿತವಾಗಲಾರದೆ ಇವತ್ತು ನೂರಾರು ಸಾವಿರಾರು ಸಂಖ್ಯೆಯಲ್ಲಿ ಶಿಷ್ಯ ಬಳಗವನ್ನು ಸಂಗೀತ ಲೋಕಕ್ಕೆ ಬಿಟ್ಟು ಹೋಗಿದ್ದಾರೆ. ಇವತ್ತು ಕೂಡ ಸಾವಿರಾರು ಸಂಖ್ಯೆಯಲ್ಲಿ ಶಿಷ್ಯ ಬಳಗ ಪುಟ್ಟರಾಜ ಗವಾಯಿಯವರ ಗರಡಿಯಲ್ಲಿ ಪಳಗಿ ಹೆಸರಾಂತ ಸಂಗೀತಗಾರರಾಗಿದ್ದಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯುಸುತ್ತೇನೆ. ಹೀಗಾಗಿ ಅವರ ಬಗ್ಗೆ ಇರುವಂಥ ಭಕ್ತರ ಒಂದು ಕಳಕಳಿ ಮತ್ತು ಪ್ರಭಾವ ಎಷ್ಟಿತ್ತೆಂದರೆ, ಅವರ ಅಂತ್ಯಕ್ರಿಯೆಯಲ್ಲಿ ಲಕ್ಷಾಂತರ ಜನ ಸೇರಿದ್ದು ನೋಡಿದರೆ ಯಾವ ರೀತಿ ಅವರ ಒಂದು ಪ್ರಭಾವ ಮತ್ತು ಧರ್ಮದ ಒಂದು ಸಂದೇಶ ಭಕ್ತರಲ್ಲಿತ್ತೆನ್ನುವುದನ್ನು ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಪುಟ್ಟರಾಜ ಗವಾಯಿಯವರಿಗೆ ಸಾಕಷ್ಟು ಪ್ರಶಸ್ತಿಗಳು ಬಂದವು, ಅವರಿಗೆ ಭಾರತ ರತ್ನ ಪ್ರಶಸ್ತಿ ಕೊಡಬೇಕೆನ್ನುವುದು ಜನತೆಯ ಒಂದು ಬಯಕೆ ಆಗಿದೆ. ಇವತ್ತು ಯಾವುದೇ ಪ್ರಶಸ್ತಿಯನ್ನು ಅವರಿಗೆ ಕೊಟ್ಟರೊ

ಯೋಗ್ಯರಾದವರು ಪುಟ್ಟರಾಜ ಗವಾಯಿಯವರು. ಅವರ ಜೀವನ ನಮಗೆಲ್ಲರಿಗೂ ಆದರ್ಶ ಪ್ರಾಯವಾಗಲಿ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಬಿ.ಎಸ್. ರಂಗಾರವರ ಬಗ್ಗೆ ಈಗಾಗಲೇ ಸಾಕಷ್ಟು ನಮ್ಮ ಹಿರಿಯವರು ಮಾತನಾಡಿದ್ದಾರೆ. ನಿರ್ದೇಶಕರಾಗಿ ಅಮರಶಿಲ್ಪಿ ಜಕಣಾಚಾರಿ ಕಲರ್ ಚಿತ್ರವನ್ನು ಬಹುಶ ನಾವೆಲ್ಲರೂ ವೀಕ್ಷಣೆ ಮಾಡಿದಂಥವರು. ಅಂದರೆ ಕಪ್ಪು ಬಿಳುಪು ಚಿತ್ರಗಳಾದ ಮೇಲೆ ಇವತ್ತು ಈ ರೀತಿ ಕಲರ್ ಚಿತ್ರವನ್ನು ಪ್ರಥಮವಾಗಿ ಬಿ.ಎಸ್. ರಂಗಾರವರು ತಂದರು ಎಂಬುದು ನಮ್ಮ ಪ್ರತಿಯೊಬ್ಬರ ಮನಸ್ಸಿನಲ್ಲಿದೆ. ಈ ಅಮರಶಿಲ್ಪಿ ಜಕಣಾಚಾರಿ ಚಿತ್ರವನ್ನು ಯಾರು ಮಾಡಿದರೆಂದರೆ ಬಿ.ಎಸ್. ರಂಗಾರವರು ಮಾಡಿದರೆನ್ನುವ ನಿಟ್ಟಿನಲ್ಲಿ ಇವತ್ತು ಪ್ರತಿಯೊಬ್ಬರೂ ನೆನಪು ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಅಂಥ ಹಿರಿಯ ನಿರ್ದೇಶಕರು ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ.

ಇನ್ನು ಶ್ರೀಧರ್‌ಚಾರ್‌ರವರು ಉತ್ತಮ ಪತ್ರಕರ್ತರಾಗಿ, ಒಳ್ಳೆಯ ರೀತಿಯಲ್ಲಿ ಸೇವೆಯನ್ನು ಪತ್ರಿಕಾರಂಗದಲ್ಲಿ ಮಾಡಿದಂಥವರು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೈಸೂರು ದುರಂತದ ಬಗ್ಗೆ ನಮ್ಮ ಹಿರಿಯರು ಮಾತನಾಡಿದರು. ಅದೇ ರೀತಿ ನಮ್ಮ ಕಲಘಟಗಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಕೆರೆಯಲ್ಲಿ ಹೋಗುವಂಥ ಒಂದು ತೆಪ್ಪವೇನಿದೆ, ಅದು ಮುಳುಗಿ 5 ಜನ ಇವತ್ತು ತೀರಿಕೊಂಡರು ಎಂಬುದನ್ನು ಇವತ್ತಿನ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇಂಥ ಆಕಸ್ಮಿಕ ದುರ್ಘಟನೆಗಳು ನಡೆಯುತ್ತವೆ, ಅಂಥವುಗಳ ಬಗ್ಗೆ ಒಂದು ವ್ಯವಸ್ಥೆಯಲ್ಲಿ ನಾವೆಲ್ಲರೂ ಜಾಗ್ರತೆಯನ್ನು ವಹಿಸುವುದು ಅವಶ್ಯವಿದೆ. ಈ ರೀತಿಯಾದ ಘಟನೆಗಳು, ದುರಂತಗಳು ಮರುಕಳಿಸಬಾರದ ರೀತಿಯಲ್ಲಿ ನೋಡಿಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಇನ್ನೂ ಹಲವಾರು ಮಹನೀಯರು ನಮ್ಮನ್ನು ಆಗಲಿ ಹೋಗಿದ್ದಾರೆ, ಈ ಎಲ್ಲಾ ಮಹನೀಯರ ಕುಟುಂಬವರ್ಗಕ್ಕೆ, ಅವರನ್ನು ಅಗಲಿ ಹೋಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ದೇವರು ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ, ತಾವೇನು ಇವತ್ತು ಸಂತಾಪ ಸೂಚನೆಯನ್ನು ತಂದಿದ್ದೀರಿ, ಇದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಹಮತ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಕಾನೂನು ಸಚಿವರು, ವಿರೋಧ ಪಕ್ಷದ ನಾಯಕರು ಅಗಲಿದ

ನಾಯಕರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅವರ ಪ್ರತಿಯೊಂದು ಮಾತನ್ನು ಬೆಂಬಲಿಸುತ್ತಾ ಒಂದು ಬಹಳ ದುಃಖದ ಸಂಗತಿ ಎಂದರೆ, ಈ ಮನೆಯ ಸದಸ್ಯರಾಗಿ, ನಮ್ಮ ಬಹಳ ಬಹಳ ಸ್ನೇಹಿತರಾಗಿದ್ದ ಕೃಷ್ಣಮೂರ್ತಿಯವರು ಇವತ್ತು ನಿಧನರಾಗಿದ್ದಾರೆ. ಅವರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದಾಗಿನಿಂದ 4 ಸಾರಿ ಶಾಸಕರಾಗಿದ್ದಾಗಲೂ ಕೂಡ ನಮ್ಮಲ್ಲಿ ನಿಕಟವಾದ ಪ್ರೀತಿ, ವಾತ್ಸಲ್ಯ, ಬಾಂಧವ್ಯವಿತ್ತು. ಅದರ ಜೊತೆಗೆ ನನ್ನ ಕ್ಷೇತ್ರ, ಹೊಸ ಕ್ಷೇತ್ರ, ಹಳೆಯ ಕ್ಷೇತ್ರ ಹೊಂದಿಕೊಂಡಿರುವ ಕ್ಷೇತ್ರ ಅವರದಾಗಿತ್ತು. ಅದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಸಂದರ್ಭದಲ್ಲೂ ಕೂಡ ನಾವಿಬ್ಬರು ಶಾಸಕರ ಭವನದಲ್ಲಿ ಪಕ್ಕ ಪಕ್ಕ ರೂಮಿನಲ್ಲಿರುತ್ತಿದ್ದೆವು. ಅಂಥ ಒಂದು ಆತ್ಮೀಯತೆ ಇದ್ದಂಥ ಒಬ್ಬ ವ್ಯಕ್ತಿ ಅವರಾಗಿದ್ದರು. ಬಹುಶಃ ಕಡೂರು ಕ್ಷೇತ್ರ ಎಷ್ಟು ಕಾಂಪ್ಲೆಕ್ಸ್ ಆಗಿತ್ತೆಂದರೆ, ಸತತವಾಗಿ 4 ಸಾರಿ ಗೆಲ್ಲುವಂಥ ಸಾಮರ್ಥ್ಯ ಕೃಷ್ಣಮೂರ್ತಿಯವರಿಗೊಬ್ಬರಿಗೆ ಬಿಟ್ಟರೆ ಯಾರಿಗೂ ಇರಲು ಸಾಧ್ಯವಿರಲಿಲ್ಲ, ಅವರು ಬದುಕಿದ್ದರೆ ಅವರನ್ನು ಸೋಲಿಸಲು ಯಾರಿಂದಲೂ ಆಗುತ್ತಿರಲಿಲ್ಲ. ಅವರು ಎಷ್ಟರ ಮಟ್ಟಿಗೆ ಎಲ್ಲಾ ವರ್ಗದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದರೆಂಬುದು ಬಹಳಷ್ಟು ಶಾಸಕರಿಗೆ ಅದು ಅನುಕರಣೀಯ ವಾಗಬೇಕಾಗುತ್ತದೆ. ಈ ರೀತಿಯಾಗಿ ಯಾವುದೇ ಒಂದು ರಾಗದ್ವೇಷವಿಲ್ಲದೆ ಕ್ಷೇತ್ರವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗಿರತಕ್ಕಂಥ ಒಬ್ಬ ಧೀಮಂತ ನಾಯಕನೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ಬಹಳಷ್ಟು ಜನ ರಾಜಕೀಯಕ್ಕೆ ಬರಬೇಕೆಂದು ಬರುವುದಿಲ್ಲ, ಆಕಸ್ಮಿಕವಾಗಿ ನಮ್ಮ ಹೋರಾಟದ ಹಿನ್ನೆಲೆಯಲ್ಲಿ ಶಾಸಕರಾಗುತ್ತೇವೆ, ಮಂತ್ರಿಗಳಾಗುತ್ತೇವೆ, ಸಂಸತ್ ಸದಸ್ಯರಾಗುತ್ತೇವೆ. ಹಾಗೆ ಕೃಷ್ಣಮೂರ್ತಿಯವರು ಶಾಸಕರಾಗಬೇಕೆನ್ನುವುದಕ್ಕಿಂತ ಹೆಚ್ಚಾಗಿ ಅವರಿಗೊಂದು ಹೋರಾಟದ ಮನೋಭಾವವಿತ್ತು. ಅದೇನೆಂದರೆ, ನನ್ನ ಮತ್ತು ಅವರ ಕ್ಷೇತ್ರಗಳು ಬರಗಾಲಕ್ಕೆ ತುತ್ತಾಗಿರತಕ್ಕಂಥವುಗಳು. ಆ ಕ್ಷೇತ್ರದಲ್ಲಿ ಒಂದು ದೊಡ್ಡ ಕನಸಿತ್ತು. ಈ ಕ್ಷೇತ್ರಕ್ಕೆ ಏನಾದರೂ ಮಾಡಿ ಶಾಶ್ವತವಾಗಿ ನೀರಾವರಿ ಯೋಜನೆಯನ್ನು ಮಾಡಬೇಕೆನ್ನುವ ಚಿಂತನೆ ಅವರಲ್ಲಿತ್ತು. ಈಗ ಇಲ್ಲಿ ಬಸವರಾಜ ಬೊಮ್ಮಾಯಿಯವರು ಇಲ್ಲಿದ್ದಾರೆ. ಶಾಶ್ವತವಾದ ಯೋಜನೆ ಮಾಡಬೇಕೆಂಬ ಬಗ್ಗೆ ಚಿಂತನೆ ಅವರಲ್ಲಿ ಇತ್ತು. ನಾವು ಅನೇಕ ಬಾರಿ ಕಳೆದ 20-30 ವರ್ಷಗಳಿಂದ ಕೂಡ ಹೋರಾಟದ ಸಭೆಗಳನ್ನು ನಮ್ಮ ಕ್ಷೇತ್ರ ಹಾಗೂ ಕಡೂರು ಕ್ಷೇತ್ರಗಳಲ್ಲಿ ಮಾಡುತ್ತಿದ್ದೇವೆ. ಅವರ ಕನಸು ಏನಿತ್ತು ಎಂದರೆ, ಆ ಭಾಗಕ್ಕೆ ಶಾಶ್ವತವಾದ ನೀರಾವರಿ ಯೋಜನೆ ಯಾವುದರಿಂದ ತರುವುದಕ್ಕೆ ಸಾಧ್ಯ ಎಂದರೆ

ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಎಂದು ನಂಬಿಕೆ ಇಟ್ಟಿದ್ದರು. ಆದರೆ ಇವತ್ತು ನಾನು ಏಕೆ ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಮ್ಮ ಹೋರಾಟದ ಹಿನ್ನೆಲೆಯಲ್ಲಿ ಏನೋ ಒಂದು ಗುರಿ ಇರುತ್ತದೆ. ಬಹಳಷ್ಟು ಜನ ಶಾಸಕರಾದವರು, ಶಾಸಕರಲ್ಲದೇ ಇರುವವರಿಗೂ ಒಂದು ಗುರಿ ಇರುತ್ತದೆ. ಆ ಹೋರಾಟ ಕಾಲಗರ್ಭದಲ್ಲಿ ಸೇರಿದಂತಹ ಸಂದರ್ಭದಲ್ಲಿ ಅವರ ಗುರಿ ಹೋರಾಟ ಏನು ಇತ್ತು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿ ಅದಕ್ಕೆ ಕಾಯಕಲ್ಪ ಮಾಡುವುದು, ಅದಕ್ಕೆ ಶಕ್ತಿ ಕೊಡುವ ಕೆಲಸ ಮಾಡಿದರೆ ಸಾರ್ಥಕವಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಇಲ್ಲಿಯೇ ಇದ್ದಾರೆ. ನಾನು ಹೇಳಿದ್ದು ಕೇಳುತ್ತಿದದಾರೋ ಇಲ್ಲವೋ ಎಂದು ಗೊತ್ತಿಲ್ಲ. ದಯಮಾಡಿ ಮಾನ್ಯ ಕೃಷ್ಣಮೂರ್ತಿಯವರು ಕಾಲವಾದ ನಂತರ ಇತ್ತೀಚೆಗೆ ಬಂದಂತಹ ಕೃಷ್ಣ ನ್ಯಾಯಾಧಿಕರಣದ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ಮಧ್ಯಮ ಕರ್ನಾಟಕಕ್ಕೆ ವಿಶೇಷವಾಗಿ ತುಮಕೂರು, ಚಿತ್ರದುರ್ಗ ಹಾಗೂ ಕಡೂರು ಭಾಗಕ್ಕೆ ಶಾಶ್ವತವಾಗಿ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂಬ ಮಾತನ್ನು ಬಚಾವತ್ ತೀರ್ಪಿನಲ್ಲಿ ಏನು ಹೇಳಿದರು, ನ್ಯಾಯಾಧೀಕರಣ ಅದನ್ನು ಪುಷ್ಟೀಕರಿಸಿ ಅದಕ್ಕೆ ಒತ್ತು ಕೊಡುವುದರ ಜೊತೆಗೆ ನೀರಿನ ಅಲೋಕೇಷನ್ ಕೂಡ ಮಾಡಿದ್ದಾರೆ. ಅಲೋಕೇಷನ್ ಎಂದರೆ, ಇವತ್ತು ನಮಗೆ K8 series ನಲ್ಲಿ 320 ರಿಂದ 360 ಟಿ.ಎಂ.ಸಿ.ಯವರೆಗೆ ನೀರಿನ ಬಳಕೆ ಮಾಡಬಹುದು ಎಂದು ಅವಕಾಶ ಕೊಟ್ಟಿರುವಾಗ ಅದಕ್ಕೆ ನಿರ್ದಿಷ್ಟವಾಗಿ ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತಗೊಳಿಸಿ ಎನ್ನತಕ್ಕಂತಹ ಸೂಚನೆ ಕೊಟ್ಟಿರತಕ್ಕಂತಹ ಹಿನ್ನೆಲೆಯಲ್ಲಿ ಬಹುಶಃ ಅದರ ಕಡೆಗೆ ತಾವು ಹೆಚ್ಚು ಒತ್ತು ಕೊಡಬೇಕು. ಇದು ಕೃಷ್ಣಮೂರ್ತಿಯವರ ಕನಸಾಗಿತ್ತು. ಅದನ್ನು ನನಸು ಮಾಡತಕ್ಕಂತಹ ಜವಾಬ್ದಾರಿ ತಮ್ಮ ಮೇಲೆ ಇದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅದೇ ರೀತಿ ಬಹಳಷ್ಟು ಜನರನ್ನು ನಾವು ಇವತ್ತು ಕಳೆದು ಕೊಂಡಿದ್ದೇವೆ. ಮಾನ್ಯ ರಾಜಶೇಖರಮೂರ್ತಿಯವರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಸುದೀರ್ಘ ಕಾಲದ ರಾಜಕಾರಣ ಮಾಡಿದವರು, ಅಧಿಕಾರದಲ್ಲಿದ್ದವರು ಎಂದರೆ ರಾಜಶೇಖರ ಮೂರ್ತಿಯವರನ್ನು ಬಿಟ್ಟರೆ ಬೇರೆ ಯಾರೂ ಇರಲಿಕ್ಕೆ ಸಾಧ್ಯವಿಲ್ಲ. 1952 ರಿಂದ ಇಲ್ಲಿಯವರೆಗೆ ಲೆಕ್ಕ ಹಾಕಿದರೆ ಸುಮಾರು 60 ವರ್ಷಗಳ ಕಾಲ ದೀರ್ಘ ಕಾಲ ಸಕ್ರಿಯ ರಾಜಕಾರಣದಲ್ಲಿ ಇದ್ದಂತಹವರು ರಾಜಶೇಖರಮೂರ್ತಿಯವರು. ಅವರು 1989ರಲ್ಲಿ

ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾನು ಬಹಳ ನಿಕಟವಾಗಿ ಹತ್ತಿರದಿಂದ ಅವರನ್ನು ನೋಡಿದ್ದೇನೆ. ಭ್ರಷ್ಟಾಚಾರದ ವಿರುದ್ಧ ಯಾವತ್ತೂ ಇದ್ದವರು. ಅದರ ಬಗ್ಗೆ ಚಿಂತನೆ ಮಾಡತಕ್ಕಂತಹವರು. ರಾಜಕಾರಣಿಗಳು ಪ್ರಾಮಾಣಿಕವಾಗಿ ಇರಬೇಕು. ಒಳ್ಳೆಯ ಆಡಳಿತ ಕೊಡಬೇಕೆಂದು ಚಿಂತನೆ ಇಟ್ಟುಕೊಂಡಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಮತಿ ಬಿ.ಎಸ್. ಸುಬ್ಬಮ್ಮನವರು 1952ರಲ್ಲಿ ರಾಜಕಾರಣಕ್ಕೆ ಬಂದಂತಹವರು. ಅವರು ಶಾಸಕರಾಗಿದ್ದ ಸಂದರ್ಭದಲ್ಲಿ ನಾವೆಲ್ಲಾ ಹುಡುಗರಾಗಿದ್ದೆವು. 4-6 ವರ್ಷಗಳ ಹಿಂದೆ ಅವರನ್ನು ಭೇಟಿ ಮಾಡುವ ಸಂದರ್ಭ ಸಿಕ್ಕಿತ್ತು. ನಾನು ಸಾಕಷ್ಟು ಸಾರಿ ಮಾತನಾಡಿದ್ದೇನೆ. ಎಲ್ಲವನ್ನೂ ಹೇಳುವುದಕ್ಕೆ ಹೋದರೆ ಕಾಲಾವಕಾಶ ಕಡಿಮೆ ಇದೆ. ಇವತ್ತಿಗೂ ಅವರಿಗೆ ಎಂತಹ ಚಿಂತನೆ ಕಳಕಳಿ ಇತ್ತು ಸಾಮಾಜಿಕವಾಗಿ ಜನರ ಬಗ್ಗೆ ಕಳಕಳಿ ಇತ್ತು ಎನ್ನುವ ವಿಚಾರವನ್ನು ನಾನು ವ್ಯಕ್ತಪಡಿಸುತ್ತಾ ಅದೇ ರೀತಿಯಾಗಿ ಕರಿಬಸವನಗೌಡರವರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಶಾಶಕರಾಗಿ ಕೊನೆಯ ದಿನಗಳನ್ನು ಅವರು ಅತ್ಯಂತ ಕಷ್ಟದಲ್ಲಿ ಅನುಭವಿಸಿದರು ಎನ್ನತಕ್ಕಂತಹ ಮಾತನ್ನು ಕೇಳಿದ್ದೇನೆ. ಪಂಡಿತ್ ಪುಟ್ಟರಾಜ ಗವಾಯಿಯವರು, ಬಹುಶಃ ಪುಟ್ಟರಾಜ ಗವಾಯಿಯವರ ಬಗ್ಗೆ ನಾನು ಹೆಚ್ಚಿಗೆ ಹೇಳದೆ ಅವರ ಕೊನೆಯ ದಿನದ ಎರಡು ದಿವಸ ನಾನು ಟಿ.ವಿ. ಬಿಟ್ಟು ಅಗಲಲಿಲ್ಲ. ಅವರ ಸಾವಿನಿಂದ ಆಗಿರತಕ್ಕಂತಹ ನೋವು ಅಗಾಧವಾಗಿ ಸಂಪಾದಿಸಿದಂತಹ ಆ ಜನರ ಸಮೂಹ ಅವರ ಶಿಷ್ಯರನ್ನು ನೋಡುವುದಕ್ಕೆ ನಮಗೆ ಆಶ್ಚರ್ಯವಾಗುತ್ತಿತ್ತು. ಹುಟ್ಟು ಕುರುಡರಾದರೂ ಕೂಡ ಎಂತಹ ಸಾಧನೆ ಮಾಡಿದ್ದಾರೆಂದು ನಾವೆಲ್ಲರೂ ಯೋಚನೆ ಮಾಡಬೇಕು. ಅವರ ಹೆಸರು ಶಾಶ್ವತವಾಗಿ ಇರತಕ್ಕಂತಹ ರೀತಿಯಲ್ಲಿ ಯಾವುದಾದರೂ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮ ಹಾಕಬೇಕೆಂದು ಹೇಳುವುದರ ಜೊತೆಗೆ ಕೊನೆಯದಾಗಿ ಬಿ.ಎಸ್. ರಂಗಾರವರು, ನಾನೂ ಕೂಡ ಚಲನಚಿತ್ರ ಅಭಿವೃದ್ಧಿ ಮಂಡಳಿ ಅಧ್ಯಕ್ಷನಾಗಿ ಬಹಳ ವರ್ಷಗಳ ಹಿಂದೆ ಇದ್ದೆ. ಆ ಸಂದರ್ಭದಲ್ಲಿ ಬಿ.ಎಸ್. ರಂಗಾರವರಿಗೂ ನನಗೂ ಬಹಳ ನಿಕಟವಾದ ಬಾಂಧವ್ಯ ಇತ್ತು. ಹೆಚ್ಚು ಕಡಿಮೆ ಮಗನಂತೆ ನನ್ನನ್ನು ನೋಡುತ್ತಿದ್ದರು. ಕನ್ನಡ ಚಿತ್ರ ರಂಗಕ್ಕೆ ಹೆಚ್ಚು ಚಿತ್ರಗಳನ್ನು ನಿರ್ಮಾಣ ಮಾಡಿ, ಚಿತ್ರೀಕರಣ ಮಾಡಿ ಮಾಡುವುದರ ಜೊತೆಗೆ ಅವರ ಒಂದು ಆಸೆ ಏನಿತ್ತು ಎಂದರೆ ಕರ್ನಾಟಕದಲ್ಲಿ ಅದರಲ್ಲಿಯೂ ವಿಶೇಷವಾಗಿ ಬೆಂಗಳೂರಿನಲ್ಲಿ ಒಂದು ಚಲನಚಿತ್ರ ತೆಗೆಯಬೇಕಾದರೆ ಮೂಲಭೂತವಾಗಿ ಬೇಕಾಗಿರುವಂತಹ ಸೌಕರ್ಯಗಳು ಸವಲತ್ತುಗಳು ಇಲ್ಲಿ ಲಭ್ಯವಾಗಬೇಕೆಂಬ ಚಿಂತನೆ ಇತ್ತು. ಆ

ಹಿನ್ನೆಲೆಯಲ್ಲಿ ದಿ. ದೇವರಾಜ ಅರಸುರವರು ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕಲರ್ ಲ್ಯಾಬೋರೇಟರಿ ಬೆಂಗಳೂರಿನಲ್ಲಿ establish ಮಾಡಿದರು. ಪ್ರಥಮವಾಗಿ ಬೆಂಗಳೂರಿನಲ್ಲಿ ಕಲರ್ ಲ್ಯಾಬೋರೇಟರಿಯನ್ನು ಬಿ.ಎಸ್. ರಂಗಾರವರು ಮಾಡಿದರು. ಪ್ರತಿಯೊಂದು ಚಿತ್ರವೂ ಇಲ್ಲಿಯೇ ಆಗಬೇಕು. ಬೇರೆ ರಾಜ್ಯಗಳಿಗೆ ವಿಶೇಷವಾಗಿ ಚೆನ್ನೈಗೆ ಹೋಗತಕ್ಕಂತಹ ಅವಶ್ಯಕತೆ ಇರಲಿಲ್ಲವೆನ್ನುವಂಥದ್ದು ಅವರ ಹೆಬ್ಬಯಕ್ಕೆ ಆಗಿತ್ತು. ಹೆಸರಘಟ್ಟದಲ್ಲಿ ಸುಮಾರು 200 ರಿಂದ 250 ಎಕರೆ ಜಮೀನು ಇವತ್ತಿಗೂ ಕೂಡ ಖಾಲಿ ಇದೆ. ಅಲ್ಲಿ ಚಲನಚಿತ್ರ ನಗರಿಯನ್ನು ಮಾಡುತ್ತಾರೋ ಅಥವಾ studio ಮಾಡುತ್ತಾರೋ, ಏನು ಬೇಕಾದರೂ ಮಾಡುವುದಕ್ಕೆ ಅವಕಾಶವಿದೆ. ಅಂತಹ ಒಂದು ಒಳ್ಳೆಯ ಪ್ರಾಪರ್ಟಿ ಇದು. ಆ ಪ್ರಾಪರ್ಟಿ ಕೂಡ ಒತ್ತುವರಿ ಆಗಿದೆ ಎನ್ನತಕ್ಕಂತಹ ಮಾತನ್ನು ನಾನು ಆಗಾಗ ಕೇಳುತ್ತಿರುತ್ತೇನೆ. ಅದನ್ನು ಸ್ವಲ್ಪ ರಕ್ಷಣೆ ಮಾಡಿ ಅಲ್ಲಿ ಯಾವುದೇ ರೀತಿಯಲ್ಲಿ ಬಿ.ಎಸ್. ರಂಗಾರವರ ಕನಸು ಏನಿತ್ತು ಅದನ್ನು ನನಸು ಮಾಡತಕ್ಕಂತಹ ಕೆಲಸ ಮಾಡತಕ್ಕಂಥದ್ದು ಸೂಕ್ತ. ಅತ್ಯುತ್ತಮವಾದ ಚಲನಚಿತ್ರಗಳು ಬರಬೇಕೆಂದರೆ ಅವರು ಎಲ್ಲದಕ್ಕೂ ಹೈದರಾಬಾದ್ ಇಲ್ಲ ಚೆನ್ನೈಗೆ ಹೋಗಬೇಕು. ಇಲ್ಲಿ ಅವರಿಗೆ ಯಾವುದೇ ರೀತಿಯಾದ ಮೂಲಭೂತವಾದ ಸೌಕರ್ಯಗಳಿಲ್ಲ. ಒಂದು studio ಕೂಡ ಇಲ್ಲ. ಮೈಸೂರಿನಲ್ಲಿದ್ದ ಚಾಮುಂಡೇಶ್ವರಿ studio ಮುಚ್ಚಿ ಹೋಯಿತು. ಇಲ್ಲಿದ್ದಂತಹ ಬಾಲಕೃಷ್ಣರವರು ತೆರೆದಂತಹ ಅಭಿಮಾನ್ studio ಕೂಡ ಹೆಚ್ಚು ಕಡಿಮೆ ಮುಚ್ಚಿ ಹೋದ ಹಾಗೆ ಆಗಿದೆ. ಹಾಗಾಗಿ ಆ ದೃಷ್ಟಿಯಲ್ಲಿ ಸ್ವಲ್ಪ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡುವುದರ ಬಗ್ಗೆ ಯೋಚನೆ ಮಾಡತಕ್ಕಂಥದ್ದು ಒಳ್ಳೆಯದು ಎನ್ನತಕ್ಕಂತಹ ಮಾತನ್ನು ಹೇಳುತ್ತಾ, ಕೊನೆಯದಾಗಿ ಕೆರೆ ದುರಂತದಲ್ಲಿ ಸಾವಿಗೀಡಾದವರು 31 ಜನ ಇದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ 31 ಜನ ಯಾವ ಕಾರಣದಿಂದಲಾದರೂ ಸಾವಿಗೀಡಾಗಿರಲಿ, ಅದಕ್ಕೆ ಬಹುತೇಕ ಕಾರಣಗಳು ಎಂದರೆ ಅದಕ್ಕೆ ಸರ್ಕಾರವೇ ಹೊಣೆ ಆಗುತ್ತದೆ. ಏಕೆಂದರೆ, ಆ ರಸ್ತೆ ತಿರುವುಗಳಲ್ಲಿ ಮಾನ್ಯ ಉದಾಸಿಯವರೆ, ಏಕೆ accident ಆಗುತ್ತದೆ ಎಲ್ಲಿ ಆಗುತ್ತದೆ ಎನ್ನತಕ್ಕಂಥದ್ದರ ಬಗ್ಗೆ ಎಲ್ಲಿಯೂ ನಾವು ಬಹಳ ಯೋಚನೆ ಮಾಡಬೇಕಾಗಿಲ್ಲ. ಇವತ್ತು ಪೋಲೀಸ್‌ನವರಿಗೆ ಹಾಗೂ ಸಾರಿಗೆ ಇಲಾಖೆಯವರಿಗೆ ಗೊತ್ತಿದೆ. Accident Zones, accident spots ಯಾವುದು ಎಂದು ಗೊತ್ತಿದೆ. ಅಂತಹ spot ಗಳನ್ನು identify ಮಾಡಿ

ಇನ್ನು ಮುಂದಾದರೂ ಕೂಡ ಅದಕ್ಕೆ ಪರ್ಯಾಯವಾಗಿರತಕ್ಕಂತಹ ಕಾರ್ಯಕ್ರಮ ಹಾಕತಕ್ಕಂತಹ ಕೆಲಸವನ್ನು ಬೇಗನೆ ಮಾಡಬೇಕು ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲಿ ಬರುತ್ತಿದೆ. ಪ್ರತಿ ಪತ್ರಿಕೆಯಲ್ಲಿಯೂ ಬರುತ್ತಿದೆ. ನಾನು ಕನ್ನಡ ಪ್ರಭದಲ್ಲಿ ನೋಡುತ್ತಿದ್ದೇನೆ, ಪ್ರತಿ ದಿನ ಕೂಡ ಬರುತ್ತಿದೆ. Sensitive spots ಯಾವುದು ಇದೆ, accident spots ಯಾವುದು ಇದೆ, ನರಕಕ್ಕೆ ದಾರಿ ಎಂಬ ಶೀರ್ಷಿಕೆಯಡಿಯಲ್ಲಿ ಎಲ್ಲಾ spot ಗಳನ್ನು identify ಮಾಡಿ ತೋರಿಸುತ್ತಿದ್ದಾರೆ. ಅವೆಲ್ಲ ಮಾಹಿತಿ ಇಟ್ಟುಕೊಂಡು, ಆ ಮಾಹಿತಿ ಇಲಾಖೆಗೆ ಇಲ್ಲವೆಂದು ಅಲ್ಲ, ಇರುತ್ತದೆ, ಆದಷ್ಟು ನಿಮ್ಮ ಬಜೆಟ್‌ನಲ್ಲಿ ಸೇರಿಸಿ, ಅದರ ಬಗ್ಗೆ ಕಾರ್ಯಕ್ರಮವನ್ನು ಮಾಡುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳುವುದರ ಜೊತೆಗೆ ಇನ್ನೊಂದು ಬಹಳ ಮುಖ್ಯವಾಗಿ ಮಾನ್ಯ ಸುರೇಶ್ ಕುಮಾರ್‌ರವರೆ, 31 ಜನ ಸತ್ತು ಹೋದರು, ಯಾವುದೋ ದುರಂತ ಆದಂತಹ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಬಂದಾಗ ಎಲ್ಲಾ ನಾಯಕರುಗಳು ಹೋದಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಪಕ್ಷದ ವತಿಯಿಂದ ಮತ್ತು ಸರ್ಕಾರದ ವತಿಯಿಂದ ಒಂದು ಲಕ್ಷ ರೂ. ಕೊಡತಕ್ಕಂತಹ ಪದ್ಧತಿ ಇದೆ. ಗಮನಕ್ಕೆ ಬಾರದೆ ಇರುವಂತಹ ಅನೇಕ ದೃಶ್ಯಗಳು ಇವೆ. ನಾನು ಮೊನ್ನೆ ಚಿಕ್ಕನಾಯಕನಹಳ್ಳಿಗೆ ಹೋದಂತಹ ಸಂದರ್ಭದಲ್ಲಿ ಬೆಳ್ಳಾರ ಮತ್ತು ವೈ.ಎಸ್. ಪಾಳ್ಯ ಎನ್ನತಕ್ಕಂತಹ ಊರುಗಳ ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಮಕ್ಕಳು ಕೆರೆಯಲ್ಲಿ ನೀರು ಬಂದಿದ್ದರಿಂದ ಈಜಾಡುವುದಕ್ಕೆ ಹೋದರು. ಆಟ ಆಡುವುದಕ್ಕೆ ಮೈದಾನಗಳು ಇಲ್ಲ, ಸಣ್ಣ ಸಣ್ಣ ಹಳ್ಳಿಗಳು ಅವು. ಈಜಾಡುವುದಕ್ಕೆ ಸುಮಾರು ಐದು ಜನ ಮಕ್ಕಳು ಒಟ್ಟಿಗೆ ಹೋಗಿ ಸಾವಿಗೀಡಾಗಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ಇಂತಹ ಪ್ರಕರಣಗಳು ಬರುತ್ತಿರುತ್ತವೆ. ಆದರೆ ಏನಾಗಿದೆ, ನಮ್ಮ ಕಾನೂನಿನಲ್ಲಿ ಮಕ್ಕಳು ಸತ್ತರೆ ಅವರಿಗೆ ಯಾವುದೇ ರೀತಿಯ ಸಹಾಯ ಮಾಡುವುದಕ್ಕೆ ಅವಕಾಶವಿಲ್ಲ. ದಯಮಾಡಿ ಇದನ್ನು ರಿಲ್ಯಾಕ್ಸ್ ಮಾಡಿ. ದುರಂತದಿಂದ ಸತ್ತಿರತಕ್ಕಂತಹ ಮಕ್ಕಳಲ್ಲಿ ಒಬ್ಬೊಬ್ಬ ಮಕ್ಕಳ ಇರತಕ್ಕಂತಹವರು ಸತ್ತು ಹೋಗಿರತಕ್ಕಂತಹ ನಿದರ್ಶನಗಳು ಇವೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಜನರಿಗೆ ಯಾವುದೇ ಸಹಾಯ ಇರುವುದಿಲ್ಲ. ಇವತ್ತು ಪತ್ರಿಕೆಯಲ್ಲಿ ಬಂದರೆ ದೊಡ್ಡದ್ದು ಅದಕ್ಕಿಂತ ಮೊದಲು ಏನೂ ಗೊತ್ತಾಗುವುದಿಲ್ಲ. ಅಂತಹ ವಿಚಾರದಲ್ಲಿ ದಯಮಾಡಿ ಸರ್ಕಾರದ ಗಮನಕ್ಕೆ ಬಂದಂತಹ ಸಂದರ್ಭದಲ್ಲಿ ಅವರಿಗೂ ಕೂಡ ಕನಿಷ್ಠವಾಗಿ ಬೇರೆಯವರಿಗೆ ಯಾವ

ರೀತಿಯಾಗಿ compensation ಕೊಡುತ್ತೇವೋ ಅದೇ ರೀತಿ ಇವರಿಗೂ ಪರಿಹಾರಧನ ಕೊಡತಕ್ಕಂಥದ್ದು ಸೂಕ್ತ. ಅಂತಹ ರೀತಿಯಲ್ಲಿ ಆದೇಶವನ್ನು ಹೊರಡಿಸಿ ಕಳೆದ ಒಂದು ವರ್ಷದಲ್ಲಿ ಆಗಿರತಕ್ಕಂತಹ ದುರಂತಗಳು ಬಹುಶಃ ಇದನ್ನು ರಾಜ್ಯದಾದ್ಯಂತ ಹುಡುಕಿದರೂ 100 ಅಥವಾ 200 ನಿದರ್ಶನಗಳು ಸಿಗಬಹುದು ಅಷ್ಟೆ. ಅವರಿಗೆ ಪರಿಹಾರಧನ ಕೊಟ್ಟರೆ ಬಹಳಷ್ಟು ಸಹಾಯವಾಗುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ತಾವು ತಂದಿರತಕ್ಕಂತಹ ಸಂತಾಪ ಸೂಚನಾ ನಿರ್ಣಯಕ್ಕೆ ಸಹಮತ ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಸಿ.ಎಸ್. ಪುಟ್ಟರಾಜು (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಈ ಸದನದ ಒಳಗೆ ಮತ್ತು ಹೊರಗೆ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿ ನಿಧನರಾಗಿರುವವರ ಬಗ್ಗೆ ಈಗಾಗಲೇ ಸದನದ ಅನೇಕ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ. ಪ್ರಮುಖವಾಗಿ ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರು ಹಿರಿಯ ಶಾಸಕರಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ, ನಾವೆಲ್ಲರೂ ಹೊಸದಾಗಿ ಶಾಸಕರಾಗಿ ಈ ಸದನಕ್ಕೆ ಬಂದಂಥ ಸಂದರ್ಭದಲ್ಲಿ ನಮಗೆ ಅಣ್ಣನ ಸ್ಥಾನದಲ್ಲಿದ್ದು ಮಾರ್ಗದರ್ಶನವನ್ನು ಕೊಟ್ಟು ಕ್ಷೇತ್ರದ ಅನೇಕ ಅಭಿವೃದ್ಧಿ ವಿಚಾರಗಳಲ್ಲಿ ಸಲಹೆ ಸಹಕಾರಗಳನ್ನು ಕೊಡುತ್ತಿದ್ದರು. ಅವರನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಇನ್ನು ಈ ನಾಡು ಕಂಡಂಥ ಹಿರಿಯ ರಾಜಕೀಯ ಮುತ್ಸದ್ದಿಗಳಾಗಿದ್ದ ಮಾನ್ಯ ಎಂ. ರಾಜಶೇಖರಮೂರ್ತಿಗಳನ್ನು ನಾವೆಲ್ಲರೂ ಇಂದು ಕಳೆದುಕೊಂಡು ಅವರ ಬಗ್ಗೆ ಇಂದು ಒಳ್ಳೆಯ ಮಾತುಗಳನ್ನು ಮಾತನಾಡುತ್ತಿದ್ದೇವೆ. ಅವರು ನನ್ನ ಕ್ಷೇತ್ರಕ್ಕೆ ವರ್ಷಕ್ಕೆ ಒಂದು ಸಾರಿಯಾದರೂ ಬರುತ್ತಿದ್ದರು. ಚಿಕ್ಕಯಾರಹಳ್ಳಿಯಲ್ಲಿ ಅವರ ಬಂಧುಗಳು ಇದ್ದಾರೆ. ಅಲ್ಲಿಗೆ ಅವರು ಬಂದಂಥ ಸಂದರ್ಭದಲ್ಲಿ ನಮ್ಮನ್ನು ಅವರಲ್ಲಿಗೆ ಕರೆಸಿಕೊಂಡು ಇಡೀ ಕ್ಷೇತ್ರದ ಬಗ್ಗೆ ಅನೇಕ ವಿಚಾರಗಳ ಬಗ್ಗೆ ನಮಗೆ ಮಾರ್ಗದರ್ಶನವನ್ನು ಕೊಡುತ್ತಿದ್ದಂಥ ದಿನಗಳನ್ನು ನಾವು ಮರೆಯುವುದಕ್ಕೆ ಸಾಧ್ಯವೇ ಇಲ್ಲ. ಇನ್ನು ಮಾನ್ಯ ಪುಟ್ಟರಾಜ ಗವಾಯಿಗಳು ವಿಶ್ವವೇ ಕಂಡಂಥ ಒಬ್ಬ ಸಂಗೀತಗಾರರಾಗಿ ಇಡೀ ನಾಡನ್ನೇ ಆ ಸಂಗೀತ ಲೋಕಕ್ಕೆ ತೆಗೆದುಕೊಂಡು ಹೋದಂಥ ವಿಶೇಷತೆಯನ್ನು ನಾವು ಅವರಲ್ಲಿ ಕಂಡಿದ್ದೇವೆ. ನಾವು 2006–07ರಲ್ಲಿ ಸುವರ್ಣ ಕರ್ನಾಟಕದ ಸಂಭ್ರಮಾಚರಣೆಯನ್ನು ಮಾಡಿದಂಥ ಸಂದರ್ಭದಲ್ಲಿ ನಾವು ಪಾಂಡವಪುರದಲ್ಲಿ ಕನ್ನಡ ಜಾತ್ರೆ ಎನ್ನುವ

ಕಾರ್ಯಕ್ರಮವನ್ನು ಮಾಡಿದೆವು. ಆಗ ಗವಾಯಿಗಳ ಅನೇಕ ಶಿಷ್ಯಂದಿರುಗಳನ್ನು ಕರೆಸಿ ಅವರಿಂದ ಅನೇಕ ಕಾರ್ಯಕ್ರಮಗಳನ್ನು ಮಾಡಿಸಿದಂಥ ಸಂದರ್ಭದಲ್ಲಿ ಅವರ ಶಿಷ್ಯರು ಗವಾಯಿಗಳ ಬಗ್ಗೆ ಬಹಳ ಪ್ರಶಂಸನೀಯವಾದ ಮಾತುಗಳನ್ನು ಹೇಳುತ್ತಿದ್ದರು. ಗವಾಯಿಗಳು ತೀರಿಕೊಂಡಂಥ ಸಂದರ್ಭದಲ್ಲಿ ನಾವು ಟಿ.ವಿ.ಗಳಲ್ಲಿ ನೋಡಿದಂಥ ಅವರ ಶಿಷ್ಯಂದಿರುಗಳಾಗಿದ್ದ ಲಕ್ಷಾಂತರ ಜನರ ರೋದನವನ್ನು ನೋಡಿದಂಥ ಸಂದರ್ಭದಲ್ಲಿ, ಗವಾಯಿಗಳ ಬಗ್ಗೆ ಅವರ ಆತ್ಮೀಯತೆ ಎಷ್ಟಿತ್ತು ಎನ್ನುವುದನ್ನು ಅವರ ಶಿಷ್ಯರುಗಳು ಹೇಳುತ್ತಿದ್ದಂಥ ಮಾತುಗಳಿಂದ ನಮಗೆ ಗೊತ್ತಾಗುತ್ತಿತ್ತು. ಇಂಥ ಅನೇಕ ಹಿರಿಯರುಗಳನ್ನು ಕಳೆದುಕೊಂಡಿರತಕ್ಕಂಥ ಸಂದರ್ಭದಲ್ಲಿ ಈಗಾಗಲೇ ಎಲ್ಲ ಹಿರಿಯರುಗಳು ಅಂಥವರುಗಳ ಬಗ್ಗೆ ಮಾತನಾಡಿರುವುದರಿಂದ ನಾನು ಹೆಚ್ಚಿಗೆ ಮಾತನಾಡದೇ, ವಿಶೇಷವಾಗಿ ನನ್ನ ಕ್ಷೇತ್ರದ ಅರಳಕುಪ್ಪೆ, ಕಟ್ಟೇರಿ, ಯಲೆಕೆರೆ, ಡಾಂಬ್ರಹಳ್ಳಿ, ಹಿರಿಮರಳ್ಳಿ ಹಾಗೂ ನಮ್ಮ ಮುಖ್ಯಮಂತ್ರಿಗಳ ತವರೂರಾದಂಥ ಬೂಕನಕೆರೆ ಪಕ್ಕ ಕೆ.ಆರ್. ಪೇಟೆ ತಾಲ್ಲೂಕಿನ ಬಲ್ಲೇಕೆರೆ ಗ್ರಾಮದ 31 ಜನರು ನಾವೆಂದೂ ಕಾಣದೇ ಇದ್ದಂಥ ದೊಡ್ಡ ಕೆರೆ ದುರಂತದಲ್ಲಿ ಅಸು ನೀಗಿದರು. ಒಟ್ಟು 38 ಪ್ರಯಾಣಿಕರಿದ್ದಂಥ ವಾಹನ ದುರಂತದಲ್ಲಿ 7 ಜನರನ್ನು ಅಲ್ಲಿದ್ದಂಥ ಅಕ್ಕಪಕ್ಕದ ಜನರುಗಳು ಬಚಾವ್ ಮಾಡುವ ಮುಖಾಂತರ ಪ್ರಾಣವನ್ನು ಉಳಿಸಿದರು. ಇನ್ನು 31 ಜನರು ತೀರಿಕೊಂಡರು. ಇನ್ನೂ ನಾವು ಶವಸಂಸ್ಕಾರವನ್ನು ಅವತ್ತಿನ ದಿನದಲ್ಲಿ ಮಾಡೇ ಇರಲಿಲ್ಲ, ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಣ್ಣನವರು ಮತ್ತು ಮಾನ್ಯ ಕುಮಾರಣ್ಣನವರು ಅಲ್ಲಿಗೆ ಬಂದು ಹೋಗ ಅರ್ಧ ಗಂಟೆಯೊಳಗೆ ಸತ್ತು ಹೋದ ಕುಟುಂಬದ ವ್ಯಕ್ತಿಗಳ ಯಜಮಾನನೊಬ್ಬ ದುಃಖದ ನೋವು ತಡೆಯಲಾರದೆ ಹೃದಯಾಘಾತದಿಂದ ಆತ ಸತ್ತುಹೋದ. ಹೀಗಾಗಿ ಒಟ್ಟು 32 ಜನರು ಸತ್ತು ಹೋದಂಥ ಇಂಥ ಈ ದುರಂತವನ್ನು ನಾವೆಂದೂ ಊಹಿಸುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ನಮ್ಮ ಜಿಲ್ಲೆಯಲ್ಲಿಯೇ 1975-76ರಲ್ಲಿ 80 ಜನರು ವಿ.ಸಿ. ಕೆನಾಲ್‌ಗೆ ಬಿದ್ದು ಸತ್ತಿದ್ದರು. ಅವತ್ತು ಒಂದೇ ಕುಟುಂಬದ ಒಬ್ಬಿಬ್ಬರು ಸತ್ತಿದ್ದರೇ ವಿನಾಃ ಇಡೀ ಕುಟುಂಬಗಳೇ ಸರ್ವ ನಾಶವಾಗತಕ್ಕಂಥ ರೀತಿಯಲ್ಲಿ ಯಾವ ದುರಂತಗಳು ಅಂದಿನಿಂದೀಚೆಗೆ ನಡೆದಿರಲಿಲ್ಲ. ಅಂಥ ಒಂದು ದೊಡ್ಡ ದುರಂತ ಇವತ್ತು ನನ್ನ ಕ್ಷೇತ್ರದಲ್ಲಿ ಆಗಿದೆ. ನನ್ನ ಸಂಬಂಧಿಕರೂ ಸೇರಿದಂತೆ ಅನೇಕ ಜನರು ಅವತ್ತು ಮರಣವನ್ನಪ್ಪಿದ್ದಾರೆ. ಈಗಾಗಲೇ ಹೇಳಿದಂತೆ ಹಿರಿಯರಾದಂಥ ನಮ್ಮ ಸಿದ್ದರಾಮಣ್ಣನವರು ಮತ್ತು ಕುಮಾರಣ್ಣನವರು ಬಂದು ನೋವಿನಲ್ಲಿದ್ದಂಥ ನಮಗೆ ಸಂತೈಸತಕ್ಕಂಥ, ಧೈರ್ಯ

ಹೇಳತಕ್ಕಂಥ ಕೆಲಸವನ್ನು ಮಾಡಿದರು. 11ನೇ ದಿನದ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಬಂದು ಸರ್ಕಾರದಿಂದ ಸಿಗತಕ್ಕಂಥ ಎಲ್ಲ ಅಗತ್ಯತೆಗಳನ್ನು ಪೂರೈಸಿ ಕೊಡುತ್ತವೆ. ನಾವು ನಿಮ್ಮ ಕಷ್ಟದಲ್ಲಿ ಭಾಗಿಯಾಗುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಹೇಳಿ ನಮಗೆ ಧೈರ್ಯ ತುಂಬುವಂಥ ಕೆಲಸವನ್ನು ಮಾಡಿದರು. ಈಗಾಗಲೇ ಹೇಳಿದಂತೆ ಇಂಥ ಕೆರೆಯ ಬದಿಯಲ್ಲಿರುವ ರಸ್ತೆಗಳು ಇಡೀ ರಾಜ್ಯದಲ್ಲಿ ಅನೇಕವಿವೆ. ಈ ಕೆರೆ ದುರಂತವಾದ ಮೇಲೆ ನಮ್ಮ ಟಿ.ವಿ. ಮಾಧ್ಯಮಗಳು ಮತ್ತು ಪತ್ರಿಕಾ ಮಾಧ್ಯಮಗಳು ಇಡೀ ರಾಜ್ಯದಲ್ಲಿ ಕೆರೆಯ ಬದಿಗಳ ರಸ್ತೆಗಳಲ್ಲಿ ಆಗತಕ್ಕಂಥ ಮತ್ತು ಆಗಬಹುದಾದ ಇಂಥ ವಾಹನ ಅಪಘಾತದಿಂದ ದುರ್ಘಟನೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಸರ್ಕಾರದ ಲೋಕೋಪಯೋಗಿ ಸಚಿವರಲ್ಲಿ ನನ್ನ ವಿನಂತಿ ಇಷ್ಟೆ. ಈಗಾಗಲೇ ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ಹೆಚ್ಚು ಜನರನ್ನು ತುಂಬಿಕೊಂಡು overload ಆಗಿದ್ದರಿಂದ ಅಪಘಾತವಾಗುತ್ತದೆ ಎಂದು ಹೇಳಿದರು. ಅವರ ಮಾತನ್ನು ನಾವು ಒಪ್ಪುತ್ತೇವಾದರೂ ಅಲ್ಲಿ ರಸ್ತೆ ಸಮತಟ್ಟಾಗಿದ್ದರೆ ಅವತ್ತು ಅಂಥ ದುರಂತವಾಗುತ್ತಿರಲಿಲ್ಲ. Overload ಒಂದು ಕಾರಣವಾದರೆ, ಅಲ್ಲಿ ಬಂದಂಥ ವೆಹಿಕಲ್ ಗುಂಡಿಗೆ ಬಿದ್ದ ತಕ್ಷಣ ಸ್ಟೇರಿಂಗ್ ಕಟ್ ಆಗಿ ಬಹಳ ನಿಧಾನವಾಗಿ ಬರುತ್ತಿದ್ದಂಥ- ವೆಹಿಕಲ್ ಪಕ್ಕದಲ್ಲಿ ಕೆರೆಗೆ ಇಳಿಯುವಂಥ ಒಂದು ಸನ್ನಿವೇಶ ಸೃಷ್ಟಿಯಾಯಿತು. ಈ ನಿಟ್ಟಿನಲ್ಲಿ ಇಂದು ನಾನು ಲೋಕೋಪಯೋಗಿ ಸಚಿವರ ಮತ್ತು ನೀರಾವರಿ ಇಲಾಖೆ ಸಚಿವರ ಮೂಲಕ ಸರ್ಕಾರದ ಗಮನ ಸೆಳೆಯುವುದೇನೆಂದರೆ, ದಯಮಾಡಿ ಇಡೀ ರಾಜ್ಯದಲ್ಲಿ ಇಂಥ ಅಪಘಾತವಾಗುವ ಕೆರೆಯ ಬದಿಗಳ ಸ್ಥಳಗಳೇನಿವೆ ಅಲ್ಲಿ ತಡೆಗೋಡೆಗಳನ್ನು ತಕ್ಷಣ ನಿರ್ಮಾಣ ಮಾಡತಕ್ಕಂಥ ಕೆಲಸಗಳನ್ನು ಮಾಡಿದರೆ ಇಂಥ ದುರಂತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈಗಾಗಲೇ ನಾನು ನಮ್ಮ ನೀರಾವರಿ ಇಲಾಖೆ ಸಚಿವರಲ್ಲಿ ಹಲವಾರು ಬಾರ ವಿನಂತಿಯನ್ನು ಮಾಡಿದ್ದೇನೆ. ಪಾಂಡವಪುರ ಪಟ್ಟಣದ ಮಧ್ಯ ಭಾಗದಲ್ಲಿ ವಿಶ್ವೇಶ್ವರಯ್ಯ ನಾಲೆ ಹರಿದು ಹೋಗುತ್ತಿದೆ. ಮೊನ್ನೆ ತಾನೆ ಎರಡು ಮಕ್ಕಳು ಆ ನಾಲೆಗೆ ಹೊಂದಿಕೊಂಡಂತೆ ನಾವು ಸ್ಟೇಡಿಯಂ ಅನ್ನು ಏನು ಮಾಡಿದ್ದೇವೆ ಅಲ್ಲಿ ಆಟವನ್ನು ಆ ಮಕ್ಕಳು ಆಡುವಂಥ ಸಂದರ್ಭದಲ್ಲಿ ಕಾಲುವೆಯಲ್ಲಿ ಬಿದ್ದ ಚೆಂಡನ್ನು ಎತ್ತುವುದಕ್ಕೆ ಹೋದಂಥ ಸಂದರ್ಭದಲ್ಲಿ ಬಡವರ ಇಬ್ಬರು ಮಕ್ಕಳು ಕಾಲುವೆಗೆ ಬಿದ್ದು ತಮ್ಮ ಪ್ರಾಣವನ್ನೇ

ತ್ಯಜಿಸಬೇಕಾದಂಥ ಘಟನೆ ನಡೆದಿದೆ. ಇಂಥ incidents ನಮ್ಮ ಕ್ಷೇತ್ರದಲ್ಲಿ ಬಹಳ ಆಗುತ್ತಿದೆ. ದಯಮಾಡಿ ನೀರಾವರಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರು ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಇಂಥ ದುರಂತಗಳು ಮತ್ತೆ ಆಗದೇ ಇರುವ ರೀತಿಯಲ್ಲಿ ಕ್ರಮ ಜರುಗಿಸುವುದಕ್ಕೆ ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಇಂದು ಸಂತಾಪ ಸೂಚನಾ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ (ಹುಬ್ಬಳ್ಳಿ-ಧಾರವಾಡ ಪಶ್ಚಿಮ): ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಈಗಾಗಲೇ ಅನೇಕ ಸದಸ್ಯರುಗಳು, ಮಾಜಿ ಸಚಿವರುಗಳು, ಕೇಂದ್ರ ಸಚಿವರುಗಳು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದಂಥ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಂಥವರುಗಳು, ಚಲನಚಿತ್ರ ರಂಗದಲ್ಲಿ ಕೆಲಸ ಮಾಡಿ ಹೆಸರಾಂತ ನಿರ್ದೇಶಕರಾಗಿದ್ದಂಥವರನ್ನೊಳಗೊಂಡಂತೆ ಒಟ್ಟು 12 ಜನರು ನಿಧನರಾಗಿರುವವರ ಬಗ್ಗೆ ತಾವು ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದ್ದೀರಿ. ತಾವು ತಂದಿರತಕ್ಕಂಥ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ ನಾನು ಕೆಲವು ನಿಧನರಾದ ಗಣ್ಯರ ಬಗ್ಗೆ ಮಾತನಾಡಬಯಸುತ್ತೇನೆ. ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರು ಈಗಾಗಲೇ ಅನೇಕ ಸದಸ್ಯರುಗಳು ಅವರ ಬಗ್ಗೆ ಮಾತನಾಡಿದಂತೆ ಮತ್ತು ಅವರ ಒಡನಾಟದಲ್ಲಿ ಇದ್ದಂಥ ಸದಸ್ಯರುಗಳು ಮಾತನಾಡಿದಂತೆ, ಅವರೊಬ್ಬ ವಿಶಿಷ್ಟವಾದಂಥ ಜನಪ್ರತಿನಿಧಿಯಾಗಿ ಬಹಳ ಆತ್ಮೀಯವಾಗಿ ನಮ್ಮ ಜೊತೆಯಲ್ಲಿಯೂ ಕೂಡ ಅವರು ನಮ್ಮ ಸಹವಾಸದಲ್ಲಿದ್ದು ಒಳ್ಳೆಯ ಕೆಲಸಗಳನ್ನು ಅವರ ಕ್ಷೇತ್ರದಲ್ಲಿ ಮಾಡಿದ್ದರು. ಒಳ್ಳೆಯ ಸದಸ್ಯರಾಗಿ ಅನೇಕ ವಿಚಾರಗಳ ಬಗ್ಗೆ ವಿಧಾನಸಭೆಯೊಳಗೆ ಚರ್ಚೆಯನ್ನು ಮಾಡಿ ಸರ್ಕಾರದ ಗಮನವನ್ನು ಹರಿಸುವುದರಲ್ಲಿ ಉತ್ತಮ ಕಾರ್ಯವನ್ನು ಮಾಡಿದಂಥ ವ್ಯಕ್ತಿ ಮಾನ್ಯ ಕೆ.ಎಂ. ಕೃಷ್ಣಮೂರ್ತಿಗಳಾಗಿದ್ದರು. ಅವರ ನಿಧನದಿಂದ ಒಬ್ಬ ಪ್ರಮುಖವಾದಂಥ ಜನಪ್ರತಿನಿಧಿಯನ್ನು ನಾವು ಕಳೆದುಕೊಂಡಂತಾಗಿದೆ. ಇನ್ನು ದಿವಂಗತ ರಾಜಶೇಖರಮೂರ್ತಿಯವರ ಬಗ್ಗೆ ಹೇಳಬೇಕೆಂದರೆ, ಇವರು ರಾಜ್ಯಸಭೆ ಸದಸ್ಯರಾಗಿ, ಲೋಕಸಭೆ ಸದಸ್ಯರಾಗಿ ದೀರ್ಘಕಾಲ ಸೇವೆಯನ್ನು ಸಲ್ಲಿಸಿ ಉತ್ತಮ ಅನುಭವವನ್ನು ಪಡೆದು ಜನಮೆಚ್ಚುಗೆಯನ್ನು ಗಳಿಸಿದ್ದರು.

ದಿವಂಗತರು ಕರ್ನಾಟಕ ರಾಜ್ಯಕ್ಕೆ ಬಹು ದೊಡ್ಡ ಕೊಡುಗೆಯನ್ನು ಸಚಿವರಾಗಿ ಕೊಟ್ಟು ರಾಜ್ಯದ ಅಭಿವೃದ್ಧಿಯಲ್ಲಿ ತಮ್ಮದೇ ಆದಂಥ ಪಾತ್ರವನ್ನು, ಕೆಲಸವನ್ನು ಮಾಡಿದ್ದರು. ಅವರು ಹಣಕಾಸಿನ ಮಂತ್ರಿಗಳಾಗಿಯಂತೂ ಈ ರಾಜ್ಯಕ್ಕೆ ಬಹು ದೊಡ್ಡ ಆದರ್ಶ ಹಣಕಾಸಿನ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದರು. ಬಹುಶಃ ಈಗಾಗಲೇ ಅನೇಕ ಜನರು ಹೇಳಿದಂತೆ ಅವರು ಈ ರಾಜ್ಯದ ಮುಖ್ಯಮಂತ್ರಿಗಳು ಆಗಬೇಕಾಗಿತ್ತು ಎಂದು ಬಹಳ ಜನರ ಅನಿಸಿಕೆಯಾಗಿತ್ತು.

ಆದರೆ ಅವರು ಮುಖ್ಯಮಂತ್ರಿಗಳಾಗಲಿಲ್ಲ ಎನ್ನುವ ಭಾವನೆಯನ್ನು ನಾವು ಅನೇಕ ಜನರಲ್ಲಿ ಇವತ್ತಿನ ದಿವಸ ಕಾಣುತ್ತಿದ್ದೇವೆ. ಅವರು ಕೇಂದ್ರದಲ್ಲಿ ಭೂ ಸಾರಿಗೆ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡಿದಂತಹ ಕೆಲಸ ಬಹಳ ಮಹತ್ವದ್ದಿದೆ. ನಾನು ಅವರಿಗೆ ಹುಬ್ಬಳ್ಳಿ-ಧಾರವಾಡ ರಸ್ತೆಯ ಬಗ್ಗೆ ಕೇಂದ್ರಕ್ಕೆ ಹೋಗಿ ವಿಚಾರಿಸಿದಾಗ, ಎಲ್ಲಾ ಮಹಾನಗರಗಳಲ್ಲಿ ಬಂದಂತಹ ರಾಷ್ಟ್ರೀಯ ಹೆದ್ದಾರಿಗಳನ್ನು ಹೊರಗಡೆ ತಂದು ಬೈಪಾಸ್ ರಸ್ತೆಗಳನ್ನು ಮಾಡಬೇಕಾಗಿದೆ. BOT ಮೇಲೆ ಖಾಸಗಿಯವರಿಗೆ ಈ ರಸ್ತೆಗಳನ್ನು ಕೊಡಬೇಕಾದಂತಹ ಅಗತ್ಯತೆ ಇದೆ. ಆ ದೃಷ್ಟಿಯಿಂದ ಕೇಂದ್ರದಲ್ಲಿ ಅದಕ್ಕೆ ಬೇರೆ ಕಾನೂನನ್ನು ತಂದು BOT ಮೇಲೆ ಖಾಸಗಿಯವರಿಗೆ ರಸ್ತೆಗಳನ್ನು ಮಾಡುವಂತಹ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರ ಯೋಚನೆ ಮಾಡುತ್ತಿದೆ. ಆ ದೃಷ್ಟಿಯಿಂದ ಹುಬ್ಬಳ್ಳಿ-ಧಾರವಾಡ ಮಧ್ಯದಲ್ಲಿ ಇರುವಂತಹ ರಾಷ್ಟ್ರೀಯ ಹೆದ್ದಾರಿಯನ್ನು ಈ ಒಂದು ಸಂದರ್ಭದಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆನ್ನುವ ವಿಚಾರವನ್ನು ತಿಳಿಸಿದರು. ಅವರು ಒಬ್ಬ ಸಮರ್ಥ ರಾಜಕಾರಣಿಯಾಗಿ ಸಮರ್ಥ ಸಚಿವರಾಗಿ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಕೆಲಸ ಮಾಡಿದ್ದಾರೆ. ನಾವು ಮತ್ತು ಯುವ ಜನಪ್ರತಿನಿಧಿಗಳು ಅವರ ಆದರ್ಶಗಳನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ, ಅವರ ದಾರಿಯಲ್ಲಿ ನಡೆಯ ಬೇಕಾಗುತ್ತದೆ. ಅವರು ಒಬ್ಬ ಸಜ್ಜನ, ಪ್ರಾಮಾಣಿಕ, ಮಿತಭಾಷಿ ರಾಜಕಾರಣಿ ಎಂದು ಹೇಳಬಯಸುತ್ತೇನೆ. ಸ್ವತಃ ನಮ್ಮವರೇ ಆದಂತಹ ಕೆ.ಎಸ್. ಬೀಳಗಿಯವರು ನ್ಯಾಯವಾದಿಗಳಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದಿಂದ ಬಂದಂತಹ, ಸಾಮಾಜಿಕವಾಗಿ ಬಹಳ ಕಳಕಳಿ ಇದ್ದಂತಹ ಒಬ್ಬ ಜನಪ್ರತಿನಿಧಿಯಾಗಿದ್ದರು. ಅವರು ಸಾರಿಗೆ ಸಚಿವರಾಗಿದ್ದಾಗ ನಮ್ಮ ಧಾರವಾಡ ನಗರದಲ್ಲಿ ಒಂದು ಹೊಸ ಕೆಎಸ್ಆರ್‌ಟಿಸಿ ವಾಹನ ನಿಲ್ದಾಣ ಕಟ್ಟಡವನ್ನು ಕಟ್ಟುವುದಕ್ಕೆ ಸಹಾಯ ಮಾಡಿದರು. ಅದರ ಜೊತೆಗೆ ಅವರು ಕರ್ನಾಟಕ ರಾಜ್ಯದಲ್ಲಿ ಅನೇಕ ಕೆಲಸಗಳನ್ನು ಸಾರಿಗೆ ಸಚಿವರಾಗಿದ್ದಾಗ ಮಾಡಿದ್ದಾರೆ. ಸಮಾಜದ ಏಳಿಗೆಗೆ ದುಡಿದಿದ್ದಾರೆ. ಅಷ್ಟೇ ಅಲ್ಲ ಒಬ್ಬ ಆದರ್ಶ ಪರಿಶಿಷ್ಟ

ಜಾತಿಯ ಜನನಾಯಕರಾಗಿ ಕೆಲಸ ಮಾಡಿದಂತಹ ವ್ಯಕ್ತಿಯನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗುತ್ತದೆ. ಉಳಿದಂತಹ ಅನೇಕ ಜನರು ರಾಜ್ಯದಲ್ಲಿ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಅವರೆಲ್ಲರೂ ನಾಡಿಗಾಗಿ ನೀಡಿದ ಕಾರ್ಯವನ್ನು ನಾವು ಅನುಸರಿಸಬೇಕಾಗುತ್ತದೆ. ಜನಪ್ರತಿನಿಧಿಗಳಾದಂತಹವರು ಇಂತಹ ಮಾದರಿಯಾದಂತಹ ರಾಜಕಾರಣಿಗಳ ವಿಚಾರದಲ್ಲಿ ಅನುಸರಿಸ ಬೇಕಾದಂತಹದ್ದು ಸಾಕಷ್ಟು ಇದೆ.

ಇನ್ನು ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿಯವರಂತಹ ವ್ಯಕ್ತಿ ಈ ಒಂದು ದೇಶದಲ್ಲಿ ಅಲ್ಲ ಪ್ರಪಂಚದಲ್ಲಿ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ, ಈ ರೀತಿ ಕಣ್ಣು ಇಲ್ಲದಿರುವಂತಹ ಒಬ್ಬ ವ್ಯಕ್ತಿ ಇಷ್ಟೊಂದು ಅಂಧ ಮಕ್ಕಳಿಗೆ ಸಂಗೀತ ಕ್ಷೇತ್ರದಲ್ಲಿ ತರಬೇತಿಯನ್ನು ಕೊಟ್ಟು, ಸ್ವಾಭಿಮಾನವನ್ನು ಮತ್ತು ಆತ್ಮಸ್ಥೈರ್ಯವನ್ನು ತುಂಬಿದಂತಹ ಆದರ್ಶ ವ್ಯಕ್ತಿಯಾಗಿದ್ದವರು. ಅವರು ಬಾಲಕರಿದ್ದಾಗಲೇ ಕಣ್ಣನ್ನು ಕಳೆದುಕೊಂಡು ಸಂಗೀತ ಅಭ್ಯಾಸ ಮಾಡುತ್ತಾ, ಸಂಸ್ಕೃತ, ವಚನ, ವೇದಾಂತ, ಕೈವಲ್ಯ ಪದ್ಧತಿ, ಕನ್ನಡ ವ್ಯಾಕರಣ, ಹಿಂದಿ ಭಾಷೆ, ಬ್ರೈಲ್ ಲಿಪಿ, ಅಲಂಕಾರ ಶಾಸ್ತ್ರ, ಶಬ್ದಮಣಿದರ್ಪಣಂತಹ ಗ್ರಂಥಗಳನ್ನು ಅಧ್ಯಯನ ಮಾಡಿರುತ್ತಾರೆ. ಅವರು ಯಾವ್ಯಾವ ಕ್ಷೇತ್ರದಲ್ಲಿ ಅಧ್ಯಯನ ಮಾಡಿದ್ದಾರೆ ಅದೆಲ್ಲ ಕ್ಷೇತ್ರದಲ್ಲಿ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಅವರು ಪ್ರಪಂಚದ ಆದರ್ಶ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ಅವರು ಅನೇಕ ಬಗೆಯ ವಾದ್ಯಗಳನ್ನು ನುಡಿಸುವ ಪರಿಣಿತಿ ಪಡೆದಿದ್ದರು, ಈ ರೀತಿ ವಾದ್ಯಗಳಲ್ಲಿ ಪರಿಣಿತಿ ಪಡೆದಂತಹ ಏಕೈಕ ವ್ಯಕ್ತಿ ಹಾಗೂ ಗಿನ್ನೆಸ್ ದಾಖಲೆ ಮಾಡಿದಂತಹ ವ್ಯಕ್ತಿ ಯಾರೂ ಇಲ್ಲ ಎಂದು ಹೇಳಬಹುದು. ಅವರು ಲಿಂಗಪೂಜೆ ನಿಷ್ಠರಾಗಿದ್ದರು ಮತ್ತು ಅದರಲ್ಲಿ ತಲ್ಲೀನರಾಗಿ ಬಿಡುತ್ತಿದ್ದರು. ಬಹಳ ದೀರ್ಘಕಾಲದವರೆಗೆ ಸಮಾಜದಲ್ಲಿ ಅಂಧ ಮಕ್ಕಳಿಗೆ ಹಾಗೂ ಅಂಗವಿಕಲರಿಗಾಗಿ ಸೇವೆ ಸಲ್ಲಿಸಿದ್ದಾರೆ. ಸರ್ಕಾರ ವೀರೇಶ್ವರ ಪುಣ್ಯಾಶ್ರಮಕ್ಕೆ ಸಾಕಷ್ಟು ಸಹಾಯವನ್ನು ನೀಡಿದೆ. ಸರ್ಕಾರ ಅಂಗವಿಕಲ ಮಕ್ಕಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಬೇಕಾಗುತ್ತದೆ. ಅವರಿಗೆ ಕೇಂದ್ರ ಸರ್ಕಾರ ಭಾರತ ರತ್ನ ಪ್ರಶಸ್ತಿಯನ್ನು ನೀಡಬೇಕು. ರಾಜ್ಯ ಸರ್ಕಾರ ಅವರು ಮಾಡಿದಂತಹ ಸೇವಾ ಕಾರ್ಯಕ್ಕೆ ಸೂಚನೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕು.

ಮೊನ್ನೆ ಅನೇಕ ಜನ ಕೆರೆಯಲ್ಲಿ ಬಿದ್ದು ಮರಣ ಹೊಂದಿದ್ದಾರೆ. ಈ ವಿಚಾರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಹಿರಿಯ

ಸದಸ್ಯರುಗಳು ಮಾತನಾಡಿದ್ದಾರೆ. ಇಕ್ಕಟ್ಟು ರಸ್ತೆಗಳು ಇರುವುದರಿಂದ, ಮಾರ್ಗಗಳು ಸುರಕ್ಷಿತವಾಗಿ ಇಲ್ಲದಿರುವುದರಿಂದ, ವಾಹನ overload ಮಾಡುವುದರಿಂದ, ಅದಕ್ಕಿಂತ ಹೆಚ್ಚಾಗಿ ಈಗ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿರುವುದರಿಂದ ಇಂತಹ ಅನೇಕ ಘಟನೆಗಳು ರಾಜ್ಯದಲ್ಲಿ ಮೇಲಿಂದ ಮೇಲೆ ನಡೆದಿವೆ. ತಿರುವು ರಸ್ತೆ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮತ್ತು ತಾಲ್ಲೂಕಿನ ರಸ್ತೆಗಳು ಇರುವಂತಹ ಕಡೆಗಳಲ್ಲಿ ಇಂತಹ ಅನೇಕ ಕೆರೆಗಳು ಇವೆ. ಇಂತಹ ಕಡೆಗಳಲ್ಲಿ ಶಾಶ್ವತವಾದಂತಹ, ಗುಣಮಟ್ಟದ ತಡೆಗೋಡೆಗಳನ್ನು ಕಟ್ಟಬೇಕು ಮತ್ತು ರಸ್ತೆಗಳನ್ನೂ ಕೂಡ ಸರಿಯಾದ ರೀತಿಯಲ್ಲಿ ಅಗಲೀಕರಣವನ್ನು ಮಾಡಬೇಕು. ರಸ್ತೆಯ ಒಂದು ಪಕ್ಕದಲ್ಲಿ ಕೆರೆ ಇರುತ್ತದೆ, ಇನ್ನೊಂದು ಪಕ್ಕದಲ್ಲಿ ಹೊಂಡ ಇರುತ್ತದೆ. ಇಂತಹ ಕಡೆಗಳಲ್ಲಿ ಕೂಡ ಸರ್ಕಾರ ರಸ್ತೆಯ ಅಗಲೀಕರಣವನ್ನು ಮಾಡಬೇಕು. ಇಲ್ಲದಿದ್ದರೆ ಇಂತಹ ಅವಘಡಗಳು ಸಂಭವಿಸುತ್ತಿರುತ್ತವೆ. ಅನೇಕ ಜೀವಗಳಿಗೆ ಹಾನಿಯಾಗುತ್ತಿರುವಂಥಾದ್ದಕ್ಕೆ ತಾವು ಸಂರಕ್ಷಣೆಯನ್ನು ಕೊಡಬೇಕೆಂದು ತಿಳಿಸುತ್ತಾ, ತಾವು ತಂದಂತಹ ಈ ಪ್ರಸ್ತಾಪಕ್ಕೆ ಬೆಂಬಲವನ್ನು ಸೂಚಿಸುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತ, ನನ್ನ ಒಂದೆರಡು ಅನಿಸಿಕೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಮನೆಯ ಸದಸ್ಯರಾದಂತಹ ಸನ್ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರು, ಮಾಜಿ ಸದಸ್ಯರಾದಂತಹ ಹಾಗೂ ರಾಜ್ಯಸಭೆಯ ಸದಸ್ಯರಾದಂತಹ ಶ್ರೀ ಎಂ. ರಾಜಶೇಖರ ಮೂರ್ತಿಯವರು, ಮಾಜಿ ಸಚಿವರಾದಂತಹ ಶ್ರೀ ಕೆ.ಎಸ್. ಬೀಳಗಿಯವರು, ಶ್ರೀ ಅಶ್ವತ್ಥನಾರಾಯಣ ರೆಡ್ಡಿಯವರು, ವಿಧಾನಸಭೆಯ ಮಾಜಿ ಸದಸ್ಯರಾದಂತಹ ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು, ಶ್ರೀ ಜೆ.ಎಲ್. ಕಬಾಡೆಯವರು, ಶ್ರೀ ಕೊಗಳಿ ಕರಿಬಸವನಗೌಡ, ಶ್ರೀ ಎಸ್.ಬಿ. ಮದನ್‌ಲಾಲ್, ಪದ್ಮಭೂಷಣ ಪುಟ್ಟರಾಜ ಗವಾಯಿಯವರು, ಹಿರಿಯ ಪತ್ರಕರ್ತರಾದಂತಹ ಶ್ರೀ ಕೆ. ಶ್ರೀಧರಾಚಾರ್, ಚಲನಚಿತ್ರ ನಿರ್ದೇಶಕರಾದಂತಹ ಶ್ರೀ ಬಿ.ಎಸ್. ರಂಗಾರವರು ಮತ್ತು ಮೈಸೂರಿನ ಬಳಿ ಉಂಡಬತ್ತಿನ ಕೆರೆಯಲ್ಲಿ ಬಿದ್ದು ಸಾವಿಗೀಡಾದಂತಹ 30 ದುರ್ದೈವಿಗಳ ನಿಧನದಿಂದ ಅವರ ಕುಟುಂಬಗಳಿಗೆ ಅವರ ಅಗಲಿಕೆಯಿಂದ ಆದಂತಹ ದುಃಖಕ್ಕೆ ಶಕ್ತಿಯನ್ನು ಭರಿಸಲಿ ಎಂದು ತಮ್ಮ ಮೂಲಕ ನಾನು ಮನವಿಯನ್ನು

ಮಾಡುತ್ತೇನೆ. ಸನ್ಮಾನ್ಯ ಕೃಷ್ಣಮೂರ್ತಿಯವರು ಈ ಮನೆಯ ಸದಸ್ಯರಾಗಿ ಕಳೆದ ನಾಲ್ಕು ಬಾರಿ ನಿರಂತರವಾಗಿ ಆಯ್ಕೆಯಾಗಿ ನಮ್ಮ ಜೊತೆಯಲ್ಲಿ ಕೆಲಸ ಮಾಡಿದ್ದರು. ಒಬ್ಬ ಜನಪ್ರತಿನಿಧಿಯಾಗಿ ತನ್ನ ಮತಕ್ಷೇತ್ರದಲ್ಲಿ ಮತ ಕೊಟ್ಟಿದ್ದರೂ, ಮತ ಕೊಡದಿದ್ದರೂ ಕೂಡ ಅವರ ಸವಲತ್ತುಗಳನ್ನು ಮತ್ತು ಹಕ್ಕಿಗೆ ಹೇಗೆ ರಕ್ಷಣೆ ನೀಡಿ ನಿಜವಾದಂತಹ ಪ್ರತಿನಿಧಿಯಾಗಿ ಕಾರ್ಯನಿರ್ವಹಣೆ ಮಾಡಬೇಕು ಎನ್ನುವುದನ್ನು ತೋರಿಸಿಕೊಟ್ಟಂತಹವರು. ಜನ ಮತ ಕೊಟ್ಟಿರಲಿ, ಕೊಡದಿರಲಿ, ಅವರ ಪಕ್ಷದಿಂದ ಪ್ರತಿನಿಧಿಸಿದಂತಹವರಿರಲಿ ಇಲ್ಲದಿರಲಿ, ಅವರ ಪರವಿರಲಿ, ವಿರುದ್ಧವಿರಲಿ ಅವರೆಲ್ಲರನ್ನೂ ಸರಿಸಮಾನರಾಗಿ ನೋಡಿ, ಸಂವಿಧಾನಗಳ ಆಶಯಗಳ ಪ್ರಕಾರ ಒಬ್ಬ ಚುನಾಯಿತ ಪ್ರತಿನಿಧಿ ಹೇಗೆ ನಡೆದುಕೊಳ್ಳಬೇಕು ಎನ್ನುವಂತಹ ಉತ್ತಮವಾದಂತಹ ನಡವಳಿಕೆಯ ಮುಖಾಂತರ ಈ ಸದನದ ಮತ್ತು ರಾಜ್ಯದ ಜನರಿಗೆ ಅವರು ಒಂದು ದೊಡ್ಡ ಉದಾಹರಣೆಯಾಗಿ ನಮ್ಮ ಮುಂದೆ ನಿಂತಿದ್ದಾರೆ. ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಅವರ ಕ್ಷೇತ್ರಕ್ಕೆ ನಾನು ಹೋದಾಗ ನನ್ನ ಜೊತೆಯಲ್ಲಿ ಅವರು ಅನೇಕ ಬಾರಿ ಜಗಳ ಮಾಡುತ್ತಿದ್ದರು. ನೀವು ಪಕ್ಕದ ಲಕ್ಷ್ಮಯ್ಯನವರಿಗೆ ಎರಡು–ಮೂರು ಆಸ್ಪತ್ರೆ ಕೊಟ್ಟಿದ್ದೀರಿ, ನನಗೆ ಒಂದೇ ಆಸ್ಪತ್ರೆ ಕೊಟ್ಟಿದ್ದೀರಿ ಎಂದು ಹೇಳಿ ಗಲಾಟೆ ಮಾಡಿ, ಒತ್ತಡ ಹಾಕಿ, ಅವರಿಗಿಂತ ಹೆಚ್ಚು ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದರು. ಅವರು ಜನರ ಸಮಸ್ಯೆಗಳನ್ನು ಅರಿತು ಮಂತ್ರಿಗಳನ್ನು, ಸರ್ಕಾರವನ್ನು ಕನ್ವಿನ್ಸ್ ಮಾಡಿ ಸವಲತ್ತುಗಳನ್ನು ಪಡೆದುಕೊಳ್ಳಬೇಕು ಎನ್ನುವಂಥ ಉತ್ತಮವಾದ ನಡವಳಿಕೆಯಿಂದ, ಪ್ರಜಾಪ್ರಭುತ್ವದ ಕೆಳಗೆ ನಾವು ಯಾವ ರೀತಿ ಕೆಲಸ ಮಾಡಬೇಕು ಎನ್ನುವಂಥ ಉತ್ತಮವಾದ ನಡವಳಿಕೆಗಳ ಮುಖಾಂತರ ಅವರು ಇವತ್ತು ತುಂಬ ಸ್ಮರಣೀಯರಾಗಿದ್ದಾರೆ. ಅವರು ಎಂದೂ ಕೂಡ ಈ ಸದನದಲ್ಲಿ ಹದ್ದುಮೀರಿ ನಡೆದುಕೊಂಡವರಲ್ಲ. ಅವರು ವಿರೋಧ ಪಕ್ಷದಲ್ಲಿರಲಿ ಅಥವಾ ಆಡಳಿತ ಪಕ್ಷದಲ್ಲಿರಲಿ, ಕಾನೂನಿನ ಚೌಕಟ್ಟಿನ ಕೆಳಗೆ ಯಾವ ರೀತಿ ಕೆಲಸ ಮಾಡಬೇಕು ಎನ್ನುವುದನ್ನು ಅವರು ನಿಖರವಾಗಿ ಈ ಸದನದಲ್ಲಿ ಮಾಡಿ ತೋರಿಸಿಕೊಟ್ಟಿದ್ದಾರೆ. ಮಂತ್ರಿಯಾಗುವ ಎಲ್ಲ ಅರ್ಹತೆ, ಯೋಗ್ಯತೆ ಅವರಿಗೆ ಇದ್ದರೂ ಕೂಡ ಸನ್ನಿವೇಶ, ಸಂದರ್ಭಗಳು ಅವರಿಗೆ ಮಂತ್ರಿಯಾಗುವಂಥ ಯೋಗವನ್ನು ಕಲ್ಪಿಸಿಕೊಡದಿದ್ದರೂ ಅವರು ಯೋಗ್ಯತೆಯಲ್ಲಿ ಅನೇಕ ಮಂತ್ರಿಗಳಿಗಿಂತ ಬಹಳ ಎತ್ತರದಲ್ಲಿ ಇದ್ದರು. ಮಂತ್ರಿಯಾಗದಿದ್ದರೂ, ಯೋಗ್ಯತೆ ಮತ್ತು ಸಾಮರ್ಥ್ಯದಲ್ಲಿ ಮಂತ್ರಿಗಳನ್ನು ಮೀರಿಸಿದಂಥ

ಯೋಗ್ಯತೆಯನ್ನು ಅವರು ಪಡೆದುಕೊಂಡಿದ್ದರು. ಅದರ ಜೊತೆಗೆ, ಅಲ್ಲಿರತಕ್ಕಂಥ ಎಲ್ಲ ಧಾರ್ಮಿಕ ಸಂಘಟನೆಗಳು ಮತ್ತು ಕೇಂದ್ರಗಳೂ ಕೂಡ ಅವರ ಪರವಾದಂಥ ಪ್ರೀತಿ, ಒಲವನ್ನು ತೋರಿಸುವ ಮುಖಾಂತರ ಅವರು ನಿಜವಾದಂಥ ಒಬ್ಬ ಜಾತ್ಯತೀತ ನಾಯಕ ಎನ್ನುವುದನ್ನು ಪ್ರತಿಪಾದನೆ ಮಾಡಿ ಅವರು ನಮ್ಮನ್ನು ಅಗಲಿದ್ದಾರೆ. ಎಲ್ಲ ಜನರಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಮೂಡಿಸುವುದರ ಮುಖಾಂತರ ಇಡೀ ಕಡೂರು ಕ್ಷೇತ್ರದಲ್ಲಿ ಯಾವುದೇ ಒಂದು ಸಂಘರ್ಷಕ್ಕೆ ಅವಕಾಶವನ್ನು ಕೊಡದೇ ಸಾಮರಸ್ಯದ ಬದುಕಿಗೆ ನಾಂದಿ ಹಾಡಿದಂಥ ಒಬ್ಬ ಧೀಮಂತ ನಾಯಕ. ನಮಗೆ ಒಳ್ಳೆಯ ಆತ್ಮೀಯ ಸ್ನೇಹಿತರಾಗಿದ್ದರು. ಅವರು ಈ ಮನೆಯಲ್ಲಿ ಒಬ್ಬ ಉತ್ತಮ ನಡವಳಿಕೆಯ ಶಾಸಕರಾಗಿ ನಮ್ಮನ್ನೆಲ್ಲ ಅಗಲಿದ್ದಾರೆ. ಅವರ ಅಗಲಿಕೆಯಿಂದ ನಮ್ಮೆಲ್ಲರಿಗೂ ನೋವಾಗಿದೆ ಮತ್ತು ಅವರ ಕುಟುಂಬಕ್ಕೆ ಹಾಗೂ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅದನ್ನು ಭರಿಸತಕ್ಕಂಥ ಶಕ್ತಿ ನಮಗೆ ಮತ್ತು ಅವರ ಕುಟುಂಬಕ್ಕೆ ಲಭಿಸಲಿ ಎಂದು ನಾನು ಉಚ್ಚರಿಸಲು ಬಯಸುತ್ತೇನೆ.

ಇನ್ನು ದಿವಂಗತ ಎಂ. ರಾಜಶೇಖರ ಮೂರ್ತಿಯವರು, ನಾನು ಹುಟ್ಟುವುದಕ್ಕಿಂತ ಮೊದಲೇ ಅಂದರೆ, ಯಳಂದೂರಿನಲ್ಲಿ double-member constituency ಇದ್ದಾಗ ಅವರು ಚುನಾವಣೆಯಲ್ಲಿ ಗೆದ್ದು ಬಂದಿದ್ದರು. ನಾನು ಹುಟ್ಟುವುದಕ್ಕಿಂತ ಮೊದಲೇ ಅಲ್ಲಿಂದ ಅವರು ಆಯ್ಕೆಯಾಗಿದ್ದರು. ಅವರು ಸುಮಾರು 60 ವರ್ಷಗಳಿಗೂ ಹೆಚ್ಚು ವರ್ಷಗಳ ಕಾಲ ಸಾರ್ವಜನಿಕ ಬದುಕಿನಲ್ಲಿದ್ದರು. ಅಂದರೆ, ನನ್ನ ವಯಸ್ಸಿಗಿಂತ ಹೆಚ್ಚು ವರ್ಷಗಳ ಕಾಲ ಅವರು ಸಾರ್ವಜನಿಕ ಬದುಕಿನಲ್ಲಿದ್ದರು. ರಾಜಶೇಖರಮೂರ್ತಿಯವರನ್ನು ನಾವು ಇಲ್ಲಿ ಸ್ಮರಣೆ ಮಾಡಬೇಕಾದರೆ, ಪ್ರಮುಖವಾದಂಥ 2–3 ವಿಷಯಗಳನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಅವರು ಎಂದೂ ಸಣ್ಣ ರಾಜಕೀಯವನ್ನು ಮಾಡಿದವರಲ್ಲ. ರಾಜಕೀಯ ಎನ್ನುವುದು ಒಂದು ವಿಜ್ಞಾನವಿದ್ದ ಹಾಗೆ. ಆ ವಿಜ್ಞಾನವನ್ನು ಸರಿಯಾಗಿ ಉಪಯೋಗಿಸಿ ದೇಶ ಮತ್ತು ರಾಜ್ಯವನ್ನು ಕಟ್ಟುವುದು, ಜನರ ಹಕ್ಕನ್ನು ರಕ್ಷಣೆ ಮಾಡುವುದು, ಗುಣಾತ್ಮಕವಾದಂಥ ನಾಯಕತ್ವ ಮತ್ತು ಕಠಿಣವಾದಂಥ ನಿಲುವುಗಳ ಮುಖಾಂತರ ಹೇಗೆ ಉತ್ತಮ ಆಡಳಿತವನ್ನು ಮಾಡಬೇಕು ಎಂದು ಇಡೀ ರಾಜ್ಯಕ್ಕೆ ತೋರಿಸಿ ಕೊಟ್ಟಿದ್ದಾರೆ. ಅವರು ಮಂತ್ರಿಯಾಗಿದ್ದಾಗ ಹಣಕಾಸಿನ ಸಚಿವರಾಗಿ ಇದ್ದದ್ದು ಕೇವಲ ಒಂದು ವರ್ಷ ಮಾತ್ರ. ಅವರು ಬಹಳ ವರ್ಷಗಳ ಕಾಲ ಹಣಕಾಸಿನ ಮಂತ್ರಿಯಾಗಿರಲಿಲ್ಲ. ಅವರು ಕ್ರಾಂತಿಕಾರಕವಾದಂಥ ಬದಲಾವಣೆಗಳನ್ನು ತರುವ ಪ್ರಯತ್ನವನ್ನೂ

ಮಾಡಲಿಲ್ಲ. ಆದರೂ ಅವರನ್ನು ಮಂತ್ರಿಯಾಗಿ ಏಕೆ ನಾವು ಇವತ್ತು ನೆನೆಸಿಕೊಳ್ಳುತ್ತಿದ್ದೇವೆ ಎಂದರೆ ಅವರ ಕಠಿಣವಾದಂಥ ನಿಲುವು, ನಿರ್ದಾಕ್ಷಿಣ್ಯವಾಗಿ ಸಂಪನ್ಮೂಲದ ಕ್ರೋಢೀಕರಣ, ತೆರಿಗೆದಾರರ ಹಣವನ್ನು ಯೋಜನೆಗಳಿಗೆ ಮತ್ತು ರಾಜ್ಯದ ಅಭಿವೃದ್ಧಿಗೆ, ಸಾಮಾಜಿಕ ವೆಚ್ಚಕ್ಕೆ ಯಾವ ರೀತಿ ನಿಃ ೨ವಾಗಿ ಬಳಸಿ, ನಿಷ್ಠುರತೆಯಿಂದ ನಡೆದುಕೊಂಡರು ಎನ್ನುವುದೇ ಇಲ್ಲಿ ಉಲ್ಲೇಖಾರ್ಹವಾದುದು. ಅವರು ತೆರಿಗೆದಾರರ ಹಣವನ್ನು ಮನಸೋ ಇಚ್ಛೆ, ಸಿಕ್ಕಿಸಿಕ್ಕಿದವರಿಗೆ, ಕೇಳಿಕೇಳಿದವರಿಗೆ ಕೊಡುತ್ತಿರಲಿಲ್ಲ. ನಮ್ಮ priority area ಏನಿದೆ, ನಮ್ಮ ಯೋಜನೆಗಳು ಯಾವುವಿವೆ, ನಿರ್ದಿಷ್ಟ ಅವಧಿಯಲ್ಲಿ ಹೇಗೆ ಅವುಗಳನ್ನು ಮುಗಿಸಬೇಕು, ಅದಕ್ಕೆ ಬೇಕಾದಂಥ ಸಂಪನ್ಮೂಲ ಎಲ್ಲಿಂದ ಬರುತ್ತದೆ, ಆ ಸಂಪನ್ಮೂಲವನ್ನು ಕಠಿಣವಾಗಿ ಕ್ರೋಢೀಕರಿಸುವಲ್ಲಿ ಯಾರ ಮುಲಾಜಿಗೂ ಒಳಗಾಗದೆ, ತೆರಿಗೆದಾರರ ಹಣವನ್ನು ಜನರ ಹಿತ ಮತ್ತು ರಾಜ್ಯದ ಅಭಿವೃದ್ಧಿಯನ್ನು ಹೊರತುಪಡಿಸಿ, ಯೋಜನಾ ಆಯೋಗದ ಮಾರ್ಗಸೂಚಿಗಳ ಪ್ರಕಾರವಾಗಿ ಹೇಗೆ ಮಾಡಬೇಕು ಎನ್ನುವುದನ್ನು ಕರಾರುವಕ್ಕಾಗಿ, ಚಾಚೂ ತಪ್ಪದೇ ಮಾಡಿದ್ದರಿಂದ ಅವರು ಇವತ್ತು ಪ್ರಶಂಸನೀಯವಾಗಿ ನಮ್ಮ ಮುಂದೆ ಉಳಿದಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಮೈಸೂರು ಜಿಲ್ಲೆಯಿಂದ ದೊಡ್ಡದೊಡ್ಡ ನಾಯಕರ ಕೊಡುಗೆಯಾಯಿತು. ಅದರಲ್ಲಿ, ದಿವಂಗತ ದೇವರಾಜ ಅರಸುರವರು, ಬಿ. ರಾಚಯ್ಯನವರು, ಅಬ್ದುಲ್ ನಜೀರ್ ಸಾಬ್‌ರವರು, ಹೆಚ್.ಎಂ. ಚೆನ್ನಬಸವಪ್ಪನವರು, ಅಜೀಜ್ ಸೇಠ್‌ರವರು, ನಾಗರತ್ನಮ್ಮನವರು, ಎಂ.ಸಿ. ಬಸಪ್ಪನವರು, ಕೆ. ಪುಟ್ಟಸ್ವಾಮಿಯವರು, ಸಾಹುಕಾರ್ ಚೆನ್ನಯ್ಯನವರು ಹೀಗೆ ಅತಿರಥ ಮಹಾರಥ ನಾಯಕರನ್ನೇ ಕೊಟ್ಟಿದೆ. ಅವರು ರಾಜ್ಯಕ್ಕೆ ಕೊಟ್ಟಂಥ ರಾಜಕೀಯ ಕೊಡುಗೆ ಎಂದರೆ ಮೌಲ್ಯಾಧಾರಿತವಾದಂಥ ರಾಜಕಾರಣ, value-based politics, qualitative leaders. ಅವರು ಯಾವ ಸಂದರ್ಭದಲ್ಲೂ ಪ್ರತಿನಿತ್ಯದ ಆಡಳಿತದಲ್ಲಿ ಮೂಗು ತೂರಿಸಿದವರಲ್ಲ. ಡಿ.ಸಿ.ಗೆ ಫೋನ್ ಮಾಡಿ, ಎಸ್.ಪಿ.ಗೆ ಫೋನ್ ಮಾಡಿ, ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ಫೋನ್ ಮಾಡಿ ಇಂಥವರ ಮೇಲೆ ಒಂದು ಕೇಸ್ ಹಾಕು, ಇವನು ನಮ್ಮ ಪಾರ್ಟಿಗೆ ಹೀಗೆ ಮಾಡಿದ ಎಂದು ಅವರು ಎಂದೂ ಮಾಡಿದವರಲ್ಲ. ರಾಜಕೀಯ ಕ್ಷೇತ್ರದಲ್ಲಿ ಇಂದಿನ ಪ್ರತಿನಿಧಿಗಳು ಮತ್ತು ರಾಜಕೀಯ ಕಾರ್ಯಕರ್ತರು ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಅವರು ಬಿಟ್ಟು ಹೋಗಿದ್ದಾರೆ. ಅದಕ್ಕಾಗಿ ನಾವು ಅವರನ್ನು ಸ್ಮರಿಸಿಕೊಳ್ಳುತ್ತಿದ್ದೇವೆ. ಅವರು ತಮ್ಮ 60 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಕಪ್ಪು ಚುಕ್ಕೆಗೆ

ಅವಕಾಶವನ್ನು ಕೊಡಲಿಲ್ಲ. ತಾವು ತಪ್ಪುಗಳನ್ನು ಮಾಡಿ, ಸ್ವಜನ ಪಕ್ಷಪಾತ ಮಾಡಿ, ಭ್ರಷ್ಟಾಚಾರ ಎಸಗಿ, ಎಂದೂ ತಾವು ಪ್ರತಿನಿಧಿಸಿದ ಸಮುದಾಯವನ್ನು, ಸಮುದಾಯದ ಧರ್ಮ ಪೀಠಗಳ ರಕ್ಷಣೆಯನ್ನು ಅವರು ಪಡೆದವರಲ್ಲ. ಆದರೆ ಇವರು ಪ್ರತಿನಿಧಿಸಿದ ಸಮುದಾಯದವರು, ರಾಜಶೇಖರ ಮೂರ್ತಿಯವರು ನಮ್ಮ ಸಮುದಾಯಕ್ಕೆ ಸೇರಿದ್ದಾರೆ ಎನ್ನುವ ಹೆಮ್ಮೆಯನ್ನು ಆ ಸಮುದಾಯಕ್ಕೆ ವರ್ಗಾಯಿಸಿದಂಥವರು ಅವರು. ಆ ಕಾರಣಕ್ಕಾಗಿ ನಾವು ಅವರನ್ನು ಸ್ಮರಿಸಿಕೊಳ್ಳುತ್ತಿದ್ದೇವೆ. ಇವತ್ತು ಹಣ ಮತ್ತು ಜಾತಿ ಬೆಂಬಲಿತವಾದಂಥ ರಾಜಕೀಯ ವಾತಾವರಣದಲ್ಲಿ ಇವರು ಹೇಗೆ ನಡೆದುಕೊಂಡರು ಎನ್ನುವುದು, ಇವರ ನಡವಳಿಕೆ ಹೇಗೆ ಇಂದಿನ ಪೀಳಿಗೆಗೆ, ರಾಜಕೀಯ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಜನಸಮುದಾಯಕ್ಕೆ ಅನುಕರಣೀಯ ಆಗಬೇಕು ಎನ್ನುವುದು ನಮ್ಮ ಮುಂದೆ ಇರುವ ಅತ್ಯಂತ ಪ್ರಮುಖವಾದಂಥ ಸಂಗತಿ. ಆ ಹಿನ್ನೆಲೆಯಲ್ಲಿ ರಾಜಶೇಖರಮೂರ್ತಿಯವರು ನಮ್ಮೆಲ್ಲರಿಗೂ ಸ್ಮರಣೀಯರು. ನಾನು ಪ್ರತಿನಿಧಿಸತಕ್ಕಂಥ ಕ್ಷೇತ್ರದಲ್ಲಿರುವ ಮಾಲಂಗಿ ಎನ್ನುವ ಊರಿನಲ್ಲಿ ಅವರು ಜನ್ಮವೆತ್ತಿದವರು. ಅವರು ತಮ್ಮ ಕೊನೆಯ ದಿನಗಳಲ್ಲಿ ನನಗೆ ಒಂದು ದೂರವಾಣಿ ಕರೆ ಮಾಡಿ, ಸುವರ್ಣ ಗ್ರಾಮ ಯೋಜನೆಗೆ ನಮ್ಮ ಹಳ್ಳಿಯನ್ನೂ ಸೇರಿಸಬೇಕು ಎಂದು ಹೇಳಿದರು. ಅವರ ಆಸೆಯಂತೆ ಅದನ್ನು ಸೇರಿಸಿ, ಅದನ್ನು ಒಂದು ಮಾದರಿ ಗ್ರಾಮ ಮಾಡಬೇಕು ಎನ್ನುವ ಅವರ ಹಂಬಲವನ್ನು ಈಡೇರಿಸುವ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಅವರು ತಮ್ಮ ಕೊನೆಯ ದಿನಗಳಲ್ಲಿ ಚಾಮರಾಜನಗರ ಜಿಲ್ಲೆಯ ಮರಿಯಾಲ ಎನ್ನುವ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಂಡಿದ್ದರು. ಅಲ್ಲಿ ಒಬ್ಬರು ಒಳ್ಳೆಯ ಗುರುಗಳಿದ್ದಾರೆ. ಅವರು ಒಳ್ಳೆಯ ವಿದ್ಯಾವಂತರು. ಮಕ್ಕಳಿಗೆ ಸ್ವತಃ ತಾವೇ ಪಾಠ ಹೇಳಿಕೊಡುತ್ತೇವೆ ಎಂದು ಹೇಳುವ ಅವರಲ್ಲಿ ರಾಜಶೇಖರಮೂರ್ತಿಯವರು ಹೆಚ್ಚು ನಂಬಿಕೆ ಮತ್ತು ವಿಶ್ವಾಸವನ್ನು ಕಂಡು, ಇವತ್ತು ಇರುವಂಥ ಜಾತಿ ವ್ಯವಸ್ಥೆಯನ್ನು, ಹಣದ ಪ್ರಭಾವವನ್ನು ನೋಡಿ, ಅಲ್ಲಿಗೆ ಹೋಗಿ ವಿದ್ಯಾಸಂಸ್ಥೆಗಳನ್ನು ಮಾಡಿ ಅಲ್ಲಿ ಉತ್ತಮವಾದಂಥ ಪ್ರಜೆಗಳನ್ನು ತಯಾರು ಮಾಡಲು ಪ್ರಯತ್ನವನ್ನು ಮಾಡಿದರು. ಅದರ ಮುಖಾಂತರ ಅಲ್ಲಿ ಜಾತ್ಯತೀತವಾದಂಥ ಸಮುದಾಯಗಳು ಬರಲಿ ಎನ್ನುವ ಆಸೆಯನ್ನಿಟ್ಟು ಕೊಂಡಿದ್ದರು. ಅವರು ಉದ್ದೇಶಿಸಿದ್ದಂಥ ಮರಿಯಾಲದ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಹೆಚ್ಚು ಉತ್ತೇಜನ ಮತ್ತು ನೆರವನ್ನು ನೀಡಿ, ಅವರ ಆಸೆಯನ್ನು ಈಡೇರಿಸಲಿ ಎಂದು ಹೇಳಿ, ನಾನು ಪ್ರತಿನಿಧಿಸತಕ್ಕಂಥ ಟಿ. ನರಸೀಪುರ ಕ್ಷೇತ್ರ

12.00 ಪಿ.ಎಂ.

ಮತ್ತು ಸಿದ್ದರಾಮಯ್ಯನವರು ಪ್ರತಿನಿಧಿಸತಕ್ಕಂಥ ಚಾಮುಂಡೇಶ್ವರಿ ಕ್ಷೇತ್ರಗಳೆಡರಿಂದಲೂ ರಾಜಶೇಖರ ಮೂರ್ತಿಯವರು ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದರು. ಈಗ ನಾವು ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, ಅವರು ಹಾಕಿಕೊಟ್ಟಂಥ ಅನೇಕ ಉತ್ತಮವಾದಂಥ ಜನಪರ ಕಾರ್ಯಕ್ರಮಗಳು ಮತ್ತು ರಾಜಕೀಯ ನಡವಳಿಕೆಗಳನ್ನು ಮೈಗೂಡಿಸಿಕೊಳ್ಳಲಿಕ್ಕೆ ನಮ್ಮಂಥ ಅನೇಕ ಶಾಸಕರಿಗೆ ಮತ್ತು ರಾಜಕಾರಣಿಗಳಿಗೆ ಅವರು ಒಂದು ಉದಾಹರಣೆಯಾಗಲಿ ಎಂದು ಹಾರೈಸುತ್ತೇನೆ. ಅವರ ಸಾವು ನಮ್ಮೆಲ್ಲರಿಗಲೂ ನೋವನ್ನು ತಂದಿದೆ. ಅವರು ಕೇವಲ ಒಂದು ಪಾರ್ಟಿಯಲ್ಲಿ ಮಾತ್ರ ಸ್ನೇಹಿತರನ್ನು, ವಿಶ್ವಾಸಿಗಳನ್ನು, ಹಿತೈಷಿಗಳನ್ನು ಹೊಂದಿರಲಿಲ್ಲ. ಸಂಸ್ಥಾ ಕಾಂಗ್ರೆಸ್, ಜನತಾ ಪಾರ್ಟಿ, ಕಾಂಗ್ರೆಸ್, ಭಾರತೀಯ ಜನತಾ ಪಾರ್ಟಿ, ಜನತಾ ದಳ (ಎಸ್) ಇವೆಲ್ಲವುಗಳಲ್ಲೂ ಅವರು ರಾಜಕೀಯವಾಗಿ ಸೇರಿದ್ದರು. ಈ ಯಾವ ಪಾರ್ಟಿಯಲ್ಲಾದರೂ ಅವರಿಗೆ ಮುಖ್ಯಮಂತ್ರಿಯಾಗತಕ್ಕಂಥ ಯೋಗ್ಯತೆ ಮತ್ತು ಸಾಮರ್ಥ್ಯವಿತ್ತು. ಆದರೆ ಯಾವ ಪಾರ್ಟಿಯಲ್ಲೂ ಮುಖ್ಯ ಮಂತ್ರಿಯಾಗಲೇ ಇಲ್ಲ. ಮುಖ್ಯಮಂತ್ರಿಯಾಗುವಂಥ ಯೋಗ್ಯತೆ, ಸಾಮರ್ಥ್ಯ, ಗುಣಾತ್ಮಕ ನಾಯಕತ್ವ, ಪ್ರಾಮಾಣಿಕತೆ ಎಲ್ಲವೂ ಅವರಲ್ಲಿತ್ತು. ಆದರೆ ಯಾರೂ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಿಲ್ಲ. ಮಾಡಲಿಲ್ಲ ಎಂದು ಅವರು ಎಂದೂ ಪ್ರಚಾರಕ್ಕಾಗಿ ಪತ್ರಿಕೆ ಮತ್ತು ಮಾಧ್ಯಮಗಳ ಮುಂದೆ ಅವರು ಹೋಗಿದ್ದನ್ನು ನಾವು ನೋಡಲಿಲ್ಲ. ಅವರು ಪ್ರೆಸ್ ಕಾನ್ಫರೆನ್ಸ್ ಮಾಡಿದ್ದೇ ತುಂಬಾ ವಿರಳ. ಟಿ.ವಿ. ಮತ್ತು ಇತರ ಮಾಧ್ಯಮಗಳಲ್ಲಿ ಅವರ ಫೋಟೋ ಕಂಡಿದ್ದೇ ವಿರಳ. ತುಂಬಾ ಸೈಲೆಂಟಾಗಿ ನಾಯಕತ್ವವನ್ನು, ಪ್ರಜಾಪ್ರಭುತ್ವವನ್ನು, ಅಭಿವೃದ್ಧಿಯನ್ನು, ಆಡಳಿತವನ್ನು ಹೇಗೆ ಮಾಡಬಹುದು ಎಂದು ಅವರು ಈ ರಾಜ್ಯಕ್ಕೆ ತೋರಿಸಿ ಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಅವರು ನಮ್ಮೆಲ್ಲರಿಗೂ ರಾಜಕೀಯ ಕ್ಷೇತ್ರದ, ಸಾರ್ವಜನಿಕ ಜೀವನದ ಬದುಕು ಹೇಗಿರಬೇಕೆನ್ನುವುದನ್ನು ಬಿಟ್ಟು ಹೋಗಿದ್ದಾರೆ. ಅವರು ಇಲ್ಲದಿದ್ದರೂ ಅವರ ನೆನಪಿನಲ್ಲಿ ನಾವು ಇವತ್ತು ರಾಜಕೀಯ ಜೀವನವನ್ನು ಮಾಡಬೇಕಾದದ್ದು ಅನಿವಾರ್ಯ. ಕೆ.ಎಸ್. ಬೀಳಗಿಯವರು ನನಗೆ ತುಂಬಾ ಆಪ್ತರಾಗಿದ್ದರು. ಅವರು ಮಂತ್ರಿಯಾಗಿದ್ದಾಗ ನಾನು ಶಾಸಕನಾಗಿದ್ದೆ. ಸಾಮಾಜಿಕ ನ್ಯಾಯದಲ್ಲಿ ದಲಿತರು, ಹಿಂದುಳಿದವರು ಮತ್ತು ಇತರ ಬಡವರ ಬಗ್ಗೆ ಅವರನ್ನು ಮೇಲಕ್ಕೆತ್ತುವುದಕ್ಕೆ ಅನೇಕ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಗಳ ಬಗ್ಗೆ ಜೊತೆಗೆ ಚರ್ಚೆ ಮಾಡುತ್ತಿದ್ದೆವು.

ನಾವು ಶಾಸಕರ ಭವನದ ಅಕ್ಕಪಕ್ಕದ ರೂಂನಲ್ಲಿದ್ದೆವು. ಅಲ್ಲಿ ಕುಳಿತು ಕರೆದು ಚರ್ಚೆ ಮಾಡುತ್ತಿದ್ದರು. ಅದರ ಮುಖಾಂತರ ಅವರು ತಮಗಿದ್ದಂಥ ಬದ್ಧತೆಯನ್ನು, ಸಾಮಾಜಿಕ ಕಾಳಜಿಯನ್ನು ವ್ಯಕ್ತ ಮಾಡಿ ಅವರು ಒಬ್ಬ ನಿಷ್ಠಾವಂತ ರಾಜಕೀಯ ಕ್ಷೇತ್ರದ ಕಾರ್ಯಕರ್ತರಾಗಿ ಈ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದಾರೆ, ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಇನ್ನು, ಶ್ರೀ ಅಶ್ವತ್ಥ ನಾರಾಯಣ ರೆಡ್ಡಿಯವರು ತುಂಬಾ ಬುದ್ಧಿಜೀವಿಯಾಗಿದ್ದರು. ಅವರು ಮತ್ತು ನಾನು ಶಾಸಕರಾಗಿ ಜೊತೆಯಲ್ಲಿ ಕೆಲಸ ಮಾಡಿದವರು. ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಅವರ ಕ್ಷೇತ್ರದಲ್ಲಿ 100 ಹಾಸಿಗೆಗಳ ಒಂದು ಆಸ್ಪತ್ರೆಗೆ ಅಡಿಗಲ್ಲು ಹಾಕುವುದಕ್ಕೆ ಹೋಗಿದ್ದೆ. ಅಂಥ ಸಂದರ್ಭಗಳಲ್ಲೆಲ್ಲ ಅವರು ಬಂದು ನನ್ನ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದರು. ರಾಜಕಾರಣಿಗಳು ರಾಜಕೀಯ ಕ್ಷೇತ್ರದಲ್ಲಿ ಹೇಗಿರಬೇಕು ಎನ್ನುವಂಥ ಅನೇಕ ವಿಷಯಗಳನ್ನು ಚರ್ಚೆ ಮಾಡುತ್ತಿದ್ದರು. ಅವರಲ್ಲಿ ತುಂಬಾ ಬುದ್ಧಿವಂತಿಕೆಯಿತ್ತು. ಆದರೆ, ಇವತ್ತಿನ ಅನೇಕ ಮಂತ್ರಿಗಳು ಏನೇನು ಮಾಡುತ್ತಾರೆಂದು ನೋಡಿದಾಗ ಅವರಿಗೆ ಬುದ್ಧಿ ಬದಲು ಬೇರೆ ತುಂಬಿದೆ, ಅದರಿಂದಾಗಿ ಬದಲಾವಣೆಗಳು ಆಗುತ್ತಿಲ್ಲ. ಬದಲಾವಣೆ ಮಾಡತಕ್ಕಂಥ ಬಹಳಷ್ಟು ಜನ ಇವತ್ತು ಅಂಥ ಒಬ್ಬ ಮಹನೀಯರ ಅಗಲಿಕೆಯಿಂದ ಕಲಿಯಬೇಕಾದದ್ದು ಬಹಳ ಇದೆ. ಇನ್ನು, ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು, ಶ್ರೀ ಜೆ.ಎಲ್. ಕಬಾಡಿಯವರು, ಶ್ರೀ ಕೊಗಳಿ ಕರಿಬಸವನಗೌಡರವರು, ಶ್ರೀ ಎಸ್.ಬಿ. ಮದನ್‌ಲಾಲ್‌ರವರು ಮತ್ತು ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿಯವರು ಅಗಲಿದ್ದಾರೆ. ಡಾ: ಪುಟ್ಟರಾಜ ಗವಾಯಿಯವರು ಸಂಗೀತ ಕ್ಷೇತ್ರದ ಮೂಲಕ ಸಾಮರಸ್ಯವನ್ನು ಮೂಡಿಸಿ ಸಮುದಾಯಗಳ ಒಗ್ಗಟ್ಟಿನಲ್ಲಿ ಹೆಚ್ಚಿಗೆ ಕಾಣಿಕೆಯನ್ನು ನೀಡಿದ್ದಾರೆ. ಅವರೂ ಕೂಡ ಕರ್ನಾಟಕ ರಾಜ್ಯದಲ್ಲಿ ಮತ್ತು ಭಾರತದ ಚರಿತ್ರೆಯಲ್ಲಿ ಅವಿಸ್ಮರಣೀಯವಾಗಿ ಉಳಿಯತಕ್ಕಂಥ ಮಹಾನ್ ಮೇರು ಪುರುಷರು. ಇನ್ನು, ಶ್ರೀ ಕೆ. ಶ್ರೀಧರಾಚಾರ್‌ರವರು gentleman journalist ಆಗಿ ಕೆಲಸ ಮಾಡಿ ಆ ಕ್ಷೇತ್ರದ ನಿಷ್ಪಕ್ಷಪಾತವಾದಂಥ ನಿಲುವು ಮತ್ತು ನಡವಳಿಕೆಗಳ ಮೂಲಕ ರಾಜಕೀಯ ಕ್ಷೇತ್ರವನ್ನು, ಸಾರ್ವಜನಿಕ ಬದುಕಿನ, ಸಾರ್ವಜನಿಕ ಸಮಸ್ಯೆಗಳನ್ನು ಪ್ರತಿಬಿಂಬಿಸಿದಂಥ ರೀತಿನೀತಿಗಳು ಅವರನ್ನು ಸದಾ ನೆನಸಿಕೊಳ್ಳುವಂತೆ ಮಾಡುವುದನ್ನು ನಾವು ಕಾಣುತ್ತೇವೆ. ಇನ್ನು, ಶ್ರೀ ಬಿ.ಎಸ್. ರಂಗಾರವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳ ವಿಶ್ಲೇಷಣೆಯನ್ನು ಚಿತ್ರರಂಗದಲ್ಲಿ ನಿರ್ದೇಶನದ ಮೂಲಕ ಮಾಡಿ ಸಾಮಾಜಿಕ ಕೊಡುಗೆಯನ್ನು ಕೊಟ್ಟಿದ್ದಾರೆ.

ಅದರ ಜೊತೆಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಮಧ್ಯೆ ನಡೆದ ಭೀಕರ ಅಪಘಾತ 31 ಜನರ ಸಾವಿಗೆ ಕಾರಣವಾಗಿದೆ. Accident is a major killer disease in India. So, accidents are bound to happen. ಆದರೆ, accident ನಿಂದ ಆಗುವ ಸಾವುನೋವುಗಳನ್ನು ತಪ್ಪಿಸಲಿಕ್ಕೆ ರಾಜಕೀಯ ಕ್ಷೇತ್ರಕ್ಕೆ ಸಾಧ್ಯತೆ ಇದೆ. ಅದನ್ನು ಆ ಪಕ್ಷ, ಈ ಪಕ್ಷ, ಆ ಸರ್ಕಾರ, ಈ ಸರ್ಕಾರ ಎನ್ನುವ ಭಿನ್ನ ಭೇದವನ್ನು ಮಾಡದೆಯೇ ಎಲ್ಲೆಲ್ಲಿ accident zones ಇವೆ, ಕೆರೆ ಕಾಲುವೆಗಳ ದಂಡೆಗಳಲ್ಲಿ ವಾಹನಗಳು ಎಲ್ಲೆಲ್ಲಿ ಹಾದು ಹೋಗುತ್ತವೆ ಅಂಥ ಕಡೆ ತಡೆಗೋಡೆಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಮತ್ತು ರಾಜಕೀಯ ವಲಯ ಚರ್ಚೆ ಮಾಡಿ accidents ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. Because accidents are bound to happen, accident in India is a major killer disease. ಅದನ್ನು ಕಡಿಮೆ ಮಾಡುವುದಕ್ಕೆ, ತಡೆಗಟ್ಟುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಹೇಳಿ, ಇವತ್ತು ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲ ವ್ಯಕ್ತಪಡಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಶ್ರೀ ಕೆ.ಎಂ. ಕೃಷ್ಣ ಮೂರ್ತಿಯವರು ನಮ್ಮ ಜಿಲ್ಲೆಯ ಕಡೂರು ಕ್ಷೇತ್ರದ ಶಾಸಕರಾಗಿದ್ದರು. ನಾವೆಲ್ಲರೂ ಒಟ್ಟಾಗಿ ಅವರನ್ನು ಪ್ರೀತಿಯಿಂದ ಅಗ್ರಜ ಎಂದು ಕರೆಯುತ್ತಿದ್ದೆವು. ಅಗ್ರಜ ಎಂದರ್ರೆ ಹಿರಿಯಣ್ಣ ಎಂದರ್ಥ. ನಮ್ಮ ಜಿಲ್ಲೆಯವರು 5 ಜನ ಶಾಸಕರಿದ್ದೇವೆ. ನಾವು ಯಾವಾಗಲೂ ಏನು ಹೇಳುತ್ತಿದ್ದೆವು ಎಂದರೆ, 'ನಾವು 5 ಜನ ಶಾಸಕರಲ್ಲಿ 4 ಜನ ಒಂದು ಕಡೆ ಇದ್ದೇವೆ, ಪಾಂಡವ–ದೊಡ್ಡಣ್ಣ ಧರ್ಮರಾಯ, ನೀನು ಹೊರಗಡೆಯಿದ್ದೀಯಲ್ಲಾ, ನೀನು ನಮ್ಮ ಜೊತೆ ಬಂದು ಬಿಡು.' ಎಂದು ಹೇಳುತ್ತಿದ್ದೆವು. ಆಗ ಅಗ್ರಜ ಏನು ಹೇಳುತ್ತಿದ್ದರೆಂದರೆ, 'ನೀವೆಲ್ಲ ಧರ್ಮರಾಯ, ಧರ್ಮರಾಯ ಎಂದು ಕರೆಯುತ್ತಿದ್ದೀರಿ ಮಹಾರಾಯ, ಆದರೆ, ಅಧಿಕಾರ ಎನ್ನುವ ದ್ರೌಪದಿಯನ್ನು ನೀವೇ ಇಟ್ಟುಕೊಂಡಿದ್ದೀರಿ, ಧರ್ಮರಾಯ ಎಂದು ಹೇಳಿದ ಮೇಲೆ ಅಧಿಕಾರವೆನ್ನುವ ದ್ರೌಪದಿಯನ್ನು ನಮಗೂ ಸ್ವಲ್ಪ ಬಿಟ್ಟು ಕೊಡಿ ಮಹಾರಾಯ' ಎಂದು ಕೇಳುತ್ತಿದ್ದರು. ಆಗ ನೀವು ಧರ್ಮರಾಯ ಎಂದು ಒಪ್ಪಿಕೊಂಡ ಮೇಲೆ ಪಾಂಡವರ ಜೊತೆ ಇರಬೇಕಪ್ಪ. ಆದರೆ, ನೀನು ಧರ್ಮರಾಯ ಎಂದು ಒಪ್ಪಿಕೊಳ್ಳುತ್ತೀಯ, ಪಾಂಡವರನ್ನು ಬಿಟ್ಟು ಬೇರೆ ಕಡೆ

ಇದ್ದೀಯ. ನೀನು ನಮ್ಮ ಜೊತೆ ಇದ್ದು ಬಿಡು, ಅಧಿಕಾರ ಎನ್ನುವ ದ್ರೌಪದಿಯನ್ನು ನೀನೆ permanent ಆಗಿ ಇಟ್ಟುಕೋ'. ಎಂದು ನಾವು ಹೇಳುತ್ತಿದ್ದೆವು. ಆ ರೀತಿ ಪಕ್ಷಾತೀತವಾಗಿ ಎಲ್ಲರ ಹೃದಯವನ್ನು ಗೆದ್ದಂಥ ಒಬ್ಬ ಸರಳ ವ್ಯಕ್ತಿ. ನಿಜಕ್ಕೂ ನಮ್ಮ ಜಿಲ್ಲೆಯ ದೊಡ್ಡಣ್ಣನಾಗಿಯೇ ಇದ್ದವರು ಶ್ರೀ ಕೃಷ್ಣಮೂರ್ತಿಯವರು. ಒಂದು ರೀತಿ ಸ್ವಂತ ಅಣ್ಣನನ್ನು ಕಳೆದು ಕೊಂಡಿದ್ದಕ್ಕಿಂತ ಹೆಚ್ಚು ದುಃಖಪಟ್ಟಿದ್ದೇವೆ, ಅತ್ತಿದ್ದೇವೆ. ಪ್ರತಿ ಸಾರಿ ಚುನಾವಣೆ ಬಂದಾಗ ಈ ಸಲ ಕೃಷ್ಣಮೂರ್ತಿ ಗೆಲ್ಲುವುದು ಕಷ್ಟವಾಗುತ್ತದೆ ಎಂದು ಅನ್ನಿಸುತ್ತಿತ್ತು. ಆದರೆ, ಪ್ರತಿ ಚುನಾವಣೆಯಲ್ಲಿಯೂ ನಿರಾಯಾಸವಾಗಿ ಅವರು pass ಆಗಿರುತ್ತಿದ್ದರು. ಕಡೆಗೆ, 'ಏನಣ್ಣ ನಿನ್ನ ಗುಟ್ಟು? ಗೆಲ್ಲುವುದು ಕಷ್ಟವೆಂದು ಪತ್ರಿಕೆಗಳೆಲ್ಲ ಬರೆಯುತ್ತವೆ, ಆದರೆ, election ನಲ್ಲಿ ಮಾತ್ರ ನೀನು ಸಲೀಸಾಗಿ pass ಆಗುತ್ತೀಯಲ್ಲ, ಏನದರ ಗುಟ್ಟು? ಎಂದು ಕೇಳಿದಾಗ, 'ನಾನು ಯಾರಿಗೂ ಏನೂ ತೊಂದರೆ ಮಾಡದಿರುವುದೇ ಗುಟ್ಟು' ಎಂದು ಅವರು ಹೇಳುತ್ತಿದ್ದರು. ಅಂದರೆ, ಇಡೀ ರಾಜಕಾರಣದಲ್ಲಿ ಒಳ್ಳೆಯದು ಮಾಡುವುದಕ್ಕಾಗದಿದ್ದರೂ ಕೆಟ್ಟದ್ದನ್ನು ಯಾರಿಗೂ ಮಾಡಬೇಡ ಎನ್ನತಕ್ಕಂಥದ್ದೇ ಅವರ ರಾಜಕೀಯ ಬದುಕಿನ ಸೂತ್ರ ಆಗಿತ್ತು. ಅದರ ಪರಿಣಾಮವಾಗಿಯೇ ಈ ಮನುಷ್ಯ ಯಾರಿಗೂ ಕೆಟ್ಟದು ಮಾಡುವ ಮನುಷ್ಯನಲ್ಲ, ಹಾಗಾಗಿ ಈ ಮನುಷ್ಯನೇ ಇರಲಿ ಎಂದು ಜನರಿಗೆ ಅನ್ನಿಸಿ ಅವರು ಆಯ್ಕೆ ಮಾಡುತ್ತಿದ್ದರು. ಆ ರೀತಿ ಸತತವಾಗಿ 4 ಬಾರಿ ಶಾಸಕರಾಗಿ ಗೆದ್ದವರು ಶ್ರೀ ಕೃಷ್ಣಮೂರ್ತಿಯವರು. ಇನ್ನೊಬ್ಬರು, ನಮ್ಮ ಜಿಲ್ಲೆಯ ಹಿರಿಯ ಶಾಸಕಿಯಾಗಿದ್ದ ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು. ಅವರು ಗಾಂಧೀವಾದಿಯಾಗಿದ್ದರು. ಇವತ್ತಿನ ರಾಜಕೀಯಕ್ಕೂ ಅವರ ದಿನಮಾನದ ರಾಜಕೀಯಕ್ಕೂ ಹೋಲಿಕೆ ಮಾಡಿ ಅವರು ಹೇಳುತ್ತಿದ್ದರು. 'ನಮ್ಮ ಕಾಲದ ರಾಜಕಾರಣ ಈಗಿಲ್ಲ ಬಿಡು ಮಗ, ನಮಗೆಲ್ಲ ಜನರೇ ಊಟ ಕೊಟ್ಟು, ಕಾಸು ಕೊಟ್ಟು ಚುನಾವಣೆಯಲ್ಲಿ ಗೆಲ್ಲಿಸುತ್ತಿದ್ದರು. ಈಗಿನ ಕಾಲದಲ್ಲಿ ಈ ಪರಿಸ್ಥಿತಿ ನೆನೆಸಿಕೊಂಡರೆ ಹೆದರಿಕೆಯಾಗುತ್ತದೆ, ನಮ್ಮಂಥವರಿಗಲ್ಲ ರಾಜಕೀಯ' ಎನ್ನುವ ಮಾತನ್ನು ಹೇಳುತ್ತಿದ್ದರು. ಇನ್ನು, ಅವರ ಕಾಲದ ದಿನಗಳು, ಬಸಪ್ಪ ಶೆಟ್ಟರು, ರಾಜ್ಯಸಭಾ ಸದಸ್ಯರು ಅವರು ಎಷ್ಟು ಪ್ರಮಾಣದಲ್ಲಿ ಚುನಾವಣೆಗೋಸ್ಕರ ದುಡಿಯುತ್ತಿದ್ದದ್ದು, ಅದನ್ನೆಲ್ಲ ನೆನಪು ಮಾಡಿಕೊಳ್ಳತಕ್ಕಂಥ ಮಾತನ್ನು ಹೇಳುತ್ತಿದ್ದರು. ಮಹಾತ್ಮ ಗಾಂಧಿಯವರ ಜೊತೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ದಿನಗಳನ್ನು ನೆನಪು

ಮಾಡಿಕೊಳ್ಳುತ್ತಿದ್ದರು. ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು ನಡೆದಾಡುವ ವಿಶ್ವಕೋಶ ಇದ್ದಂತೆ ಇದ್ದರು. ಯಾವುದಾದರೊಂದು ಶಾಲೆಯ ಕಾರ್ಯಕ್ರಮಕ್ಕೆ ಬಂದರೂ ಕೂಡ ಇತಿಹಾಸದಿಂದ ಹಿಡಿದು ಪ್ರೇರಣೆ ಕೊಡತಕ್ಕಂಥ ಘಟನೆಗಳನ್ನು ಬಿತ್ತರಿಸುವುದರ ಮೂಲಕ ತಮ್ಮ ವ್ಯಕ್ತಿತ್ವವನ್ನು ದರ್ಶನ ಮಾಡಿಸುತ್ತಿದ್ದರು. ಆ ರೀತಿ ನಮ್ಮ ಜಿಲ್ಲೆಯ ಇಬ್ಬರು ದಿಗ್ಗಜರನ್ನು ಕಳೆದುಕೊಂಡಿದ್ದೇವೆ. ರಾಜ್ಯದ ಹಲವಾರು ದಿಗ್ಗಜರನ್ನು, ಮಾರ್ಗದರ್ಶನ ಮಾಡಿದಂಥವರನ್ನು ನಾವು ಕಳೆದುಕೊಂಡಿದ್ದೇವೆ. ಅವರೆಲ್ಲರ ಆತ್ಮಕ್ಕೆ, ಅದೇ ಸಂದರ್ಭದಲ್ಲಿ ಈ ರಾಜ್ಯದಲ್ಲಿ ನಿಧನರಾಗಿರುವ ಎಲ್ಲಾ ಜನಸಾಮಾನ್ಯರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಸಲ್ಲಿಸುವ ತಮ್ಮ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಮೊದಲಿಗೆ ಕಡೂರು ಶ್ರೀ ಕೃಷ್ಣಮೂರ್ತಿಯವರ ಬಗ್ಗೆ ಹೇಳುವುದಾದರೆ, ನಾವೆಲ್ಲ ಕೃಷ್ಣಮೂರ್ತಿ ಎಂದು ಕರೆಯುತ್ತಿರಲಿಲ್ಲ, ಕಿಟ್ಟಣ್ಣ ಎಂದು ಕರೆಯುತ್ತಿದ್ದೆವು. ಕಿಟ್ಟಣ್ಣ ನನ್ನ ಪಕ್ಷದ ಕ್ಷೇತ್ರದವರು. ನಾನು ಒಂದು ಸಲ 18 ಮತಗಳ ಅಂತರದಿಂದ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದೆ. ಆ ರೀತಿ ಸೋತಂಥ ಸಂದರ್ಭದಲ್ಲಿ ಅವರು ಬೆಂಗಳೂರಿನಲ್ಲಿ ವಿಧಾನಸಭೆಗೆ ಬರಬೇಕಾಗಿದ್ದರೆ ನೇರವಾಗಿ ನನ್ನ ಮನೆಗೆ ಬಂದರು. 'ನಾನು ಸಹ 35 ವೋಟುಗಳಿಂದ ಸೋತಿದ್ದೆನಪ್ಪಾ, ನೀನು ಹೆದರಬೇಡ, ನೀನು ಧೈರ್ಯವಾಗಿರು' ಎಂದು ನನ್ನ ಮನೆಗೆ ಬಂದು ಧೈರ್ಯ ಹೇಳಿ ಬಂದಿದ್ದರು. ಪರವಾಗಿಲ್ಲ, ಇಂಥವರೂ ಇದ್ದಾರಲ್ಲ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿತ್ತು. ಇದಾದ ಮೇಲೆ, ಅವರಿಗೂ ನನಗೂ ಗಾಢವಾದಂಥ ವಿಶ್ವಾಸ ಬೆಳೆಯಿತು. ವಿಶ್ವಾಸ ಬೆಳೆದ ಮೇಲೆ ಅವರು ನನಗೆ ಮಾರ್ಗದರ್ಶಕರಾಗಿದ್ದರು. ವಿಧಾನಸಭೆಗೆ ಆಯ್ಕೆಯಾಗಿ ಬಂದ ಮೇಲೆ ಅವರ ರೂಂನಲ್ಲಿ ಯಾವಾಗಲೂ ಅಡುಗೆ ಮಾಡಿಸುತ್ತಿದ್ದರು. ಬಹುಶಃ ನಮ್ಮ ಮನೆಯಲ್ಲಿ ಊಟಕ್ಕೆ ಬಡಿಸುತ್ತಿದ್ದರೋ, ಇಲ್ಲವೋ ಗೊತ್ತಿಲ್ಲ. ಆದರೆ, ಅವರು ಗೌಡರ ಊಟವನ್ನು ತೆಗೆದಿಡಿ ಎಂದು ಹೇಳಿ ನನಗೆ ಊಟ ತೆಗೆಸಿಟ್ಟು ನಾನು ರಾತ್ರಿ 12-00 ಗಂಟೆಗೆ ಹೋದರೂ ಊಟ ಹಾಕಿಸುತ್ತಿದ್ದರು. ಇವತ್ತು ಅಂಥವರನ್ನು ನೆನೆದುಕೊಳ್ಳಬೇಕು. ಅಂಥ ವ್ಯಕ್ತಿತ್ವವಿತ್ತು. ನಂಬಿದರೆ ಯಾರನ್ನೂ ಕೈಬಿಡದಂಥ ಮಾರ್ಗದರ್ಶಕರಾಗಿ ನನಗೆ ಕೆಲವು ವಿಚಾರಗಳನ್ನು ಹೇಳಿಕೊಡುತ್ತಿದ್ದರು. ಈ ರೀತಿ ಅಧಿಕಾರಿಗಳ ಹತ್ತಿರ ಹೋಗಿ

ಮಾತನಾಡಬೇಕು, rash ಆಗಿ ಹೋಗಬೇಡ, ಸ್ವಲ್ಪ ತಾಳ್ಮೆಯಿಂದ ಹೋಗು ಎಂದು ಅನೇಕ ವಿಚಾರಗಳನ್ನು ಹೇಳುತ್ತಿದ್ದರು. 11-00, 12-00 ಗಂಟೆ ರಾತ್ರಿವರೆಗೂ ರೂಂನಲ್ಲಿ ಕುಳಿತು ಚರ್ಚೆ ಮಾಡುತ್ತಿದ್ದೆವು. ಅವರು ಅಂಥ ವ್ಯಕ್ತಿತ್ವವನ್ನು ಹೊಂದಿದ್ದಂಥವರು. ಕಳೆದ ಸಲ ನಾವಿಬ್ಬರು ಅಲ್ಲದೆ ಕರಡಿ ಸಂಗಣ್ಣ ಮತ್ತಿತರರು Estimates Committee ಯಲ್ಲಿ ಸದಸ್ಯರಾಗಿದ್ದೆವು. Foreign ಗೆ ಹೋಗಬೇಕೆಂದು ಹೊರಟ ಸಂದರ್ಭದಲ್ಲಿ ಅವರ pas port ತೆಗೆದುಕೊಂಡು ಇಬ್ಬರೂ ಅವರ ತಾಯಿಯ ಆಶೀರ್ವಾದ ತೆಗೆದುಕೊಂಡು ಬರಲಿಕ್ಕೆ ಅವರ ಮಗಳ ಮನೆಗೆ ಹೋದೆವು. ಅವರ ತಾಯಿಯ ಅಶೀರ್ವಾದ ತೆಗೆದುಕೊಂಡು ಬರಲಿಕ್ಕೆ ಅವರ ಮಗಳ ಮನೆಗೆ ಹೋದೆವು. ಅವರ ತಾಯಿ, 'ನಾನು ಸತ್ತು ಹೋಗುತ್ತೇನೆ, ನೀನು ಹೊರ ದೇಶಕ್ಕೆ ಹೋಗಬೇಡ' ಎಂದು ಹೇಳಿದರು. ಹಾಗಾಗಿ ನಾವು tour cancel ಮಾಡಿ ಬಂದೆವು. ಅವರ ತಾಯಿ ಇನ್ನೂ ಬಹಳ ಗಟ್ಟಿಯಾಗಿದ್ದಾರೆ. ಆದರೆ, ಇವರು ಮಾತ್ರ ತೀರಿ ಹೋದರು. ಆ ರೀತಿ ಅವರಿಗೆ ನೋವು ಕಾಣಿಸಿಕೊಂಡಿದ್ದ ದಿವಸ ಬೆಂಗಳೂರಿಗೆ ಬರಬೇಕಾದರೆ ಮೊದಲು ಅರಸೀಕೆರೆಗೆ ಬಂದರು. ಯುಗಾದಿ ಹಬ್ಬದ ವರ್ಷದ ತೊಡಕು ಇತ್ತು. ಊಟ ಮಾಡಿ ಹೊರಟ ಸಂದರ್ಭದಲ್ಲಿ ಮಧ್ಯ ದಾರಿಯಲ್ಲಿ ಸಿಕ್ಕಿದ ಒಂದು ಆಸ್ಪತ್ರೆಗೆ ಹೋಗಿ ನೋಡಿ ಎಂದು ಡಾಕ್ಟರನ್ನು ಕೇಳಿದಾಗ, ಡಾಕ್ಟರ್ ಏಕೋ ಸ್ವಲ್ಪ ಇದು ಏನೋ ಒಂದು ತರಹ ಕಾಯಿಲೆ, ಬೇಗ ಹೋಗಿ ಎಂದು ಹೇಳಿದರು. ಅಮೇಲೆ ರಾಮಯ್ಯ ಆಸ್ಪತ್ರೆಯಲ್ಲಿ test report ಬಂದ ತಕ್ಷಣ ಇದು ದೊಡ್ಡ ಕಾಯಿಲೆ ಎಂದು ಗೊತ್ತಾಯಿತು. ಇದು ಹುಷಾರಾಗದ ಕಾಯಿಲೆ ಎಂದು ಡಾಕ್ಟರ್ ಹೇಳಿದಾಗ ಅದಂಥ ಅಘಾತ ಹೇಳುವುದು ಕಷ್ಟ. ನಿಜವಾಗಿಯೂ ನಮ್ಮ ಜೀವನದಲ್ಲಿ ಎಂದೂ ಕಂಡು ಬರದಷ್ಟು ನೋವಾಯಿತು. ಅದನ್ನು ತಡೆದುಕೊಳ್ಳಲು ಆಗಲೇ ಇಲ್ಲ. ನಾಲ್ಕೈದು ಸಲ ಆಸ್ಪತ್ರೆಗೆ ಹೋದೆವು. ಅವರು ರೂಂನಲ್ಲಿದ್ದರು. ಆದರೂ, ಬದುಕುವುದಕ್ಕೆ ಆಗಲೇ ಇಲ್ಲ. ಅವರು ತೀರಿ ಹೋದರು. ಕಿಟ್ಟಣ್ಣ ಎಂದು ಪ್ರಖ್ಯಾತಿ ಪಡೆದಂಥ ಜನಾನುರಾಗಿಯಾಗಿ ಅಲ್ಲಿ ಅವರು ಮಾಡುತ್ತಿದ್ದ ಕೆಲಸ ಕಾರ್ಯಗಳಿಗೆ ಜನ ಅವರಿಗೆ ಸ್ಪಂದನೆ ಮಾಡುತ್ತಿದ್ದುದ್ದನ್ನು ನೋಡಿ ನಾವು ಕಲಿಯುತ್ತಿದ್ದೆವು. ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಒಂದು ಸಲ ಮಂತ್ರಿಯಾಗಬೇಕೆನ್ನುವ ಆಸೆ ಅವರಲ್ಲಿ ಬಹಳ ಇತ್ತು. ಎರಡು ಸಲ ಕೈಗೆ ಬಂದುದ್ದನ್ನು ಕಿತ್ತುಕೊಂಡು ಬಿಟ್ಟರು ಎಂದು ನಮ್ಮ ಹತ್ತಿರ ಹೇಳಿಕೊಳ್ಳುತ್ತಿದ್ದರು. ಮುಂದೆ ಒಂದು ಸಾರಿ

ಆಗುತ್ತೀರಿ ಬಿಡಣ್ಣಾ ಎಂದು ಹೇಳಿದ್ದೆವು. ಆದರೆ, ಅವರು ತೀರಿ ಹೋದರು. ಈಗ ಅವರ ಕೊಠಡಿ ಕಡೆ ಹೋಗುವುದಕ್ಕೆ ಒಂದು ತರಹ ಆಗುತ್ತದೆ, ಆ ತರಹ ಬಾಂಧವ್ಯ ಇಟ್ಟುಕೊಂಡಿದ್ದೆವು. ಅಂಥವರನ್ನು ನಾವೀಗ ಅಗಲಿದ್ದೇವೆ. By-electionನಲ್ಲಿ ಸಹ ಅವರ ಕುಟುಂಬಕ್ಕೆ ಬಹಳ ನೋವುಂಟಾಯಿತು. ಅದಕ್ಕೂ ನಾನು ಈ ಸಂದರ್ಭದಲ್ಲಿ ವಿಷಾದ ವ್ಯಕ್ತಪಡಿಸುತ್ತೇನೆ. ಆ ರೀತಿ ಒಳ್ಳೆಯ ವ್ಯಕ್ತಿಯಾದಂಥವರು ಕೃಷ್ಣಮೂರ್ತಿಯವರು. ಇನ್ನು, ರಾಜಶೇಖರಮೂರ್ತಿಯವರ ಬಗ್ಗೆ ನಾವು ಕೇಳಿ ತಿಳಿದುಕೊಂಡಿದ್ದೇವೆ. ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಕೆಲಸ ಮಾಡಿದಂಥ ಸಂದರ್ಭದಲ್ಲಿ ಎಲ್ಲಾ ಪತ್ರಿಕಾ ಮಾಧ್ಯಮದವರನ್ನು ನೋಡಿ ಓದಿರುವ ಪ್ರಕಾರ ಅವರು ಬಹಳ ಉತತಮ ಅರ್ಥ ಸಚಿವರಾಗಿ ಕೆಲಸ ಮಾಡಿ ಆರ್ಥಿಕ ಗುಣಮಟ್ಟವನ್ನು ಉತ್ತಮವಾಗಿಟ್ಟಿದ್ದರು. ಅವರು ಈ ರಾಜ್ಯ ಕಂಡ ಉತ್ತಮ ರಾಜಕಾರಣಿಗಳಲ್ಲಿ ಒಬ್ಬರು ಎಂದು ಕೇಳಿದ್ದೇನೆ. ಇನ್ನು, ಕೆ.ಎಸ್. ಬೀಳಗಿಯವರು, ಅಶ್ವತ್ಥನಾರಾಯಣ ರೆಡ್ಡಿಯವರು, ಶ್ರೀಮತಿ ಬಿ.ಎಲ್. ಸುಬ್ಬಮ್ಮರವರು, ಶ್ರೀ ಜೆ.ಎಲ್. ಕಬಾಡೆಯವರು, ಶ್ರೀ ಕೊಗಳಿ ಕರಿಬ ವನಗೌಡರವರು, ಶ್ರೀ ಎಸ್.ಬಿ. ಮದನಲಾಲ್‌ರವರು, ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿಯವರು, ಶ್ರೀ ಶ್ರೀಧರಾಚಾರ್‌ರವರು, ಶ್ರೀ ಬಿ.ಎಸ್. ರಂಗಾ ಇವರೆಲ್ಲರೂ ಬಹಳ ದೊಡ್ಡ ವ್ಯಕ್ತಿಗಳಾಗಿದ್ದು, ಇವರನ್ನೆಲ್ಲ ಕಳೆದುಕೊಂಡು ಕರ್ನಾಟಕ ರಾಜ್ಯ ನಿಜವಾಗಿಯೂ ಬಡವಾಗಿದೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಮೃತರ ಕುಟುಂಬದವರಿಗೆ ಈ ದುಃಖವನ್ನು ಭರಿಸುವುದಕ್ಕೆ ಹೆಚ್ಚಿನ ಶಕ್ತಿ ಕೊಡಲೆಂದು ಭಗವಂತನಲ್ಲಿ ಕೋರುತ್ತೇನೆ. ಮೈಸೂರಿನ ಕೆರೆ ದುರಂತದ ಬಗ್ಗೆ ಹೇಳುವುದಾದರೆ, ಇದು ಎಂದೂ ಕಂಡರಿಯದಂಥ ದುರಂತವಾಗಿದೆ. ಕೆರೆ ದುರಂತಗಳು ಇದೊಂದೇ ಕಡೆ ಅಲ್ಲ. ಇಡೀ ರಾಜ್ಯದಲ್ಲಿ ಹೋಗುವ ಕಡೆ ವಾಹನಗಳು ಬಿದ್ದು ಹೋಗುವ stageನಲ್ಲಿ ರಸ್ತೆಗಳಿವೆ. ಗುಂಡಿಗಳನ್ನು ಮುಚ್ಚಿಲ್ಲ. ಒಂದೊಂದು ಮಂಡಿಯುದ್ದ ಗುಂಡಿಗಳಿವೆ. ಎಂಎಲ್‌ಎಗಳನ್ನು ಜನರು ಹೀನಾಮಾನವಾಗಿ ಬೈಯ್ಯುತ್ತಾರೆ. ಶಾಸಕರನ್ನು ಬಯ್ಯುವುದನ್ನು ಬಿಟ್ಟಿಲ್ಲ. ದುಃಖಕರವಾದ ಮಾತನ್ನಾಡುವ ಸಂದರ್ಭದಲ್ಲಿ ಆ ಜನರೇನು ದುಃಖವನ್ನನುಭವಿಸುತ್ತಿದ್ದಾರೆ, ಅದನ್ನೂ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ದಯವಿಟ್ಟು, ಆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಿ. ಕರ್ನಾಟಕ ರಾಜ್ಯದಲ್ಲಿ ನೀವು ಏನೂ

ಮಾಡದಿದ್ದರೂ ಪರವಾಗಿಲ್ಲ ಗುಂಡಿ ಮುಚ್ಚಿಸಿ. ಯಾವ ರೋಡ್‌ನಲ್ಲಿ ನೋಡಿ ಒಂದೊಂದು ಮೊಳದುದ್ದ ಗುಂಡಿ ಇದೆ. ನಾವು ದಿವಸ ಅಲ್ಲಿ ಬಯ್ಯಿಸಿಕೊಳ್ಳುವುದನ್ನು ಹೇಳುತ್ತಿದ್ದೇನೆ. ಏಕಾದರೂ ಎಂ.ಎಲ್.ಎ. ಗಳಾಗಿದ್ದೇವೆಂದು ಅನಿಸುತ್ತದೆ. ಜನರು, 'ಈ ರೋಡ್‌ನಲ್ಲಿ ಬಂದಿರಾ? ರೋಡ್ ನೋಡಿಕೊಂಡು ಬಂದಿರಾ? ಎಂದು ಕೇಳುತ್ತಾರೆ. ಕೆರೆಗೆ ಸಕ್ಕರೆ ಲಾರಿ ಬಿದ್ದು ಹೋಯಿತು. ಸ್ತ್ರೀಶಕ್ತಿ ಸಂಘದ ಮಹಿಳೆಯರು, ನಾಚಿಕೆಯಾಗುವುದಿಲ್ಲವೇ ಎಂದು ಕೇಳುತ್ತಾರೆ. ನೀವು ಮಾಡಿರುವ ತಪ್ಪು, ಹಣ ಬಿಡುಗಡೆ ಮಾಡಿಲ್ಲ, ಸರ್ಕಾರ ಮಾಡಿಲ್ಲ, ಸರ್ಕಾರದಿಂದ ಹೀಗಾಗಿದೆ ಎನ್ನುವುದು ಸ್ತ್ರೀಶಕ್ತಿ ಸಂಘದವರಿಗೆ ಗೊತ್ತಾಗಬೇಕಲ್ಲವೇ? ಎಂಎಲ್‌ಎಗಳು ಹಣವನ್ನು ಪ್ರಿಂಟ್ ಮಾಡುತ್ತಾರೆಂದು ಅವರು ತಿಳಿದಿದ್ದಾರೆ. ಆದರೆ, ನೀವು ಪ್ರಿಂಟ್ ಮಾಡಿದ್ದನ್ನು ಎಲ್ಲಿಗೋ ಕಳುಹಿಸುತ್ತೀರಿ. ಕರ್ನಾಟಕ ರಾಜ್ಯದಲ್ಲೇ ಹೀಗಾಗಿದೆ.

ಅಧ್ಯಕ್ಷರು: ಸಂತಾಪ ಸೂಚನೆಯಲ್ಲಿ ಇದೆಲ್ಲ ಏಕೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದೂ ಒಂದು ತರಹದ ದುಃಖಕರ ಸಂಗತಿ ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ಮಾತು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ): ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯದ ಮೇಲೆ ಮಾತನಾಡುತ್ತಾ, ನಿಧನರಾಗಿರುವ ಎಲ್ಲಾ ಗಣ್ಯ ವ್ಯಕ್ತಿಗಳಿಗೆ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು, ನಾನು 1994ರಿಂದ ಜೊತೆಯಲ್ಲಿ ಸತತವಾಗಿ ನಾಲ್ಕನೇ ಬಾರಿ ಆಯ್ಕೆಯಾಗಿ ಬಂದಿದ್ದೆವು. ಅವರು ಅನಿರೀಕ್ಷಿತವಾಗಿ ಕಾಯಿಲೆಗೆ ತುತ್ತಾಗಿ ನಮ್ಮನ್ನಗಲಿದ್ದಾರೆ. ನಿಜವಾಗಲೂ ಅವರು ಸದನದಲ್ಲಿದ್ದಂಥ ಸಂದರ್ಭದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ವಿಶೇಷವಾಗಿ ಅಡಿಕೆ ಬೆಳೆಗೆ ಬಂದ ಸಮಸ್ಯೆ ಇರಬಹುದು, ನುಸಿ ರೋಗಕ್ಕೆ ತುತ್ತಾದ ಸಂದರ್ಭದಲ್ಲಿ ತೆಂಗಿನ ಬೆಳೆಗಾರರು ಅನುಭವಿಸಿದ ಸಂಕಷ್ಟವಿರಬಹುದು, ಇಂಥ ವಿಚಾರಗಳಲ್ಲಿ ಬಹಳ ಪರಿಣಾಮಕಾರಿಯಾಗಿ ಸದನದ ಗಮನ ಸೆಳೆದಂಥದ್ದನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಅವರ ಕ್ಷೇತ್ರದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೂಡ ಶಾಲೆಯನ್ನು ತೆರೆಯುವ ಮುಖಾಂತರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಂಥ ಒಬ್ಬ ಶಾಸಕರಾಗಿದ್ದರು. ಸದಾ ಜನರ ಒಡನಾಟದಲ್ಲಿದ್ದು ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಶಾಸಕರು ಯಾವ ರೀತಿ ಕೆಲಸ ಮಾಡಬೇಕೆನ್ನುವುದಕ್ಕೆ ಅವರೊಬ್ಬ ಆದರ್ಶ ಶಾಸಕರಾಗಿ ಕೆಲಸ

ಮಾಡಿದಂಥವರು ನಮ್ಮನ್ನಗಲಿದ್ದಾರೆ. ಅದೇ ರೀತಿ ಹಿರಿಯರಾದಂಥ ಎಂ.ರಾಜಶೇಖರ ಮೂರ್ತಿಯವರು ಬಹುಶಃ ಪ್ರಥಮ ವಿಧಾನಸಭೆ ಚುನಾವಣೆಯಿಂದ ಅವರ ಕೊನೆಯ ಉಸಿರಿರುವವರೆಗೂ 1978–80 ಎರಡು ವರ್ಷಗಳನ್ನು ಹೊರತುಪಡಿಸಿ ಉಳಿದಂತಹ ಅವರ ಇಡೀ ರಾಜಕೀಯ ಜೀವನದಲ್ಲಿ ಅವರು ವಿಧಾನಸಭೆ, ಲೋಕಸಭೆ, ರಾಜ್ಯಸಭೆ ಸದಸ್ಯರಾಗಿ ರಾಜಕೀಯದ ಜೀವನವನ್ನು ಕಳೆದಂಥವರು. ಹಾಗಾಗಿ, ಇಷ್ಟೊಂದು ಸುದೀರ್ಘವಾಗಿ ರಾಜಕೀಯ ಜೀವನವನ್ನು ನಡೆಸಿದಂಥ ರಾಜಶೇಖರ ಮೂರ್ತಿಯವರು 89ನೇ ಇಳಿವಯಸ್ಸಿನಲ್ಲಿ ನಮ್ಮನ್ನು ಅಗಲಿದ್ದಾರೆ. ಇಲ್ಲಿ ನಾನು ಅವರ ಆಡಳಿತ ಮತ್ತು ವ್ಯಕ್ತಿತ್ವಕ್ಕಿಂತ ಹೆಚ್ಚಾಗಿ ಅವರು ಇವತ್ತಿನ ರಾಜಕಾರಣಿಗಳಿಗೆ ಆದರ್ಶರಾಗಿ ಉಳಿಯುವಂಥ ಒಂದು ಘಟನೆಯನ್ನು ನಾನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಬಹುಶಃ ಇವತ್ತು ರಾಜಕಾರಣಿಗಳು ಎಂದರೆ ಜನ ಅವರನ್ನು ನೋಡುವ ದೃಷ್ಟಿಕೋನವೇ ಬೇರೆಯಾಗಿದೆ. ಅಷ್ಟು ಸುದೀರ್ಘ ರಾಜಕೀಯ ಮಾಡಿದ ವ್ಯಕ್ತಿ ಬಹುಶಃ ಅವರು ಗತಿಸಿದ ಸಂದರ್ಭದಲ್ಲಿ ಅವರ ಅಂತ್ಯ ಸಂಸ್ಕಾರ ಮಾಡುವುದಕ್ಕೆ ಅವರದೇ ಆದಂಥ ಒಂದು ಸ್ವಂತ ಸ್ಥಳವಿರಲಿಲ್ಲವೆನ್ನುವುದನ್ನು ನಾವೇನಾದರೂ ವಿಚಾರ ಮಾಡಿದರೆ ಅವರ ಆದರ್ಶ ಜೀವನ ಯಾವ ರೀತಿ ಇತ್ತು ಎನ್ನುವುದು ತಿಳಿಯುತ್ತದೆ. ಮಾಲಂಗಿಯಲ್ಲಾಗಲಿ, ಮೈಸೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಸ್ವಂತದ ಒಂದು ಎಕರೆ, ಜಮೀನನ್ನು ಅವರು ಹೊಂದಿರಲಿಲ್ಲವೆನ್ನುವುದನ್ನು ಇಲ್ಲಿ ಗಮನಿಸಬೇಕು. ಅವರ ಅಂತ್ಯ ಸಂಸ್ಕಾರ ಚಾಮರಾಜಪೇಟೆಯ ವೀರಶೈವ ರುದ್ರಭೂಮಿಯಲ್ಲಿ ಮಾಡಬೇಕೆನ್ನುವ ಸಂದರ್ಭ ಬಂದಾಗ, ಅವರ ಕೊನೆಯ ಒಂದು ವರ್ಷದ ಹಿಂದೆ ಏನೊಂದು ಆಸೆ ಇತ್ತು. ಪ್ರಜಾಪ್ರಭುತ್ವದ ಉಳಿವಿಗೆ ಮತ್ತು ಒಬ್ಬ ಸತ್ಪ್ರಜೆಯಾಗಿ ಒಬ್ಬ ಬದುಕನ್ನು ನಡೆಸಬೇಕಾದರೆ ಈ ದೇಶದಲ್ಲಿ ಅವನಿಗೆ ಉತ್ತಮವಾದ ಶಿಕ್ಷಣ ಬಾಲ್ಯದಿಂದ ಬರಬೇಕು; ಮತ್ತೆ ಅವನಿಗೆ ಆಧ್ಯಾತ್ಮಿಕವಾದ ಶಿಕ್ಷಣ ಇರಬೇಕು, ಅದರ ಜೊತೆಗೆ ದೈಹಿಕ ಶಿಕ್ಷಣ ಕೂಡ ಒಬ್ಬ ವ್ಯಕ್ತಿಗೆ ಬಹಳ ಅವಶ್ಯಕ; ಆ ರೀತಿಯಲ್ಲಿದ್ದಾಗ ಮಾತ್ರ ಅವನು ಒಬ್ಬ ಸತ್ಪ್ರಜೆಯಾಗಿ ತನ್ನ ಬದುಕನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ; ಆ ನಿಟ್ಟಿನಲ್ಲಿ ಅವರ ಒಂದು ಜೀವತಾವಧಿಯಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಬೇಕೆನ್ನುವ ಕಳಕಳಿ ಅವರಿಗಿತ್ತು. ಹೀಗಾಗಿ ಮುರುಘ ರಾಜೇಂದ್ರ ವಿದ್ಯಾ ಸಂಸ್ಥೆ ಅಂತ ಹೇಳಿ, ಚಾಮರಾಜನಗರ ಜಿಲ್ಲೆಯ ಮರಿಯಾಲ ಗ್ರಾಮದಲ್ಲಿ, ಒಂದು ಮಠಕ್ಕೆ ಸೇರಿದಂಥ ಜಾಗದಲ್ಲಿ ಒಂದು ಸಂಸ್ಥೆಯನ್ನು ಪ್ರಾರಂಭ

ಮಾಡುವುದಕ್ಕೆ ಕೊನೆಯ ಒಂದು ವರ್ಷದ ಹಿಂದೆ ಅವರು ಎಲ್ಲಾ ರಾಜಕೀಯ ಚಟುವಟಿಕೆಗಳನ್ನು ದೂರ ಮಾಡಿ ಅದಕ್ಕಾಗಿ ತಮ್ಮ ಪೂರ್ಣ ಕಾಲವನ್ನು ವಿನಿಯೋಗ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರ ಕೊನೆಯ ಆಸೆಯಾಗಿ ಈ ಸಂಸ್ಥೆಯನ್ನು ಸ್ಥಾಪಿಸಿ ಮುಂದುವರಿಯಬೇಕು ಎನ್ನುವುದೇನಿತ್ತೋ ಅಲ್ಲಿಯೇ ಅವರ ಅಂತ್ಯಸಂಸ್ಕಾರ ಮಾಡತಕ್ಕಂಥ ಕೆಲಸವನ್ನು ಅವರ ಎಲ್ಲಾ ಅಭಿಮಾನಿಗಳು ಮತ್ತು ಶ್ರೀ ಮಠದ ಸ್ವಾಮೀಜಿಯವರು ಅಪೇಕ್ಷೆಪಟ್ಟು ಅಲ್ಲಿ ಅವರ ಅಂತ್ಯ ಸಂಸ್ಕಾರವನ್ನು ಮಾಡಿದರು. ಅವರ ವಾಸದ ಮನೆ ಬೆಂಗೂರಿನಲ್ಲಿರುವುದು ಹೊರತುಪಡಿಸಿದರೆ ಬೇರೆ ಯಾವುದೇ ಆಸ್ತಿಯನ್ನು ಹೊಂದಿರದೇ ಇರತಕ್ಕಂಥ, ಇಷ್ಟೊಂದು ಸುದೀರ್ಘ ಕಾಲ ರಾಜಕೀಯ ನಡೆಸಿರತಕ್ಕಂಥ ಒಬ್ಬ ವ್ಯಕ್ತಿ ನಮ್ಮಲ್ಲಿದ್ದರು ಎನ್ನುವುದನ್ನು ನಾವು ಇವತ್ತು ಗಮನಿಸಬೇಕಾದ ವಿಚಾರ. ಹೀಗಾಗಿ ಅವರ ಆಲೋಚನೆಗಳಲ್ಲಿ ಯಾವತ್ತೂ ಕೂಡ ಒಂದು ಶಿಸ್ತು, ಒಂದು ಆದರ್ಶ, ಒಂದು ಸಿದ್ಧಾಂತಕ್ಕೆ ಒಳಪಟ್ಟಿರುವ ವಿಚಾರಗಳೇ ಅಡಗಿರುತ್ತಿದ್ದವು. ನಾವು ಅನೇಕ ಸಲ ಅವರನ್ನು ಭೇಟಿ ಮಾಡಿದಾಗ, ಅವರ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಯಾರೋ ಒಬ್ಬ ಪ್ರೊಫೆಸರ್ ಹತ್ತಿರ ಕುಳಿತುಕೊಂಡು ಯಾವುದೋ ವಿಚಾರಗಳನ್ನು ಚರ್ಚೆ ಮಾಡುತ್ತಿದ್ದೇವೆ ಎನ್ನುವ ರೀತಿಯಲ್ಲಿ ಅವರ ವಿಚಾರಧಾರೆಗಳನ್ನು ತಿಳಿಸುತ್ತಿದ್ದರು. ದೇಶದ ವಿಚಾರ ಇರಬಹುದು, ಅಂತರರಾಷ್ಟ್ರೀಯ ವಿಚಾರ ಇರಬಹುದು, ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ವಿಚಾರಗಳಿರಬಹುದು, ಅವರು ಅನೇಕ ವಿಚಾರಗಳನ್ನು ಗಂಟೆಗಟ್ಟಲೆ ನಿರರ್ಗಳವಾಗಿ ತಲೆಗೆ ತುಂಬುವಂಥ ಕೆಲಸವನ್ನು ಯಾವುದೇ ಪಕ್ಷದವರು ಹೋಗಲಿ, ಯಾವುದೇ ಒಬ್ಬ ವ್ಯಕ್ತಿ ಹೋಗಲಿ, ಅವರಿಗೆ ಹೇಳತಕ್ಕಂಥ ಕೆಲಸ ಮಾಡುತ್ತಿದ್ದರು. ಇದನ್ನೆಲ್ಲಾ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತರಬೇಕು ಎನ್ನುವ ಅಭಿಪ್ರಾಯವನ್ನು ನಾವು ಅವರಿಗೆ ಸೂಚಿಸಿದಾಗಲೂ ಕೂಡ ಅವರು "ಗಾಂಧಿಯಂಥವರನ್ನೇ ಈ ದೇಶದಲ್ಲಿ ಮರೆಯುವಂಥ ಸನ್ನಿವೇಶ ಇರುವಾಗ, ನನ್ನ ಅಭಿಪ್ರಾಯಗಳನ್ನು ಈ ದೇಶದಲ್ಲಿ ಎಲ್ಲಿ ಗಮನಿಸುತ್ತಾರೆ? ಅದರಿಂದ ಏನೂ ಪ್ರಯೋಜನವಾಗುವುದಿಲ್ಲ" ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದರು. ಹೀಗಾಗಿ ಅವರ ಅಂತ್ಯಸಂಸ್ಕಾರ ನಡೆದಂಥ ಸ್ಥಳ ಏನಿದೆ, ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಅವರ ನಿಧನದ ಸಂದರ್ಭದಲ್ಲಿ ಮೃತರ ಅಂತಿಮ ದರ್ಶನಕ್ಕೆ ಹೋಗಿದಂಥ ಸಂದರ್ಭದಲ್ಲಿ ಮೂರು ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಬಸವರಾಜ

ಬೊಮ್ಮಾಯಿರವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕುಳಿತಿದ್ದೀರಿ ತಾವು ಸ್ವಲ್ಪ ಇದನ್ನು ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಮೂರು ಕೋಟಿ ರೂಪಾಯಿಗಳನ್ನು, ಆ ಮುರುಘ ರಾಜೇಂದ್ರ ವಿದ್ಯಾ ಸಂಸ್ಥೆ ಸ್ಥಾಪಿಸಬೇಕೆನ್ನುವ ಅವರ ಕೊನೆಯ ಆಸೆ ಏನಿತ್ತು. ಅವರ ಆಸೆ ಈಡೇರಿಸತಕ್ಕಂಥ ರೀತಿಯಲ್ಲಿ ಸರ್ಕಾರ ಸ್ಪಂದಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹೀಗಾಗಿ ಅವರ ಕೊನೆಯ ಆಸೆ ಏನಿತ್ತು ಪ್ರಜಾಪ್ರಭುತ್ವದ ಮರುಸ್ಥಾಪನೆಯ ಯಶಸ್ಸಿಗೆ ಶಿಕ್ಷಣ ಕ್ಷೇತ್ರಗಳಲ್ಲಿ ಮೌಲ್ಯ ಹೆಚ್ಚಬೇಕು ಮತ್ತು ಸಮಾಜದಲ್ಲಿ ಒಳ್ಳೆಯ ಪ್ರಜೆಯಾಗಲು ಅವನಿಗೆ ಆಧ್ಯಾತ್ಮಿಕ ಶಿಕ್ಷಣ, ಬೌದ್ಧಿಕ ಶಿಕ್ಷಣ, ದೈಹಿಕ ಶಿಕ್ಷಣ, ಈ ಮೂರು ಕೂಡ ಬಹಳ ಪ್ರಮುಖವಾದಂಥವುಗಳು. ಈ ಮೂರನ್ನೊಳಗೊಂಡ ಒಂದು ಶಿಕ್ಷಣ ಸಂಸ್ಥೆಯಾಗಬೇಕು. ಏಕೆಂದರೆ, ಗುರುಕುಲ ಮಾದರಿಯಲ್ಲಿ ಶಿಕ್ಷಣ ನೀಡಿದರೆ ನಮ್ಮಲ್ಲಿ ಉತ್ತಮ ಪ್ರಜೆಗಳನ್ನು ರೂಪಿಸುವುದಕ್ಕೆ ಸಾಧ್ಯ ಎನ್ನುವುದು ಅವರ ಕಳಕಳಿಯಿತ್ತು. ಆ ಒಂದು ದೃಷ್ಟಿಯಿಂದ ಆ ಸಂಸ್ಥೆಗೇನು ಸರ್ಕಾರ ಘೋಷಣೆ ಮಾಡಿದೆ ಅದನ್ನು ಕೂಡಲೆ ಬಿಡುಗಡೆ ಮಾಡತಕ್ಕಂಥ ಕೆಲಸ ಮಾಡಬೇಕು. ಸುಮಾರು ಹತ್ತು ಕೋಟಿ ರೂಪಾಯಿಯ ಯೋಜನೆಯನ್ನು ಅವರು ಹೊಂದಿದ್ದರು. ಅದು ಪೂರ್ಣಗೊಳ್ಳುವುದಕ್ಕೆ ಸರ್ಕಾರ ಸಹಕಾರಿಯಾಗಬೇಕು. ಆಗ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಮೈಸೂರು-ನಂಜನಗೂಡು ರಸ್ತೆಯ ಬಳಿಯಿರತಕ್ಕಂಥ ಮೂರು ನಾಲ್ಕು ಕೆರೆಗಳು ದಾರಿಯಲ್ಲಿ ಸಿಗುತ್ತವೆ. ಅದರಲ್ಲಿ ಉಂಡಬತ್ತಿನ ಕೆರೆಯಲ್ಲಿ ದುರಂತ ಸಂಭವಿಸಿ ಸುಮಾರು ಮೂವತ್ತೊಂದು ಜನ ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕೆ ಒಂದು ಕಡೆ ಆ ರಸ್ತೆ ಅಗಲೀಕರಣವಾಗದಿರುವುದು ಒಂದು ಕಾರಣವಾದರೆ ಈ ಸಾರಿಗೆ ಇಲಾಖೆ ಏನು ಇದೆ, ಈ ಮೆಟಡೋರ್, ಟೆಂಪೊಗಳು ಏನು ಇವೆ... ಈ ತರಹ ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ಹರಟೆ ಹೊಡೆದರೆ, ನಾವು ಇಲ್ಲಿ ಈ ಸಂತಾಪ ಸೂಚನೆಯ ಮೇಲೆ ಮಾತನಾಡಿದರೆ ಏನು ಪ್ರಯೋಜನ?

ಅಧ್ಯಕ್ಷರು: ಈಗ ಸಂತಾಪ ಸೂಚನೆ. Please.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ನಮ್ಮವರ ಜೊತೆಗೆ ನಿಮ್ಮ ಸಚಿವರಿಗೆ ಗಂಭೀರತೆ ಇರಬೇಕಲ್ಲ? ಸದಸ್ಯರಿಗೆ ಇರಲಿ, ಸಚಿವರಾದವರಿಗೆ ಸದನದಲ್ಲಿ ಗಂಭೀರವಾಗಿ ಕೂರದಿದ್ದರೆ, ಬೇರೆಯವರಿಗೇನು ಹೇಳುವುದಕ್ಕೆ

ಬರುತ್ತದೆ? ಇದರಲ್ಲಿ ಟ್ರಾನ್ಸ್‌ಪೋರ್ಟ್ ಇಲಾಖೆಯ ವೈಫಲ್ಯಗಳು ಬಹಳ ಹೆಚ್ಚಿವೆ. ಏಕೆ ಈ ರೀತಿಯ ಅಪಘಾತಗಳಾಗುತ್ತವೆ ಎಂದರೆ, ಲೈಸನ್ಸ್ ಇಲ್ಲದೆ ಆ ಕ್ಲೀನರ್‌ಗಳು ಟೆಂಪೊಗಳನ್ನು ಓಡಿಸತಕ್ಕಂಥದ್ದು, ಹದಿನೈದು ಜನ ಕೆಪಾಸಿಟಿ ಇರುವಂಥದ್ದಕ್ಕೆ ಮೂವತ್ತು ಜನರನ್ನು ತುಂಬಿಸಿಕೊಂಡು ಓವರ್ ಲೋಡ್ ಮಾಡಿಕೊಂಡು ಹೋಗುವಂಥದ್ದು. ಪ್ರತಿ ವರ್ಷ ಪ್ರತಿಯೊಂದು ವೆಹಿಕಲ್‌ಗೆ ಎಫ್.ಸಿ. ಮಾಡಬೇಕು. ಫಿಟ್‌ನೆಸ್ ಸರ್ಟಿಫಿಕೇಟ್ ಇಲ್ಲದೇ ವೆಹಿಕಲ್ಸ್ ಓಡಿಸಬಾರದು. ಇವುಗಳಿಗೆ ಎರಡು–ಮೂರು ವರ್ಷಗಳಾದರೂ ಎಫ್.ಸಿ. ಆಗಿರುವುದಿಲ್ಲ. ಹೀಗಾಗಿ ಆರ್.ಟಿ.ಓ.ಗಳ ಕೆಲಸದಲ್ಲಿ ಆಗತಕ್ಕಂಥ ನಿರ್ಲಕ್ಷ್ಯ ಇಂಥ ಅಪಘಾತಗಳಿಗೆ ಕಾರಣವಾಗುತ್ತದೆ. ಓವರ್ ಲೋಡ್ ಹಾಕತಕ್ಕಂಥದ್ದು, ಡ್ರೈವಿಂಗ್ ಲೈಸೆನ್ಸ್ ಇಲ್ಲದಿದ್ದರೂ ವೆಹಿಕಲ್ಸ್ ಓಡಿಸತಕ್ಕಂಥದ್ದು, ಈ ಕೆರೆಯ ಅಕ್ಕಪಕ್ಕದಲ್ಲಿ ರಸ್ತೆ ಕಿರಿದಾಗಿರತಕ್ಕಂಥದ್ದು ಕೂಡ ಇಂಥ ಘಟನೆಗೆ ಕಾರಣವಾಗುತ್ತದೆ. ಇದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ಮುಂದೆ ಇಂಥ ಅನಾಹುತಗಳು ಆಗದೇ ಇರುವ ಹಾಗೆ ಅದನ್ನು ತಡೆಗಟ್ಟತಕ್ಕಂಥ ಕೆಲಸವನ್ನು ಮಾಡಿದಾಗ, ಇಂಥ ಅನಾಹುತಗಳನ್ನು ತಪ್ಪಿಸಬಹುದು ಎಂದು ಹೇಳಿ, ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿರುವ ಎಲ್ಲಾ ಮಹನೀಯರಿಗೆಲ್ಲಾ ಸಂತಾಪ ವ್ಯಕ್ತಪಡಿಸಿ ನನ್ನ ಮಾತು ಮುಗಿಸುತ್ತೇನೆ.

ಡಾ: ವೈ.ಸಿ. ವಿಶ್ವನಾಥ್ (ಕಡೂರು): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದ ಅಗಲಿದ ಚೇತನಗಳ ಸಂತಾಪ ಸೂಚಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನನ್ನ ಸನ್ಮಿತ್ರರಾದ ದಿವಂಗತ ಕೃಷ್ಣ ಮೂರ್ತಿಯವರ ಆಕಾಲಿಕ ಮರಣ ನನ್ನ ಕ್ಷೇತ್ರದಲ್ಲಿ ಬಹಳ ಆಘಾತಕಾರಿಯಾದ ಪರಿಣಾಮವನ್ನುಂಟು ಮಾಡಿತ್ತು. ನಾನು ಅಂದುಕೊಳ್ಳುತ್ತಿದ್ದೆ, ನಾನು ವೈದ್ಯನಾಗಿ ಅವರ ಖಾಯಿಲೆಯ ತೀವ್ರತೆ ನನಗೆ ಗೊತ್ತಾದಾಗ ಆಗಾಗ ನಾನು ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡುತ್ತಿದ್ದೆ. ಆಗ ಅವರು, 'ಡಾಕ್ಟರೆ, ಹೇಗಿದೆ ನನ್ನ ಪರಿಸ್ಥಿತಿ?' ಎಂದು ಕೇಳುತ್ತಿದ್ದರು. ಅವರಿಗೆ ಸ್ವಲ್ಪ ಸ್ವಲ್ಪ ಅನುಮಾನ ಬಂದಿತ್ತು. ಆದರೂ ಕೂಡ ನಾನು ಅವರಿಗೆ ಧೈರ್ಯ ಹೇಳುತ್ತಾ, ನನ್ನ ಮನಸ್ಸಿನಲ್ಲಿ ನಾನು ಅಂದುಕೊಳ್ಳುತ್ತಿದ್ದೆ, ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ನನ್ನ ಶೇಷಾಯಸ್ಸು ಏನಾದರೂ ಇದ್ದರೆ ಅವರಿಗೊಂದಿಷ್ಟು ಕೊಡಲಿ. ಏಕೆಂದರೆ ನನಗೆ ಅನುಮಾನವಿತ್ತು. ಆ ಒಂದು ಮಹತ್ತರವಾದ ಜವಾಬ್ದಾರಿ ನನ್ನ ಮೇಲೆ ಎಲ್ಲಿ ಬಂದು ಬಿಡುತ್ತದೆಯೋ ಎನ್ನುವ ಅನುಮಾನವಿತ್ತು. ಆ ರೀತಿಯಲ್ಲಿ ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ನಾವು ಅವರು ಮೂರು ಸಾರಿ, 1999, 2005, 2008ರ

ಚುನಾವಣೆಗಳಲ್ಲಿ ಸ್ಪರ್ಧಿಸಿ ಅವರು ಗೆದ್ದ ಮೇಲೆ ನಮ್ಮ ಕ್ಷೇತ್ರದಲ್ಲಿ ಬಂದಾಗ, ಡಾಕ್ಟರ್‌ರವರನ್ನು ಕರೆಯಿರಿ ಎಂದು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಏಕೆಂದರೆ, 1990ನೇ ಇಸವಿಯಿಂದಲೂ ಕೂಡ ನಾನು ಅವರ ಕುಟುಂಬ ವೈದ್ಯ. ಹೀಗಾಗಿ ನಮಗೆ ರಾಜಕೀಯದಲ್ಲಿ ಬೇರೆ ಬೇರೆ ಚಿಂತನೆಗಳಿದ್ದರೂ ಕೂಡ ವೈಯಕ್ತಿಕವಾದ ಸಂಬಂಧ ನಮಗೆ ಮತ್ತು ಅವರಿಗೆ ಬಹಳ ಇತ್ತು. ಏಕೆಂದರೆ, ನಾವು ಸಮವಯಸ್ಕರು ಹಾಗೂ ಸಮಾನ ವಯಸ್ಕರು. 1968-69ರಲ್ಲಿ ಮೈಸೂರಿನಲ್ಲಿ ನಾವು ಶಿವಮೊಗ್ಗ ಚಿಕ್ಕಮಗಳೂರು ಅಸೋಸಿಯೇಷನ್ ಮಾಡಿದೆವು. ಅಂದಿನಿಂದಲೂ ಕೂಡ ನಾನು ಅವರ ಜೊತೆಯಲ್ಲಿ ಒಡನಾಡಿದ್ದೇನೆ. ಕ್ಷೇತ್ರದಲ್ಲಿಯೂ ಕೂಡ ಅವರು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಶಿಕ್ಷಣ ಕ್ಷೇತ್ರವಾಗಿರಬಹುದು, ಆರೋಗ್ಯ ಕ್ಷೇತ್ರದಲ್ಲಿರಬಹುದು, ಕಡೂರು ಬೀರೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಅವರ ಕನಸು, ಇಂದು ನನಸಾಗುತ್ತಿದೆ. ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಬೇಕಾಗಿದೆ. ಅವರ ಒಂದು ಕನಸು ಏನಿತ್ತು ಅದನ್ನು ನನಸು ಮಾಡಲು ನಾನು ನನ್ನ ಉಳಿದ ಅವಧಿಯನ್ನು ಮೀಸಲಾಗಿಡುತ್ತೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿಯಾಗಿ ರಾಜಶೇಖರ ಮೂರ್ತಿಯವರು. ನಾನು ಮೈಸೂರಿನಲ್ಲಿದ್ದಾಗ ಭ್ರಮರಾಂಬ ಬಸ್ಸುಗಳು ಇತ್ತೆಂದು ಕಾಣುತ್ತದೆ. ನಾನು ವಿದ್ಯಾರ್ಥಿದಿಶೆಯಲ್ಲಿದ್ದಾಗ ಅವರ ಪ್ರಚಾರ ಕಾರ್ಯಕ್ಕೆ ಹೋಗುತ್ತಿದ್ದೆವು. ಅವರೂ ಕೂಡ ತಮಗೆ ತಿಳಿದ ಹಾಗೆ ಬಹಳ ಸಮರ್ಥವಾದ ಆರ್ಥಿಕ ಮಂತ್ರಿ ಹಾಗೂ ನಿಷ್ಠುರವಾದಿಯಾಗಿದ್ದರು ಎನ್ನುವ ಅಂಶವನ್ನು ಕೇಳಿದ್ದೇನೆ. ಅವರು ವೀರೇಂದ್ರ ಪಾಟೀಲ್‌ರವರ ನೇತೃತ್ವದ ಸಂಪುಟದಲ್ಲಿ ಮಂತ್ರಿಯಾಗಿದ್ದ ಅವಧಿಯಲ್ಲಿ ಬಹಳ ಸಮರ್ಥವಾಗಿ ನಮ್ಮ ರಾಜ್ಯವನ್ನು ಚೆನ್ನಾಗಿ ನಡೆಸಿಕೊಂಡು ಹೋದರು ಎಂಬುದನ್ನು ಕೇಳಿದ್ದೇನೆ. ಇವರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಬಯಸುತ್ತಿದ್ದೇನೆ.

12.30 ಪಿಎಂ

ಶ್ರೀಮತಿ ಬಿ.ಎಲ್. ಸುಬ್ಬಮ್ಮರವರ ಬಗ್ಗೆ ಹೇಳುವುದಾದರೆ, 1952ರಲ್ಲಿ ನಮ್ಮ ಅಜ್ಜರಾಗಿದ್ದ ಶ್ರೀ ವೈ.ಎಂ. ಚಂದ್ರಶೇಖರಯ್ಯನವರು ಕಡೂರು ಕ್ಷೇತ್ರದಿಂದ ಶಾಸಕರಾಗಿದ್ದರು. ಆ ಸಂದರ್ಭದಲ್ಲಿ ಅಭಿವೃದ್ಧಿ ಕೆಲಸದ ಬಗ್ಗೆ ಬಿ.ಎಲ್. ಸುಬ್ಬಮ್ಮರವರು ಅವರ ಜೊತೆಯಲ್ಲಿ ಮಾತನಾಡುತ್ತಿದ್ದಾಗ ನಾನು ಅವರುಗಳ ಮಾತುಗಳನ್ನು ಕೇಳುತ್ತಿದ್ದೆ. ನಾನು ಆಗ ಸುಮಾರು ಐದಾರು ವರ್ಷದ

ಹುಡುಗನಾಗಿದ್ದೆ. ಕಡೂರು-ಚಿಕ್ಕಮಗಳೂರಿಗೆ ಸಿಮೆಂಟ್ ರಸ್ತೆ ಆಗಬೇಕೆಂಬ ಹೋರಾಟವನ್ನು ಅವರು ಆ ಸಂದರ್ಭದಲ್ಲಿ ಮಾಡಿದ್ದರು. ಚಿಕ್ಕಮಗಳೂರಿಗೆ ರೈಲಿನ ವ್ಯವಸ್ಥೆ ಇಲ್ಲದೆ ಇರುವುದರಿಂದ ಕಡೂರು-ಚಿಕ್ಕಮಗಳೂರಿಗೆ ಸಿಮೆಂಟ್ ರಸ್ತೆಯನ್ನು ಮಾಡಿ ಕೊಡಲೇಬೇಕೆಂಬ ಅಗ್ರಹವನ್ನು ಮಾನ್ಯ ನಿಜಲಿಂಗಪ್ಪನವರ ಮುಂದಿಟ್ಟು ಮೊದಲನೆ ಬಾರಿಗೆ ಕಡೂರು-ಚಿಕ್ಕಮಗಳೂರಿಗೆ ಸಿಮೆಂಟ್ ರಸ್ತೆಯನ್ನು ಮಾಡಿಸಿದರು. ಹಾಗೆಯೇ ಅವರು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಚಿಕ್ಕಮಗಳೂರು ಕ್ಷೇತ್ರದಲ್ಲಿ ಮಾಡಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲೆಂದು ಹೇಳುತ್ತೇನೆ.

ಡಾ: ಪುಟ್ಟರಾಜ ಗವಾಯಿಗಳು ಆ ಭಾಗದಲ್ಲಿ ನಡೆದಾಡುವ ದೇವರು ಮತ್ತು ಹಾಡುವ ದೇವರಾಗಿದ್ದರು. ಶರಣರು ಮಾಡಿರುವ ಕೆಲಸಗಳನ್ನು ಅವರ ಮರಣದಲ್ಲಿ ನೋಡು ಎನ್ನುವ ಹಾಗೆ ಅವರು ದೈವಾಧೀನರಾದ ದಿವಸ ಸೇರಿದಂಥ ಜನಸ್ತೋಮ ನೋಡಿದರೆ ಅವರ ಜನಪ್ರಿಯತೆ ಮತ್ತು ಅವರ ಸಮಾಜಕ್ಕೆ ಮಾಡಿದಂಥ ಸೇವೆ ಎಷ್ಟು ಎನ್ನತಕ್ಕಂಥದ್ದು ನಮ್ಮ ಗಮನಕ್ಕೆ ಬರುತ್ತದೆ. ಇವತ್ತಿನ ದಿವಸ ಪತ್ರಿಕಾ ರಂಗದಲ್ಲಿ ಮತ್ತು ಚಿತ್ರರಂಗದಲ್ಲಿ ಸೇವೆ ಮಾಡಿರತಕ್ಕಂಥವರನ್ನು ಹಾಗೂ ಶ್ರೀ ಕೆ.ಎಸ್. ಬೀಳಗಿರವರು ಮತ್ತು ಶ್ರೀ ಜೆ.ಎಲ್. ಕಬಾಡೆಯವರನ್ನು ಕಳೆದುಕೊಂಡಿದ್ದೇವೆ. ಮತ್ತೆ ಮೈಸೂರು-ನಂಜನಗೂಡು ರಸ್ತೆಯಲ್ಲಿರುವ ಕೆರೆ ದುರಂತದಲ್ಲಿ ದುರ್ಮರಣಕ್ಕೀಡಾಗಿರುವ ಅಮಾಯಕ ರೈತರೆಲ್ಲರ ಆತ್ಮಕ್ಕೆ ನಾನು ಚಿರಶಾಂತಿಯನ್ನು ಕೋರುತ್ತಾ ಇವತ್ತಿನ ದಿವಸ ಅಮಾಯಕ ರೈತರ ಮರಣದ ಬಗ್ಗೆ ಅನೇಕ ಸೂಚನೆಗಳನ್ನು ನಮ್ಮ ಹಿರಿಯರು ಕೊಟ್ಟಿದ್ದಾರೆ. ಅವರ ಸೂಚನೆಗಳ ಜೊತೆಗೆ ನನ್ನ ಅಭಿಪ್ರಾಯ ಏನೆಂದರೆ, ರಸ್ತೆಗಳನ್ನು diversion ಮಾಡತಕ್ಕಂಥದ್ದು ಒಳ್ಳೆಯದು. ರಸ್ತೆ ಅಗಲೀಕರಣ ಅಥವಾ ತಡೆಗೋಡೆ ಅಥವಾ humps ಹಾಕತಕ್ಕಂಥದ್ದು ಅಥವಾ ಗುಂಡಿ ಮುಚ್ಚತಕ್ಕಂಥ ಕೆಲಸ ಇರಬಹುದು. ಆದರೆ, ಇವುಗಳ ಜೊತೆಗೆ ಕೆರೆ ಏರಿಯ ಮೇಲೆ ಇರುವ ರಸ್ತೆಗಳನ್ನು diversion ಮಾಡತಕ್ಕಂಥದ್ದು ಒಳ್ಳೆಯದು. ಅಂದರೆ, ಕೆರೆ ಏರಿಯ ಮೇಲೆ ರಸ್ತೆಯನ್ನು ತೆಗೆದುಕೊಂಡು ಹೋಗುವ ಬದಲು ಕೆರೆಯ ಪಕ್ಕದಲ್ಲಿ ರಸ್ತೆಯನ್ನು ತೆಗೆದುಕೊಂಡು ಹೋಗುವುದು ಒಳ್ಳೆಯದೆಂದು ಹೇಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಅಧ್ಯಕ್ಷರು: ಕೊನೆಯದಾಗಿ ಮಾನ್ಯ ನರೇಂದ್ರ ಬಾಬುರವರು ಮಾತನಾಡಿ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್): ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನೆಗೆ ಸಹಮತವನ್ನು ನಾನು ವ್ಯಕ್ತಪಡಿಸುತ್ತಾ ದಿವಂಗತ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅವಕಾಶಗಳು ನನಗೆ ಹಲವಾರು ಬಾರಿ ಒದಗಿ ಬಂದಿತ್ತು. ನನ್ನ ಕ್ಷೇತ್ರದಲ್ಲಿರುವ ಆಸ್ಪತ್ರೆಯಲ್ಲಿ ಶ್ರೀಯುತರು ದಾಖಲಾಗಿದ್ದಂಥ ಸಂದರ್ಭದಲ್ಲಿ ನಾನು ಅವರನ್ನು ಭೇಟಿ ಮಾಡಿದಾಗ ಅವರು ಸಾವಿನ ಅಂಚಿನಲ್ಲಿದ್ದರೂ ಸಹ ಹಸನ್ಮುಖದಿಂದ' ನೀವು ಏನೇ ಕೆಲಸ ಮಾಡಿ, ಆದರೆ, ನಿಮ್ಮ ಆರೋಗ್ಯದ ಬಗ್ಗೆ ಸ್ವಲ್ಪ ಗಮನ ಇರಲಿ ಎಂದು ಒಂದು ಮಾತನ್ನು ಹೇಳಿದ್ದರು. ಈ ಮಾತನ್ನು ನಾನು ಮರೆಯುವುದಕ್ಕೆ ಆಗುವುದಿಲ್ಲ. ನಾನು ಮತ್ತೆ ಅವರನ್ನು ಇನ್ನೊಂದು ಸಾರಿ ನೋಡುವುದಕ್ಕೆ ಹೋದಾಗ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಸಾರ್ವಜನಿಕ ಜೀವನದಲ್ಲಿ ಅವರು ಆರೋಗ್ಯದ ಬಗ್ಗೆ ಲಕ್ಷ್ಯ ಕೊಡದೆ ಇದ್ದುದ್ದರಿಂದ ಈ ಸ್ಥಿತಿಗೆ ಅವರು ಆರೋಗ್ಯವನ್ನು ತಂದುಕೊಂಡರೆಂದು ಅವರ ಶ್ರೀಮತಿಯವರು ನನ್ನ ಹತ್ತಿರ ದುಃಖವನ್ನು ವ್ಯಕ್ತಪಡಿಸಿದರು. ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಅವರು ಅಜಾತಶತ್ರುವಾಗಿ ಮತ್ತು ಒಬ್ಬ ಸ್ನೇಹ ಜೀವಿಯಾಗಿ ತನ್ನ ಕ್ಷೇತ್ರದ ಜನರ ಬಗ್ಗೆ ಮತ್ತು ಸಮಾಜದ ಸಮಸ್ಯೆಗಳ ಒಬ್ಬ ಎಷ್ಟು ಆಳವಾಗಿ ಒಳ ಹೊಕ್ಕಿದ್ದರು ಎಂಬ ಬಗ್ಗೆ ಅವರೊಬ್ಬರು ಜೀವಂತ ಸಾಕ್ಷಿಯಾಗಿದ್ದರು. ಅವರನ್ನು ನಾವು ಇವತ್ತಿನ ದಿವಸ ಕಳೆದುಕೊಂಡಿದ್ದೇವೆ. ಅವರ ಅಗಲಿಕೆಯ ಶೂನ್ಯವನ್ನು ತುಂಬಕ್ಕಂಥದ್ದು ಮತ್ತು ಈ ಸಮಾಜಕ್ಕೆ ಅವರು ಕೊಟ್ಟಿರುವಂಥ ಕೊಡುಗೆ ಮತ್ತು ಅವರು ನಡೆದಿರುವಂಥ ನಡಿಗೆ ನಮಗೆಲ್ಲಾ ಆದರ್ಶವಾಗಿರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಮಾನ್ಯ ಎಂ. ರಾಜಶೇಖರ ಮೂರ್ತಿಯವರ ಬಗ್ಗೆ ಹೇಳುವುದಾದರೆ, ಶ್ರೀಯುತರು ಕರ್ನಾಟಕ ಕಂಡಂಥ ಒಬ್ಬ ಅಪರೂಪದ ಅರ್ಥ ಸಚಿವರಾಗಿದ್ದರು. ಅವರು ಅರ್ಥ ಸಚಿವರಾಗಿದ್ದಂಥ ಅಲ್ಪಾವಧಿಯಲ್ಲಿ ಸಂಪನ್ಮೂಲ ಕ್ರೋಢೀಕರಣಕ್ಕೆ ಕೊಟ್ಟಂಥ ಒತ್ತು ಮತ್ತು ಅವರ ಕಾರ್ಯದಕ್ಷತೆ ಹಾಗೂ ಅವರ ನೇರವಾದ ನುಡಿ ಮತ್ತು ರಾಜಕೀಯ ಜೀವನದಲ್ಲಿ ನಡೆದಂಥ ಹಾದಿಯಲ್ಲಿ ಬಹುಶಃ ಬಹಳಷ್ಟು ಜನರಿಂದ ಅವರು ನಿಷ್ಠುರವಾಗಿರತಕ್ಕಂಥದ್ದನ್ನು ನಾನು ದೂರದಿಂದ ಗಮನಿಸಿದ್ದೇನೆ. ಬಹುಶಃ ಅವರ finance management ಇವತ್ತಿಗೂ ಕೂಡ ಅನುಕರಣೀಯವಾಗಿದೆ. ಇಂಥ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದು ಕೊಂಡಿದ್ದೇವೆ. ಮಾನ್ಯ ಅಶ್ವತ್ಥನಾರಾಯಣ ರೆಡ್ಡಿಯವರು ಸಹ

ಯಾವುದೇ ಕೆಲಸವನ್ನು ಹಿಡಿದರೂ ಕೂಡ ಅದನ್ನು ಧೈರ್ಯದಿಂದ ಮಾಡಬೇಕೆಂಬ ಹಠದ ವ್ಯಕ್ತಿಯಾಗಿದ್ದರು. ಅವರು ಹೆಚ್ಚು ಬಾರಿ ಆಯ್ಕೆಯಾಗದೆ ಇದ್ದರೂ ಸಹ ಅವರು ಆಯ್ಕೆಯಾದಂಥ ಸಂದರ್ಭದಲ್ಲಿ ಸಮಾಜದ ಬಗ್ಗೆ ಹಾಗೂ ಕ್ಷೇತ್ರದ ಬಗ್ಗೆ ಹೆಚ್ಚು ಒತ್ತಾಸೆಯನ್ನು ಕೊಟ್ಟಿದ್ದರು.

ಪದ್ಮಭೂಷಣ ಡಾ: ಪುಟ್ಟರಾಜ ಗವಾಯಿರವರು ಒಬ್ಬ ಅಂಧರ ಸೂರ್ಯ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಅವರ ಬೆಳಕಿನ ಬದುಕಿನಲ್ಲಿ, ಅವರು ಬಾಲ್ಯದಲ್ಲಿಯೇ ದೃಷ್ಟಿಯನ್ನು ಕಳೆದುಕೊಂಡರೂ ಸಹ ಅವರ ಬದುಕಿನಲ್ಲಿ ದೃಷ್ಟಿಯನ್ನು ಕಳೆದುಕೊಳ್ಳಲಿಲ್ಲ. ಬದುಕಿನ ಉದ್ದಕ್ಕೂ ಹಲವಾರು ಜೀವಕ್ಕೆ ಬೆಳಕಾಗಿ ಸಂಗೀತ ಸುಧೆಯನ್ನು ಎಲ್ಲಾ ಅಸಹಾಯಕರಿಗೆ ಮತ್ತು ಎಲ್ಲರಿಗೂ ಹಂಚಿದಂಥ ಮಹಾನ್ ಒಬ್ಬ ಸಂತರಾಗಿದ್ದಂಥ ಪುಟ್ಟರಾಜ ಗವಾಯಿರವರನ್ನು ಇವತ್ತಿನ ದಿವಸ ನಾವು ಕಳೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಕರ್ನಾಟಕದ ರಾಜಧಾನಿಯಾಗಿರುವ ಬೆಂಗಳೂರು ನಗರದಲ್ಲಿ ರವೀಂದ್ರ ಕಲಾಕ್ಷೇತ್ರ ಮತ್ತು ಪಿಟೀಲ್ ಚೌಡಯ್ಯ ಮೆಮೋರಿಯಲ್ ಹಾಲ್ ಹೇಗಿದೆಯೋ ಅದೇ ರೀತಿಯಲ್ಲಿ ಸಂಗೀತಕ್ಕೆ ಹೆಚ್ಚು ಒತ್ತಾಸೆಯನ್ನು ಕೊಟ್ಟು ಪುಟ್ಟರಾಜ ಗವಾಯಿರವರ ಹೆಸರಿನಲ್ಲಿ ಒಂದು ಕಲಾ ಕ್ಷೇತ್ರವನ್ನು ನಿರ್ಮಾಣ ಮಾಡಿ ಅವರ ಹೆಸರು ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಕೆ. ಶ್ರೀಧರಾಚಾರ್‌ರವರ ಬಗ್ಗೆ ಹೇಳುವುದಾದರೆ, ಶ್ರೀಯುತರು ಮಾನ್ಯ ರಾಮಕೃಷ್ಣ ಹೆಗಡೆ ಮತ್ತು ಮಾನ್ಯ ಜೀವರಾಜ್ ಆಳ್ವರವರ ಜೊತೆಯಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ಹಾಗೂ ಬೇರೆ ಬೇರೆ ಕಡೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಅವರನ್ನು ನಾನು ಗಮನಿಸಿದ್ದೇನೆ. ಅವರು ನಿಷ್ಪಕ್ಷಪಾತವಾಗಿ ಮತ್ತು ಎಲ್ಲರ ಜೊತೆಯಲ್ಲಿ ಬೆರೆಯುವಂಥ ಸ್ವಭಾವದಿಂದ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ.

ಮೈಸೂರು ಕೆರೆ ದುರಂತದ ಬಗ್ಗೆ ಸಂತಾಪ ಸೂಚನೆಯ ಕೊನೆಯಲ್ಲಿ ಸಂತಾಪವನ್ನು ಹೇಳುತ್ತಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಇನ್ನು ಮುಂದೆಯಾದರೂ ಬಸ್ ಅಥವಾ ಟೆಂಪೋ ಟ್ರಾವೆಲರ್ ಆಗಿ ಮುಗ್ಧ ಜೀವಿಗಳನ್ನು ಬಲಿ ಕೊಡತಕ್ಕಂಥದ್ದು ತಪ್ಪಬೇಕು. ಇಂಥ ದುರಂತಗಳು ಸಂಭವಿಸಿದಾಗ ಮಾಧ್ಯಮಗಳ ಮುಖಾಂತರ ತಿಳಿದುಕೊಂಡು ಆತಂಕಕ್ಕೆ ಒಳಗಾಗುತ್ತೇವೆ. ಮತ್ತೆ ಇದರಿಂದ ವ್ಯವಸ್ಥೆಯು ಕೆಡುತ್ತದೆ. ಆದ್ದರಿಂದ, ಸರ್ಕಾರ ಜಿಲ್ಲಾವಾರು ಸಮೀಕ್ಷೆ ಮಾಡಿ ಈ ರೀತಿಯಾದ

ಅಪಘಾತಗಳು ಸಂಭವಿಸಿದ ಹಾಗೆ ಏನು ಮಾಡಬೇಕೆಂಬುದರ ಬಗ್ಗೆ ಮುಂಚಿತವಾಗಿಯೇ ಆದ್ಯತೆ ಮೇರೆಗೆ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರ, ಇದ್ದಾಗ ಮರೆವು ಸತ್ತ ನಂತರ ನೆರವು ಕೊಡತಕ್ಕಂಥನ್ನು ನಿಲ್ಲಿಸಬೇಕು. ನೆರವು ಕೊಡುವುದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಾಗಿ ಇವತ್ತು ಆದ್ಯತೆ ಮೇಲೆ ಅದಕ್ಕೆ finance mobilization ಮಾಡಿ ಯಾವುದೇ ರೀತಿಯ ಅಪಘಾತಗಳು ಸಂಭವಿಸದ ರೀತಯಲ್ಲಿ ಮುಂಜಾಗ್ರತೆ ವಹಿಸಬೇಕೆಂದು ಹೇಳುತ್ತಾ ಈ ಶ್ರದ್ಧಾಂಜಲಿಗೆ ಸಹಮತವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾ ಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು).

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚನೆಯ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 10ನೇ ಜನವರಿ 2011ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).

* * * * *